ಕಲ್ಯಾಣ ಕಿರಣ

ಸಂಪುಟ : ೧೪
ಸಂಚಿಕೆ : ೪
ಆಗಸ್ಟ್ : ೧೯೮೫
ಬಸವ ಶಕೆ : ೮೪೫
ಬೆಲೆ : ೨.೦೦



ಕಲ್ಯಾಣ ಕಿರಣ

ಸಂಪುಟ ೧೪ ಸಂಚಿಕೆ : ೪ ಆಗಸ್ಟ್ ೧೯೮೫ ಬಸವಶಕೆ: ೮೫೬

ಕಿರಣಗನ್ನಡಿ

ಕಲ್ಯಾಣ ಕಿರಣ

ಸಂಪುಟ : ೧೪ ಸಂಚಿಕೆ : ೪ ಬಸವ ಶಕೆ : ೮೫೬ ಆಗಸ್ಟ್, ೧೯೮೫

ಶರಣ ಗೀತ

ನೀನೆ ಅಕಳಂಕ ಗುರು

ಸಕಲಕೆಲ್ಲಕೆ ನೀನೆ ಅಕಳಂಕ ಗುರುವೆಂದು
ನಿಖಿಲ ಶಾಸ್ತ್ರವು ಪೇಳುತಿರಲರಿದೆನು ॥ಪ॥

ಎರಗಂಬಳಿಯ ಸಿದ್ಧ ವರಲಿಂಗ ನಾಮದಿಂ
ಹರನೆ! ನೀನೆನಗೆ ದೀಕ್ಷೆಯು ಮಾಡಿದೆ.
ವರ ಷಡಕ್ಷರಿಯ ದೇವರ ನಾಮದಿಂದೆನಗೆ
ಅರುಹಿದಿರಿ ಶಿವಶಾಸ್ತ್ರದನುಭವವನು ॥೧॥

ಅವರವರ ದರುಶನಕೆ ಅವರವರ ವೇಷದಲಿ
ಅವರವರಿಗೆಲ್ಲ ಗುರು ನೀನೊಬ್ಬನೆ ।
ಅವರವರ ಭಾವಕ್ಕೆ ಅವರವರ ಪೂಜೆಗಂ
ಅವರವರಿಗೆಲ್ಲ ಶಿವ ನೀನೊಬ್ಬನೆ ॥೨॥

ಹೋರಾಟವಿಕ್ಕಿಸಲು ಬೇರಾದೆಯಲ್ಲದೆ
ಬೇರುಂಟೆ ಜಗದೊಳಗೆ ಎಲೆ ದೇವನೆ ।
ಆರು〃ಅರಿಯರು ನೀನು ಬೇರಾದ ಪರಿಗಳನು
ಮಾರಾರಿ ಶಿವ ಷಡಕ್ಷರಿ ಲಿಂಗವೆ ॥ ೩॥

— ಶ್ರೀ ಮುಪ್ಪಿನ ಷಡಕ್ಷರಿದೇವ

[ವ್ಯಾಖ್ಯಾನ : ಮುಂದಿನ ಪುಟದಲ್ಲಿ]

ಗೀತ ನವನೀತ

ವ್ಯಾಖ್ಯಾನ : — ಜಗದ್ಗುರು ಮಾತೆ ಮಹಾದೇವಿ

ಶ್ರೀ ಗುರು ಬಸವಣ್ಣನವರೇ ಆದಿ ಪ್ರಮಥರಾಗಿ ಒಂದು ಪಥ ನಿರ್ಮಾಣವಾಯಿತು; ಒಂದು ಪರಂಪರೆ ಸಾಗಿ ಬಂದಿತು. ಆ ಪರಂಪರೆಯಲ್ಲಿ ಸಮಕಾಲೀನ ವಚನಕಾರರೇ ಅಲ್ಲದೆ, ನಂತರದಲ್ಲಿಯೂ ಹಲವಾರು ವಚನಕಾರರು ಆಗಿಹೋದರು. ಶ್ರೇಷ್ಠ ಶಿವಯೋಗಿಗಳು ಈ ಅನುಭಾವ ಪರಂಪರೆಯ [Tradition of Mysticism] ಪ್ರತಿನಿಧಿಗಳಾಗಿ ನಿಂತರು. ಅವರಲ್ಲಿ ಬಹು ಪ್ರಾಜ್ಞರು ಮತ್ತು ಆದಿ ಶರಣರು ಇಟ್ಟ ಹೆಜ್ಜೆಗಳಲ್ಲಿ ತಪ್ಪದೇ ಹೆಜ್ಜೆ ಇಟ್ಟವರು ಶ್ರೀ ಮುಪ್ಪಿನ ಷಡಕ್ಷರಿಗಳು. ಆದಿ ಶರಣರ ವಚನಗಳಲ್ಲಿ ಮುಖ್ಯವಾಗಿ ಬಸವಣ್ಣ, ಅಕ್ಕಮಹಾದೇವಿ ಮತ್ತು ಸಿದ್ಧರಾಮೇಶ್ವರರ ವಚನಗಳಲ್ಲಿ ಹೊನಲಾಗಿ ಹರಿದ ಶರಣಸತಿ ಭಾವ, ಮಧುರಾ ಭಕ್ತಿ, ಭಾವ ಶ್ರೀ ಮತ್ತು ಎಲ್ಲಕ್ಕಿಂತ ಮಿಗಿಲಾಗಿ ಹೆಂಗರುಳಿನ ಮಾರ್ದವತೆ ಮತ್ತೊಮ್ಮೆ ಹೊಮ್ಮಿ ಹರಿದಿದ್ದರೆ ಅದು ಮುಪ್ಪಿನ ಷಡಕ್ಷರಿಗಳಲ್ಲಿ. ವಚನ ಧರ್ಮದ ಚೌಕಟ್ಟನ್ನು ದಾಟದೆ ಅವರು ತತ್ತ್ವವನ್ನು ಪ್ರತಿಪಾದಿಸುತ್ತಾರೆ. ಬಸವ ಧರ್ಮದ ತಿರುಳನ್ನು ಮನದಟ್ಟು ಮಾಡಿಕೊಂಡವರಲ್ಲಿ ಮುಪ್ಪಿನ ಷಡಕ್ಷರಿಗಳು ಅಗ್ರಗಣ್ಯರು.

"ಸಕಲಕೆಲ್ಲಕೆ ನೀನೆ ಅಕಳಂಕ ಗುರು" ಎಂಬ ಈ ಭಕ್ತಿಗೀತೆಯು ಅತ್ಯಂತ ಸುಪ್ರಸಿದ್ಧವು. ಅದರಲ್ಲಿ ಅವರು ದೇವನ ನಿಲುವನ್ನು, ಮತ್ತು ಮನುಷ್ಯರು ಅವನನ್ನು ಅರಿಯಲಾರದ ಅಸಮರ್ಥತೆಯನ್ನು ಮಾರ್ಮಿಕವಾಗಿ ಪ್ರತಿಪಾದಿಸುತ್ತಾರೆ. ಈ ಸಚರಾಚರ ಸೃಷ್ಟಿ ಸಕಲಕ್ಕೂ ಪರಮಾತ್ಮನೊಬ್ಬನೇ ಅಕಳಂಕ ಗುರು. ಅವನು ಭವಕ್ಕೆ ಬೀಳದವನು, ನಿರ್ದ್ವಂದ್ವನೂ ಆದ ಕಾರಣ ಅಕಳಂಕನು. ವಾಸ್ತವಿಕವಾಗಿ ನೋಡಿದರೆ ಎಲ್ಲ ಶಾಸ್ತ್ರಗಳು ಹೇಳುವುದೂ ಈ ಪರಮ ಸತ್ಯವನ್ನೇ! ಆ ಮಹಾಶಕ್ತಿಯನ್ನು ದರ್ಶಿಸಿದ ದ್ರಷ್ಟಾರರು, ಅನುಭಾವಿಗಳು ನಿರ್ವಂಚನೆಯಿಂದ ಅದನ್ನು ಪ್ರತಿಪಾದಿಸುವರು.

ಇಂತಹ ದೇವನು, ಭವಕ್ಕೆ ಬಂದ ಜೀವಿಯ ಬಗ್ಗೆ ಮರುಕಗೊಂಡು ಅವನ ಉದ್ಧರಿಸಲೆಂದು ಗುರು ರೂಪದಲ್ಲಿ ಬರುವನು. ಹಿಂಡನ್ನಗಲಿ ಹೋಗಿ ಕಾಡಿನಲ್ಲಿ ದಾರಿತಪ್ಪಿ ಆಕ್ರಂದಿಸುವ ಮುಗ್ಧ ಪಶುವನ್ನರಸಿಕೊಂಡು ಗೋವಳಿಗ ಬರುವಂತೆ, ದೇವನು ಭವಾರಣ್ಯದಲ್ಲಿ ದಾರಿ ತಪ್ಪಿ ಬಳಲುವ ಜೀವಾತ್ಮನ ಉದ್ಧಾರಕ್ಕೆ ಗುರುವಾಗಿ ಬರುವನು. ಹೀಗೆ ಎರಗಂಬಳಿಯ ಸಿದ್ಧನೆಂಬ ಹೆಸರಿನಿಂದ ವಿಶೇಷಿತನಾದ ಗುರು ಷಡಕ್ಷರಿ ದೇವನಿಗೆ ದೀಕ್ಷಾನುಗ್ರಹ ಮಾಡಿರುವನು; ಗುರು ಷಡಕ್ಷರಿಯು ಶಿಕ್ಷಾ ಗುರುವಾಗಿ ಶಾಸ್ತ್ರಜ್ಞಾನ–ಮೋಕ್ಷಜ್ಞಾನ ನೀಡಿರುವನು.

ವಿಶ್ವಧರ್ಮದ ಸೂತ್ರವನ್ನು ಕೊಡುವ ಈ ಪದ್ಯ ಷಡಕ್ಷರಿದೇವನ ಭವ್ಯ ಚಿಂತನೆಯನ್ನು ಪ್ರತಿನಿಧಿಸುತ್ತಿದೆ. ಈ ಜಗತ್ತಿನ ಕರ್ತ ಒಬ್ಬನೆ. ಅಜ್ಞಾನವೆಂಬ ತಿಮಿರಕ್ಕೆ ಜ್ಞಾನ ಭಾಸ್ಕರನಾದವನು. ಲೋಕದ ಏಕೈಕ ಜಗದ್ಗುರುವಾದವನು ಪರಮಾತ್ಮ ಮಾತ್ರ. ಆದರೆ ಅವನನ್ನು ನೋಡುವವರ ಮತ್ತು ನೋಡುವ ದೃಷ್ಟಿಕೋನ, ನೋಡುವವರ ಬೌದ್ಧಿಕ ಮತ್ತು ಅನುಭಾವಿಕ ಮಟ್ಟದ ಮೇಲೆ ದೇವನು ಅರ್ಥವಾಗುವನು. ವಿಸ್ತಾರವಾದ ಭೂಖಂಡ, ವಿವಿಧ ಭಾಷೆ, ವೇಷ, ಸಂಸ್ಕಾರ, ಪರಿಸರ, ಅವಶ್ಯಕತೆಗಳ ತಳಹದಿಯ ಮೇಲೆ ಧರ್ಮ, ದರ್ಶನ, ತತ್ತ್ವಜ್ಞಾನ, ಮುಂತಾದುವು ರೂಪುಗೊಂಡವು. ಹೀಗಾಗಿ ಬೇರೆ ಬೇರೆ ದರ್ಶನ ಶಾಸ್ತ್ರಗಳು ಬೇರೆ ಬೇರೆ ರೀತಿಯಲ್ಲಿ ಪರಮ ಸತ್ಯವಾದ ಪರಮಾತ್ಮನನ್ನು ದರ್ಶಿಸಿದವು, ಲೇಖಿಸಿದವು. ಇಷ್ಟೆಲ್ಲ ವೈವಿಧ್ಯತೆಯ ನಡುವೆಯೂ ಇರುವ ಪರಮ ಚೇತನ ಒಂದೇ! ಇಷ್ಟಾದರೂ ದೇವನು ಅವರವರ ಸಾಧನೆ, ಪಕ್ವತೆಗೆ ಅನುಸಾರವಾಗಿ ಫಲ ಕೊಡುವನು.

ಓರ್ವ ಸದ್ಗೃಹಸ್ಥ ದಂಪತಿಗಳಿಗೆ ಮೂವರು ಮಕ್ಕಳೆಂದಿಟ್ಟುಕೊಳ್ಳೋಣ. ಅದರಲ್ಲಿ ಒಬ್ಬ ಭಾವಜೀವಿ, ಇನ್ನೊಬ್ಬ ಬುದ್ಧಿಜೀವಿ, ಮತ್ತೊಬ್ಬ ಶ್ರಮಜೀವಿ. ಅವರ ಅಭಿರುಚಿ, ಆದರ್ಶ, ವಿಚಾರಗಳಲ್ಲಿಯೂ ವ್ಯತ್ಯಾಸವಿದೆ. ಇಷ್ಟಾದರೂ ತಾಯಿ ತಂದೆಯರ ಪ್ರೀತಿ ಸಮಾನವಾಗಿ ಎಲ್ಲ ಕೊಂಬೆಗಳಲ್ಲಿಯೂ ಕವಲೊಡೆದು ಹರಿಯುತ್ತದೆ. ಅದೇ ರೀತಿ ವಿವಿಧ ಧರ್ಮಗಳ ಭಾವ, ಪೂಜಾ ವಿಧಾನ, ಬೇರೆ ಬೇರೆ ಇದ್ದರೂ ಅವರೆಲ್ಲರಿಗೆ ಅರಿತು ಫಲಕೊಡುವ ಭಾವ ವೈಶಾಲ್ಯ ಆ ದೇವನದು.

ಇದು ವಾಸ್ತವಿಕವೇ ಇದ್ದರೂ, ಎಲ್ಲ ಶಾಸ್ತ್ರಗಳೂ ಇದನ್ನು ಸಾರುತ್ತಿದ್ದರೂ ಮತ್ತೂ ಮೂರ್ಖತನದ ಹೋರಾಟ ಜಗತ್ತಿನಲ್ಲಿ ಸಾಗಿಯೇ ಇದೆ. ಈ ದೃಷ್ಟಿಯಿಂದ ಒಂದೊಂದು ಮತ ಪಂಥಕ್ಕೆ ಒಂದು ದೇವರು, ಅದಕ್ಕೊಂದು ರೂಪ, ವೇಷ, ಕಥೆ. ದೇವನು ಲೀಲೆ ಮಾಡಲೋಸುಗವೇ ಹೀಗೆ ಬೇರೆ ಆಗಿದ್ದಾನೆಯೋ ಏನೋ ಎನ್ನಿಸುತ್ತದೆ. ಇರುವಿಕೆಯಲ್ಲಿ ದೇವನು ಒಬ್ಬನೇ, ತೋರಿಕೆಯಲ್ಲಿ ಬೇರೆ ಬೇರೆ. ಈ ರಹಸ್ಯವನ್ನು ಬಹುಪಾಲು ಜನರು ಅರಿಯರು, ಅದಕ್ಕಾಗಿಯೇ ತಿರುಳಿಗಾಗಿ ಪ್ರಯತ್ನಿಸುವುದನ್ನು ಮರೆತು ಸಿಪ್ಪೆಗಾಗಿ ಕಾದಾಡುವ ಪ್ರಯತ್ನ ಸಾಗಿದೆ. ಧರ್ಮದ ಮರ್ಮವಾದ ದಿವ್ಯಾನುಭವಕ್ಕಾಗಿ ಯತ್ನಿಸದೆ, ವಿಧಿ–ವಿಧಾನಗಳ ಪಾಲನೆಗೆ ಗಮನ ಕೊಡುತ್ತಿದ್ದಾರೆ ಬಹಳಷ್ಟು ಜನ. ಅದನ್ನು ಕಂಡು ವಿಸ್ಮಯ ವ್ಯಕ್ತಪಡಿಸುತ್ತಾರೆ ಶ್ರೀ ಮುಪ್ಪಿನ ಷಡಕ್ಷರಿಗಳು.



ಬಸವ ತತ್ತ್ವ ಪರಿಷತ್ತು

ಶ್ರೇಷ್ಟ ಸಮಾಜ ಸುಧಾರಕ, ಸಮತಾವಾದಿ, ಮನೋ ವಿಜ್ಞಾನಿ ಬಸವಣ್ಣನವರು ವೈಚಾರಿಕ ಸಮಾಜವೊಂದನ್ನು ಕಟ್ಟಬಯಸಿ, ನೂತನ ಧರ್ಮವೊಂದನ್ನು ರೂಪಿಸಿದರು, ಜನತೆಯ ಮಾರ್ಗದರ್ಶನಕ್ಕಾಗಿ ವಚನ ಸಾಹಿತ್ಯ ಸಂವಿಧಾನವನ್ನು ಕೈಪಿಡಿಯಾಗಿ ಕೊಟ್ಟರು. ಅವರ ಮುಖ್ಯ ಧ್ಯೇಯ ಯಾವುದೇ ಮತ ಪಂಥವನ್ನು ರೂಪಿಸುವುದಾಗಿರದೆ, ಜಾತ್ಯತೀತವಾದ ಮೌಲ್ಯಾಧಾರಿತ ಸಮಾಜವನ್ನು ಕಟ್ಟುವುದೇ ಆಗಿತ್ತು. ಅವರ ಮಹತ್ತರ ಧ್ಯೇಯ ಪೂರ್ಣವಾಗಿ ಸಫಲವಾಗುವ ಮುನ್ನವೇ ಕಲ್ಯಾಣ ಕ್ರಾಂತಿ ಸಂಭವಿಸಿತು. ಹೀಗಾಗಿ ಬಸವಣ್ಣನವರ ಮನಸ್ಸನ್ನು. ಆಸೆ-ಆಕಾಂಕ್ಷೆ, ಧ್ಯೇಯವನ್ನರಿಯಲು ವಚನ ಶಾಸ್ತ್ರವನ್ನು ಬಿಟ್ಟರೆ ಮತ್ತೆ ಇನ್ನಾವುದಿಲ್ಲ. ಅದರಲ್ಲಿ ಜಾತ್ಯತೀತ ಸಮಾಜ ರಚನೆಯ ಒಂದು ಪ್ರಯೋಗ ವ್ಯಕ್ತವಾಗಿದೆ. ಜಾತಿ ಬೇಡ-ಧರ್ಮಬೇಕು. ಧರ್ಮಕ್ಕಾಗಿ ಬದುಕು ಸವೆಯಬೇಕು! ಮೂಢನಂಬಿಕೆ ಬೇಡ-ದೇವರು ಬೇಕು. ದೇವನಿಗಾಗಿ ಮನ-ಭಾವಗಳು ತುಡಿಯಬೇಕು. ಶೋಷಣೆ ಬೇಡ-ಸತ್ಯ ಶುದ್ಧ ಅರ್ಜನೆ ಬೇಕು. ಶುದ್ಧ ಕಾಯಕದಲ್ಲಿ ತನು-ಮನಗಳು ಸವೆಯಬೇಕು. ಹೀಗೆಲ್ಲ ಆಲೋಚನೆಗಳನ್ನು ಹೊಂದಿದ ಬಸವಣ್ಣನವರ ವಿಚಾರಧಾರೆ ಪ್ರಸ್ತುತ ಸಮಯದಲ್ಲಿ ಬಹು ದೊಡ್ಡ ಮಾರ್ಗದರ್ಶಿ. ಅದು ಒಂದು ಕಡೆ ವೈಚಾರಿಕರನ್ನು ಇನ್ನೊಂದು ಕಡೆ ಭಾವುಕರನ್ನು ಸಂಗಮಗೊಳ್ಳುವಂತೆ ಮಾಡಿ. ಬುದ್ಧಿ-ಭಾವಗಳ ಸಮನಾಂತರ ಹಳಿಗಳ ಮೇಲೆ ಜೀವನದ ಗಾಡಿ ಓಡುವಂತೆ ಮಾಡುತ್ತದೆ. ಕೇವಲ ಪಾರಮಾರ್ಥದ ಕಡೆಗೆ ತಲೆ ಹಾಕಿ ವ್ಯವಹಾರಿಕ ಪ್ರಗತಿಯನ್ನು ಕಡೆಗಣಿಸುವ ಅವಾಸ್ತವವಾದವೂ ಆಗದೆ; ಅಥವಾ ಪಾರಮಾರ್ಥವನ್ನು ಸಂಪೂರ್ಣ ಮರೆತು

ಸಂಸಾರದ ಕೆಸರಿನ ಮಡುವಿನಲ್ಲೇ ಮುಳುಗುವ ಇಂದ್ರಿಯವಾದವೂ ಆಗದೆ, ಸಮತೋಲನದ ವಿಚಾರ ಧಾರೆಯನ್ನು ಕಲಿಸುವ ಅಮೂಲ್ಯ ಸಿದ್ಧಾಂತ-ಬಸವ ಧರ್ಮ.

ಇಂದಿನ ಪರಿಸ್ಥಿತಿಯಲ್ಲಿ ಬಸವಣ್ಣನವರ ವಿಚಾರವಾದ, ದೃಷ್ಟಿಕೋನ ಮುಂತಾದುವನ್ನು ಅರಿಯುವುದು, ಪ್ರಯೋಗಿಸುವುದು ವ್ಯಕ್ತಿಯ ದೃಷ್ಟಿಯಿಂದ ಮಾತ್ರವಲ್ಲ ಸಮಾಜ-ರಾಷ್ಟ್ರಗಳ ದೃಷ್ಟಿಯಿಂದಲೂ ಶ್ರೇಯಸ್ಕರ. ಈ ತಿಳಿಯುವ ಪ್ರಯತ್ನದ ಪ್ರತಿಫಲವಾಗಿ ಬಸವ ತತ್ತ್ವ ಪರಿಷತ್ ಸಂಘಟಿಸಲ್ಪಟ್ಟು ಸಮ್ಮೇಳನಗಳನ್ನು ನಡೆಸಿತು. 1980 ರ ಅಕ್ಟೋಬರದಲ್ಲಿ ಪ್ರಥಮ ಅಧಿವೇಶನ 2 ಮತ್ತು 3 ರಂದು ನಡೆಯಿತು. ಎರಡನೆಯ ಸಮಾವೇಶವು 1981 ರ ಅಕ್ಟೋಬರದಲ್ಲಿ 2 ಮತ್ತು 3 ರಂದು ನಡೆಯಿತು. ಮುಂದೆ ಹಲವಾರು ಅನಾನುಕೂಲತೆಗಳ ನಿಮಿತ್ತ ನಡೆಸಲಾಗಲಿಲ್ಲ.

ಬೀದರ ನಾಡಿನ ಜನಕ್ಕೆ ಅನುಕೂಲವಾಗಲೆಂದು ಶರಣರ ಕ್ರಾಂತಿ ಭೂಮಿಯಾದ ಬಸವ ಕಲ್ಯಾಣದಲ್ಲಿ, ಬೀದರಿನ ಬಸವ ದಳದ ಆಶ್ರಯದಲ್ಲಿ ಮೂರನೆಯ ಸಮಾವೇಶ ನಡೆಯಿತು, ಇದೇ ವರುಷದ ಜೂನ್ ತಿಂಗಳಲ್ಲಿ ದಿನಾಂಕ 16 ರಿಂದ 23ರ ವರೆಗೆ. ಇದೀಗ ನಾಲ್ಕನೆಯ ಸಮ್ಮೇಳನವು ನಡೆಯಲಿದೆ ಅಕ್ಟೋಬರ ತಿಂಗಳಲ್ಲಿ.

ಈ ವರೆಗೂ ರಜಿಸ್ಟರ್ಡ್ ಆಗದೆ, ವಿಶ್ವ ಕಲ್ಯಾಣ ಮಿಷನ್ ಅಂಗವಾಗಿ ಬಸವ ಪರಿಷತ್ತಿನ ಹೆಸರಿನಲ್ಲಿ ಕಾರ್ಯಕ್ರಮ ನಡೆದುವು. ಈಗ ಬಸವ ತತ್ತ್ವ ಪರಿಷತ್ತು ಒಂದು ಸ್ವತಂತ್ರ ಟ್ರಸ್ಟ್ ಆಗಿ ಕಾರ್ಯನಿರ್ವಹಿಸುತ್ತದೆ, ವಿಶ್ವ ಕಲ್ಯಾಣ ಮಿಷನ್ನಿನ ಸಹಯೋಗದೊಡನೆ ಕಾರ್ಯ ಮಾಡುತ್ತದೆ.

ಭಕ್ತಿ ಪಕ್ಷದ ಸಮ್ಮೇಳನ :

ನಾವು ಕರೆಯುತ್ತಿರುವುದು ಭಕ್ತಿ ಪಕ್ಷದ ಸಮ್ಮೇಳನ. ಯಾವುದೇ ಜಾತಿಯ ಸಮ್ಮೇಳನವಲ್ಲ. ಬಸವಣ್ಣನವರ ಶ್ರೀ ವಾಣಿಯೊಂದು ಹೀಗೆ ನುಡಿಯುತ್ತದೆ.

ಕಾಗೆ ಒಂದಗುಳ ಕಂಡರೆ ಕೂಗಿ ಕರೆಯದೇ
ತನ್ನ ಬಳಗವನು. ?
ಕೋಳಿ ಒಂದು ಗುಟಕ ಕಂಡರೆ ಕೂಗಿ ಕರೆಯದೇ
ತನ್ನ ಕುಲವೆಲ್ಲವನು ?
ಶಿವಭಕ್ತನಾಗಿ "ಭಕ್ತಿಪಕ್ಷ"ವಿಲ್ಲದಿದ್ದರೆ,
ಕಾಗೆ ಕೋಳಿಯಿಂದ ಕರಕಷ್ಟ ಕಾಣಾ ಕೂಡಲಸಂಗಮದೇವಾ !

ಒಂದು ಧ್ಯೇಯ, ಒಂದು ದೃಷ್ಟಿಕೋನ, ಒಂದು ತಾತ್ತ್ವಿಕ ನಿಲುವು ಹೊಂದಿದವರೆಲ್ಲ ಭಕ್ತಿ ಬಾಂಧವರು; ಅವರದ್ದು ಭಕ್ತಿ ಪಕ್ಷ. ಇಲ್ಲಿ ಜಾತಿಯಾಗಲೀ, ಅಂತಸ್ತಾಗಲೀ, ಉದ್ಯೋಗವಾಗಲಿ ಅಡ್ಡ ಬರದು. ಸಮಾನ ವಿಚಾರಧಾರೆಯವರು

ಒಂದೆಡೆ ಸೇರಿ ಚಿಂತನ ಮಂಥನ ಮಾಡುವುದೇ ಭಕ್ತಿ ಪಕ್ಷದ ಸಮ್ಮೇಳನದ ಉದ್ದೇಶ. ಹಿಂದಿನ ಎರಡು ಸಮಾವೇಶಗಳಲ್ಲಿ ಚಿಂತನ–ಮಂಥನ, ಚರ್ಚೆಗಳಿಗೆ ಪ್ರಾಮುಖ್ಯತೆ ಇತ್ತು. ಮೂರನೆಯದ್ದರಲ್ಲಿ ಅರ್ಧ ಭಾಗ ಸಮಯವನ್ನು ಚರ್ಚೆಗೆ, ಇನ್ನರ್ಧ ಭಾಗವನ್ನು ಪ್ರಯೋಗಾತ್ಮಕ ವಿಧಿ–ವಿಧಾನಗಳಿಗೆ ವಿನಿಯೋಗಿಸಲಾಯಿತು. ನಾಲ್ಕನೆಯದು ಪ್ರಾಯೋಗಿಕ ಜ್ಞಾನಕ್ಕೇ ಹೆಚ್ಚಿನ ಮಹತ್ವ ನೀಡಲಿದೆ.

ಧರ್ಮ–ಸಮಾಜಗಳ ಏಳಿಗೆಗಾಗಿ, ಜ್ಞಾನಪ್ರಚಾರಕ್ಕಾಗಿ ಸಮ್ಮತಿಸುವ ಪೂರ್ಣಾವಧಿ ಕಾರ್ಯಕರ್ತರಾಗಿ ದುಡಿಯುವವರು ಸಿಕ್ಕುವರೇನೋ ಎಂದು ಬಹಳಷ್ಟು ನಿರೀಕ್ಷಿಸಿದೆವು. ಪೂರ್ತಿ ಸಿಕ್ಕಿಲ್ಲವೆಂದಲ್ಲ : ಸಿಕ್ಕಿದ್ದಾರೆ ಎಷ್ಟೋ ಜನ–ವಿರಳ ಸಂಖ್ಯೆಯಲ್ಲಿ. ಇದಕ್ಕೆ ಕಾರಣ ಹಲವಾರು. ಒಟ್ಟಾರೆ ಹಿಂದೂ ಸಮಾಜ, ಲಿಂಗಾಯತ ಸಮಾಜದ ಯುವ ಜನಾಂಗದಲ್ಲಿ ನಾಸ್ತಿಕತೆ ಬಹುವಾಗಿ ಹಬ್ಬುತ್ತಿದೆ. ಕೆಲವರಲ್ಲಿ ತ್ಯಾಗ–ವೈರಾಗ್ಯಗಳ ಪ್ರೇರಣೆ ಮೂಡಿದರೂ ತಮ್ಮ ಕುಟುಂಬ, ಪರಿಸರದ ಒತ್ತಡ ಮೀರಿ ಮುಂದೆ ಬರುವ ಆತ್ಮಬಲ ಉಳ್ಳವರಾಗಿರುವುದಿಲ್ಲ. ಇನ್ನು ಕೆಲವರು ಇಂದ್ರಿಯ ದೌರ್ಬಲ್ಯಕ್ಕೊಳಗಾಗಿಯೋ ಅಥವಾ ಸ್ವಾರ್ಥಕ್ಕೆ ಈಡಾಗಿಯೋ, ಅಥವಾ ಹಣ–ಕೀರ್ತಿಗಳ ಮೋಹಕ್ಕೆ ಮರುಳಾಗಿಯೋ ತಮ್ಮ ಆದರ್ಶಪಥದಲ್ಲಿ ಸೋತು, ಯಾವುದೇ ಗುರಿಯನ್ನು ಮುಟ್ಟದಂತೆ ಆಗುತ್ತಾರೆ. ಮತ್ತೆ ಕೆಲವರು ಬೆಳೆಯುತ್ತಿರುವ ನಾಸ್ತಿಕರ ಟೀಕೆ, ವ್ಯಂಗ್ಯ, ಕುಹಕ–ಕುತ್ಸಿತಗಳನ್ನು ಎದುರಿಸಲಾರದೆ, ಭಯಪಟ್ಟು ಇಷ್ಟವಿಲ್ಲದಿದ್ದರೂ, ಆಸಕ್ತಿಯಿಲ್ಲದಿದ್ದರೂ ಸಾಂಸಾರಿಕ ಜೀವನವನ್ನು ಪ್ರವೇಶಿಸಿ ಅತ್ತ ಅದರಲ್ಲೂ ನೆಮ್ಮದಿ ಕಾಣದೆ, ಇತ್ತ ಪಾರಮಾರ್ಥಕ್ಕೂ ಬರದೆ ನೊಳಲಾಡುತ್ತಾರೆ.

ಇಂಥವೆಲ್ಲ ಅಂಶಗಳನ್ನು ಗಮನಿಸಿ, ಪೂರ್ಣಾವಧಿ ಕಾರ್ಯಕರ್ತರಾಗಿ ಧರ್ಮ ಪ್ರಚಾರಕ್ಕೆ ಬರದಿದ್ದರಷ್ಟೆ, ಅಲ್ಪಾವಧಿ ಕಾರ್ಯಕರ್ತರಾಗಿ ತಮ್ಮ ಬಿಡುವಿನ ವೇಳೆಯನ್ನು ಕೊಟ್ಟರೂ ಸಾಕು. ಧರ್ಮಪ್ರಚಾರ ಅವರ ವೃತ್ತಿ [Profession] ಆಗದಿದ್ದರಷ್ಟೇ ಕೊನೆಗೆ ಪ್ರವೃತ್ತಿ ಅಥವಾ ಹವ್ಯಾಸ [Hobby] ವಾದರೂ ಎಷ್ಟೋ ಪರವಾಗಿಲ್ಲ ಎಂಬ ವಿಚಾರಕ್ಕೆ ಬಂದೆವು. ಇಷ್ಟು ಮಾತ್ರವಲ್ಲ, ಕೆಲವರಿಗೆ ಪ್ರಾಯೋಗಿಕ ತರಬೇತಿ ಕೊಡುವುದರ ಹಿಂದೆ ಇನ್ನೊಂದು ಉದ್ದೇಶವೂ ಇದೆ.


ಬಿಜಾಪುರದಲ್ಲಿ ನಮ್ಮ ಪ್ರವಚನ ನಡೆದಾಗ ಓರ್ವ ಸದ್ಭಕ್ತರು 100ರೂ ಬೆಲೆಯ ಕೆಲ ಸಾಮಾನು ತಂದು ಕೊಟ್ಟರು. ಅವರು ಅಂಚೆ ಇಲಾಖೆಯವರು. ಆ ಇಲಾಖೆಯ ಸಂಬಳಗಳ ಪರಿಸ್ಥಿತಿ ಎಲ್ಲರಿಗೂ ತಿಳಿದುದೆ. ನನಗೆ ಆಶ್ಚರ್ಯವಾಗಿ "ಇದೆಲ್ಲ ಏಕೆ ? ನಿಮ್ಮ ಮನೆಯ ಪರಿಸ್ಥಿತಿ ಗೊತ್ತಿದೆ. ಇದ್ದವರು ಕೊಡುತ್ತಾರೆ. ನೀವೇಕೆ ತಂದಿರಿ?" ಎಂದೆ. "ಇರಲಿ, ಹಣವಿದ್ದವರು ದೊಡ್ಡ ಪ್ರಮಾಣದಲ್ಲಿ ಕೊಟ್ಟರೆ ನಾವು ಪಡೆದುಕೊಂಡ ಜ್ಞಾನಕ್ಕೆ ಪ್ರತಿಫಲವಾಗಿ ಇಷ್ಟಾದರೂ ಮಾಡಬಾರದೆ? ನಿನ್ನೆ ಬಿಡುವಿನ ದಿನವಿತ್ತು. ವೈದಿಕ ಮಾಡಲು ಯಾರ ಮನೆಗೋ ಹೋದಾಗ ಅವರಾಗಿ ಈ ಹಣ

ಕೊಟ್ಟರು. ಅದನ್ನು ಬಳಸಿರುವೆ" ಎಂದರು. "ಬಹಳ ಒಳ್ಳೇ ಕೆಲಸ. ಬಿಡುವಿನ ದಿನಗಳಲ್ಲಿ ಹಾಳು ಹರಟೆ ಹೊಡೆದೋ, ಕ್ಲಬ್ಬುಗಳಿಗೆ ಹೋಗಿ ಸಮಯ–ಹಣ ಹಾಳು ಮಾಡುವುದಕ್ಕಿಂತ ಈ ಧಾರ್ಮಿಕ ಚಟುವಟಿಕೆ ಬಲು ಉತ್ತಮ" ಎಂದೆ. ಆಗ ಆಲೋಚನೆ ಬಂದಿತು. ಕೆಲವು ಸದ್ಗೃಹಸ್ಥರು ನಾಮಕರಣ, ವಿವಾಹ ವಿಧಾನ, ಸಮಾಧಿಕ್ರಿಯೆ ಮುಂತಾದುವುಗಳಲ್ಲಿ ತರಬೇತಿ ಹೊಂದಿದ್ದರೆ ಅದನ್ನು ತಾವು ಉಪಯೋಗಿಸಿಕೊಂಡು ಸ್ವಲ್ಪ ಅರ್ಜನೆಯನ್ನೂ ಮಾಡಬಹುದು. ಮತ್ತು ಈಗಿನ ಕಾಲದಲ್ಲಿ ಪೂಜೆ–ಪುರಸ್ಕಾರ ಮಾಡಿಸುವ, ಅದರಲ್ಲೂ ಪಟ್ಟಣಗಳಲ್ಲಿ ಗೃಹಪ್ರವೇಶ, ನಾಮಕರಣ, ವಿವಾಹ ವಿಧಿ ಮುಂತಾದುವುಗಳನ್ನು ಮಾಡಿಸುವವರು ಸಿಕ್ಕುವುದು ಬಲು ಕಷ್ಟಸಾಧ್ಯ. ಏಕೆಂದರೆ ಇಂಥ ಚಟುವಟಿಕೆಗಳನ್ನೇ ಮುಖ್ಯ ವೃತ್ತಿ ಮಾಡಿಕೊಂಡು ಸಂಸಾರ ತೂಗಿಸುವುದು ಕಷ್ಟಸಾಧ್ಯವಾದ ಕಾರಣ, ಬಹುಪಾಲು ಜನ ನೌಕರಿಗಳಲ್ಲಿ ತೊಡಗುತ್ತಿರುವರು. ಇಂಥ ಪ್ರಸಂಗದಲ್ಲಿ ಸಾತ್ವಿಕರು ಸಜ್ಜನರು, ಆದ ಕೆಲವು ಗೃಹಸ್ಥರು ಇಂತಹ ತರಬೇತಿ ಹೊಂದಿದರೆ ಅವರೇ ಬಿಡುವು ಮಾಡಿಕೊಂಡು ವಿಧಿ ವಿಧಾನಗಳನ್ನು ಮಾಡಬಹುದು. ಮೇಲಾಗಿ ಇವರು ವಿದ್ಯಾವಂತರಿರುವುದರಿಂದ ಮಾಡಿಸುವವರಲ್ಲೂ ಗೌರವಭಾವ ಇರುವುದು. ವಿಧಿವಿಧಾನಗಳ ಜೊತೆಗೆ ವಿವರಿಸುವ ಬೋಧನ ಕಲೆಯನ್ನು ಅಳವಡಿಸಿಕೊಂಡರಂತೂ ಇದು ಬಹಳ ಪ್ರಭಾವಶಾಲಿಯಾಗುವುದು.

ಈ ಎಲ್ಲ ಉದ್ದೇಶಗಳೊಡನೆ ಭಕ್ತಿಪಕ್ಷದ ಸಮಾವೇಶವು ನಡೆಯಲಿದೆ. ಇಲ್ಲಿ ಸಮಾವೇಶವಾಗಬೇಕಾದರೆ ಜಾತಿ ಮತಗಳ ಅಡ್ಡಿಯಿಲ್ಲ. ಅವರು ಧರ್ಮಾನುಯಾಯಿಗಳಿರಬಹುದು, ಅಥವಾ ತತ್ವಾನುಯಾಯಿಗಳೂ ಇರಬಹುದು. ಅಂದರೆ ಬಸವಣ್ಣನವರನ್ನೇ ಧರ್ಮಗುರುವೆಂದು, ವಚನ ಶಾಸ್ತ್ರವನ್ನೇ ತಮ್ಮ ಧರ್ಮಶಾಸ್ತ್ರವೆಂದು ತಿಳಿದು, ಇಷ್ಟಲಿಂಗಧಾರಿಗಳಾದವರಾಗಿಯೂ ಇರಬಹುದು. ಅಥವಾ ಬಸವಣ್ಣನವರನ್ನು ಜ್ಞಾನಗುರುವೆಂದು ತಿಳಿದು, ವಚನ ಶಾಸ್ತ್ರದ ವಿಚಾರಗಳಲ್ಲಿ ಆಸಕ್ತಿ ತಾಳಿ, ಯಾವುದೇ ಜಾತಿ ಮತ ಪಂಥದವರೇ ಆಗಿದ್ದರೂ, ಜಾತ್ಯತೀತ ಧಾರ್ಮಿಕ ಸಮಾಜ ರಚನೆಯಲ್ಲಿ ಆಸಕ್ತರಾದವರಿರಬಹುದು. ಹೀಗೆ ಇದು ತಾತ್ವಿಕ ಶಿಬಿರ ಮತ್ತು ಭಕ್ತಿಯ ಸಮಾವೇಶ. ಇಂಥದೊಂದು ತರಬೇತಿ ಶಿಬಿರ ಅಕ್ಟೋಬರ್ 2ರಿಂದ 13-10-85 ರ ವರೆಗೆ, ಮತ್ತು ಭಕ್ತಿಪಕ್ಷದ ಸಮ್ಮೇಳನ 12-10-85 ಮತ್ತು 13-10-85 ರಂದು ಬಸವ ಗಂಗೋತ್ರಿಯಲ್ಲಿ ನಡೆಯಲಿವೆ. ಆಸಕ್ತರು ಬಹು ಸಂಖ್ಯೆಯಲ್ಲಿ ಭಾಗವಹಿಸಿ ತರಬೇತಿಯನ್ನು ಹೊಂದುವಿರಾಗಿ ಆಶಿಸುವೆ.

— ಜಗದ್ಗುರು ಮಾತೆ ಮಹಾದೇವಿ

[ವಿ. ಸೂ : ಹೆಚ್ಚಿನ ವಿವರಗಳಿಗಾಗಿ ಇದೇ ಸಂಚಿಕೆಯ 22 ಮತ್ತು 23ನೆಯ ಪುಟ ನೋಡಿರಿ.]



ಗುರು-ಜಂಗಮರ ಕರ್ತವ್ಯ

—ಪೂಜ್ಯ ಶ್ರೀ ಸದ್ಗುರು ಲಿಂಗಾನಂದ ಸ್ವಾಮಿಗಳು.

ಬಾಲಕನ ಹಣ್ಣು ಬಾಲಕಂಗಲ್ಲದೆ ಪಿತಂಗೇನೋ ಅಯ್ಯಾ ?
ಭಕ್ತನ ಸೊಮ್ಮು ಭಕ್ತಂಗಲ್ಲದೆ,
ನಿರವಯ ನಿರಾಳ ಗುರುಲಿಂಗ ಜಂಗಮಕ್ಕೇನೋ ಅಯ್ಯಾ ?
ತನು ಮನ ಧನದೊಳಗಾಬವನ ಬೆನ್ನ ಬಾರನೆತ್ತದೆ
ಬಿಡುವನೇ ಕಪಿಲಸಿದ್ಧ ಮಲ್ಲಿಕಾರ್ಜುನಾ ?

— ಸಿದ್ಧರಾಮೇಶ್ವರ ೪೦೧

ಮಕ್ಕಳಿಗೆ ದಿನ ನಿತ್ಯ ಕೊಡಲೆಂದು, ಅಥವಾ ಆಗಾಗ ಕೊಡಲೆಂದು ತಾಯಿ ತಂದೆಯರು ಹಣ್ಣುಗಳನ್ನು. ಫೇಡೆ ಮುಂತಾದುವನ್ನು, ತಿಂಡಿ-ತಿನಿಸುಗಳನ್ನು ಕೊಂಡಾಗಲೀ, ಮನೆಯಲ್ಲಿ ಸಿದ್ಧಪಡಿಸಿಯಾಗಲೀ ಇಡುವರು. ಮಕ್ಕಳಿಗೆ ಎಲ್ಲ ಕೊಟ್ಟುಬಿಟ್ಟರೆ ಅವರು ಮನಸ್ಸಿಗೆ ಬಂದಂತೆ ತಿಂದುಬಿಡುವರು. ಅತಿ ಹೊಟ್ಟೆ ಬಾಕತನದಿಂದ ಆರೋಗ್ಯವಾದರೂ ಕೆಡಬಹುದು. ಇಲ್ಲವೇ ಬೆಲೆ ಬಾಳುವ ವಸ್ತುವಿನ ಅಪವ್ಯಯವಾಗಬಹುದು. ಆದಕ್ಕಾಗಿ ತಾಯಿ-ತಂದೆ ತಮ್ಮ ಕಣ್ಗಾವಲಿನಲ್ಲಿ ಅಂಥ ವಸ್ತುಗಳನ್ನು ಇಟ್ಟುಕೊಳ್ಳುವರು. ಆದರೆ ಅವರ ಉದ್ದೇಶ ತಾವೇ ತಿನ್ನುವುದಲ್ಲ, ಜೋಪಾನವಾಗಿ ರಕ್ಷಿಸಿ ಮಕ್ಕಳಿಗೆ ಕೊಡುವುದು.

ಅವಶ್ಯಕತೆಯಿಲ್ಲದಿದ್ದರೂ, ಮಕ್ಕಳಿಗಾಗಿ ಮೀಸಲಾದ ವಸ್ತುಗಳನ್ನೂ ತಾವೇ ತಿಂದುಬಿಟ್ಟರೆ ಅದು ತಾಯಿ-ತಂದೆಗಳಿಗೆ ನಾಚಿಕೆಗೇಡಿನ ವಿಷಯ ; ಮತ್ತು ಆಸೆ

ಬುರುಕತನ. ಅದೇ ರೀತಿ ಗುರು-ಜಂಗಮರು ಕರ್ತವ್ಯಪರರಾಗಿರಬೇಕು. ಜನರು ಕಾಯಕಮಾಡಿ ಹಣವನ್ನು ಆರ್ಜಿಸುವರು. ತಮ್ಮ ಕಾಯಕದೊಡನೆ ಅಷ್ಟಿಷ್ಟು ಸಮಯ ವಿನಿಯೋಗಿಸಿ ಪುರಾಣ-ಪ್ರವಚನ ಕೇಳಬಹುದು, ಸತ್ಸಂಗದಲ್ಲಿ ಭಾಗಿಗಳಾಗಬಹುದು; ಯಾವಾಗಲಾದರೊಮ್ಮೆ ದಾಸೋಹ (ಅದೂ ಕೇವಲ ಅನ್ನ ದಾಸೋಹ) ಮಾಡಬಹುದು: ಆದರೆ ಸದಾಕಾಲ ಇವುಗಳನ್ನೇ ತಮ್ಮ ಮುಖ್ಯ ಉದ್ಯೋಗವಾಗಿ ಮಾಡಿಕೊಳ್ಳಲಾಗುವುದೆ? ಆದರೆ ಅವು ಸಮಾಜಕ್ಕೆ ಅತ್ಯಾವಶ್ಯಕ. ಅದಕ್ಕಾಗಿ ಅನ್ನದಾಸೋಹ-ಜ್ಞಾನ ದಾಸೋಹಗಳನ್ನು, ಪ್ರವಚನ-ಪುರಾಣ ಬೋಧೆಗಳನ್ನು, ಜನ ಸೇವೆ-ಧರ್ಮಜಾಗೃತಿಗಳನ್ನು ತಮ್ಮ ಮುಖ್ಯ ಕಾರ್ಯವಾಗಿ ಮಾಡಿಕೊಳ್ಳುವ ಜನ ಬೇಕು. ಈ ಎಲ್ಲ ಕಾಯಕಗಳು ಕೇವಲ ಪ್ರವೃತ್ತಿ, ಹವ್ಯಾಸ (Hobby) ವಾದರೆ ಸಾಲದು, ವೃತ್ತಿ (Profession) ಯಾಗಬೇಕು. ಅಂಥ ಪೂರ್ಣಾವಧಿ ಕಾರ್ಯಕರ್ತರೇ ಗುರು ಮತ್ತು ಜಂಗಮರು.

ಉಪದೇಶವ ಮಾಡುವಲ್ಲಿ ಗುರುವೆನಿಸಿದನು,
ಕಾಮಿತ ಫಲಂಗಳ ಕೊಟ್ಟಲ್ಲಿ ಲಿಂಗಮೂರ್ತಿ ಎನಿಸಿದನು,
ನಿತ್ಯ ನಿರ್ಮಾಣದ ಸಕೀಲವ ತೋರಿದಲ್ಲಿ ಜಂಗಮವೆನಿಸಿದನಯ್ಯಾ,
ಎಲೆ ಕಪಿಲಸಿದ್ಧ ಮಲ್ಲಿಕಾರ್ಜುನಾ.

— ಸಿದ್ಧರಾಮೇಶ್ವರ ೩೯೯

ಉಪದೇಶವ ಮಾಡುವ ಅಂದರೆ ಪ್ರವಚನ-ಪುರಾಣ ಬೋಧೆ ಮತ್ತು ದೀಕ್ಷಾ ಉಪದೇಶ ಮಾಡುವವ ಗುರು. [ಈ ವ್ಯಾಖ್ಯಾನದ ಪ್ರಕಾರ ಗುರುವನ್ನು ಕ್ರೈಸ್ತರಲ್ಲಿ ಬರುವ ಪ್ರೀಸ್ಟನಿಗೆ ಹೋಲಿಸಬಹುದು.] ಭಕ್ತರ ಇಷ್ಟಾರ್ಥ ಸಿದ್ಧಿ ಮಾಡುವುದೇ ಲಿಂಗದೇವನ ಕರ್ತವ್ಯ: ಇಷ್ಟಾರ್ಥವು ಧನ-ಕನಕ. ಸ್ಥಾನ-ಕೀರ್ತಿ ಮುಂತಾದ ಲೌಕಿಕವಾದುದೇ ಇರಲಿ; ಆತ್ಮಾನಂದ-ಮುಕ್ತಿ ಮುಂತಾದ ಪಾರ ಲೌಕಿಕವಾದುದೇ ಇರಲಿ- ಅವುಗಳನ್ನು ನೆರವೇರಿಸಬೇಕಾದ್ದು ಲಿಂಗದೇವನ ಕರ್ತವ್ಯ. ಜಂಗಮನ ಕರ್ತವ್ಯವೆಂದರೆ ಹೆಚ್ಚಿನ ಅಧ್ಯಾತ್ಮಿಕ ಸಾಧನೆಯಲ್ಲಿ ತಲ್ಲೀನರಾದ ಮುಮುಕ್ಷುಗಳಿಗೆ ಯೋಗಾಭ್ಯಾಸ, ಸೂಕ್ಷ್ಮಾತಿ ಸೂಕ್ಷ್ಮವಾದ ಸಕೀಲಗಳನ್ನು ತೋರಿಸುವುದು. ಒಬ್ಬನೇ ವ್ಯಕ್ತಿಯು ತನ್ನ ಶಿಷ್ಯನ ಬದುಕಿನಲ್ಲಿ ಗುರುವಾಗಿ ಉಪದೇಶ ಮಾಡಬಹುದು; ಜಂಗಮವಾಗಿ ಮಾರ್ಗದರ್ಶನ ಮಾಡಬಹುದು. ಇಲ್ಲವೇ ಇವರಿಬ್ಬರು ಬೇರೆ ಬೇರೆಯೂ ಇರಬಹುದು. ಒಟ್ಟಿನಲ್ಲಿ ಗುರು-ಜಂಗಮರು ಸಮಾಜದ ಹಿತಕ್ಕಾಗಿ ಪೂರ್ಣಾವಧಿ ಕಾರ್ಯಕರ್ತರಾಗಿ ಸಮರ್ಪಣೆಗೊಂಡವರು. ಇಂಥವರ ಕಾರ್ಯಕ್ಕೆ ನೆರವಾಗಲೆಂದು ಸಮಾಜವು ಅವರಿಗೆ ತನು ಮನ ಧನದಿಂದ ಸಹಾಯ ಮಾಡುವುದು. ಆ ಕೊಡುಗೆಯ ಹಿಂದಿನ ಉದ್ದೇಶವೆಂದರೆ, 'ಒಳ್ಳೆಯ ಕಾರ್ಯಮಾಡಲು ಹಣ ಬೇಕು; ಆ ಹಣವನ್ನು ಸಮಾಜದ ಸೇವೆಗಾಗಿ ಕಂಕಣ ಬದ್ಧರಾಗಿ ನಿಂತ ತ್ಯಾಗಿಗಳ

ಕೈಲಿ ಕೊಟ್ಟರೆ ಅದು ಸುರಕ್ಷಿತವಾಗಿರುವುದು ಮಾತ್ರವಲ್ಲ ಸದ್ವಿನಿಯೋಗವಾಗುವುದು' ಎಂಬುದೇ ಆಗಿದೆ. ಜ್ಞಾನಿಯು ಆದ ವಿರಕ್ತನ ಬಳಿ ಸಂಗ್ರಹವಾದ ಹಣ ತಾಯಿ-ತಂದೆಯರ ಬಳಿ ಜೋಪಾನವಾಗಿರುವ ಹಣ್ಣಿನಂತೆ, ಪುನಃ ಮಕ್ಕಳಿಗೇ ಸಕಾಲದಲ್ಲಿ ಅದು ಸಿಕ್ಕುವುದು. ಅವಶ್ಯಕತೆಯನ್ನರಿತು ತ್ಯಾಗಿಗಳು-ವೈರಾಗ್ಯಮೂರ್ತಿಗಳು ವಿವಿಧ ರೀತಿಯಲ್ಲಿ ಸಮಾಜಕ್ಕೆ ಸಲ್ಲಿಸುವರು ಎಂಬ ನಂಬಿಗೆ ಈ ಕೊಡುಗೆಯ ಹಿಂದೆ ಇರುವುದು.

ಮಗುವಿನ ತಟ್ಟೆಯಲ್ಲಿ ಅವನು ತಿನ್ನಲಿಕ್ಕಷ್ಟೇ ಬೇಕಾದ ತಿಂಡಿ ಇರುತ್ತದೆ; ತಾಯಿಯ ಕಪಾಟಿನಲ್ಲಿ ಆ ಮಗುವಿಗೆ, ಮನೆ-ಮಂದಿಗೆ ಬೇಕಾದ ತಿಂಡಿತಿನಿಸು ಇರುತ್ತವಷ್ಟೆ. ಅದೇ ರೀತಿ ಗೃಹಸ್ಥನ ಬಳಿ ಇರುವುದಕ್ಕಿಂತಲೂ ಹೆಚ್ಚಿನ ಸಂಪತ್ತು ವಿರಕ್ತನ ಬಳಿ ಇರುವುದು ಸ್ವಾಭಾವಿಕ. ಹಾಗಿದ್ದಾಗ ಗುರು-ಜಂಗಮರು ಮೋಹಿತರಾಗಿ, ಸ್ವಾರ್ಥಿಗಳಾಗಿ ಆ ಸಂಪತ್ತನ್ನು ತಾವೇ ಕಬಳಿಸಲು ತೊಡಗಬಾರದು. ತಾವು ಕೇವಲ ರಕ್ಷಕರು ಮಾತ್ರ ಎಂಬ ಪ್ರಜ್ಞೆಯನ್ನು ಸದಾ ಜಾಗ್ರತವಾಗಿ ಇಟ್ಟುಕೊಂಡಿರಬೇಕು. ಅದು ಬಿಟ್ಟು ತಾವು ಅಧಿಕಾರಿಗಳಾದ ಮಠ-ಮಾನ್ಯಗಳ ಸಂಪತ್ತು ಸಮಾಜದ ಕೊಡುಗೆ ಎಂಬುದನ್ನು ಮರೆತು ತಮ್ಮ ವೈಯಕ್ತಿಕ ಆಸ್ತಿಯೆಂಬಂತೆ ಅಂದಾದುಂದಿಯಾಗಿ ವರ್ತಿಸಬಾರದು; ಸ್ವಾರ್ಥಕ್ಕಾಗಿ ಬಳಸಬಾರದು.

ಸಿದ್ಧರಾಮೇಶ್ವರರು ಕೇವಲ ಧನವೊಂದನ್ನೇ ಕುರಿತು ಹೇಳಿಲ್ಲ; ತನುಮನ ಧನ ಮೂರನ್ನೂ ಕುರಿತು ಪ್ರಸ್ತಾಪಿಸಿದ್ದಾರೆ. ಭಕ್ತರು ತಮ್ಮ ತನು-ಮನ-ಧನ ಮೂರನ್ನೂ ಧರ್ಮಕ್ಕಾಗಿ ಸಲ್ಲಿಸಲು ಮುಂದಾಗಬಹುದು. ಕೆಲವರು ತಮ್ಮ ತನುವನ್ನು ಧರ್ಮಜಾಗೃತಿಗಾಗಿ, ಮನಸ್ಸನ್ನು ಧರ್ಮಬೋಧೆಗಾಗಿ, ಧನವನ್ನು ದಾಸೋಹಕ್ಕಾಗಿ ಸಲ್ಲಿಸಲು ಮುಂದಾದಾಗ ಗುರು-ಜಂಗಮರು ಅವುಗಳ ದುರ್ವಿನಿಯೋಗ, ಅಪವ್ಯಯ ಮಾಡಿ ಸಮಾಜಕ್ಕೆ ದ್ರೋಹವೆಸಗಬಾರದು. ಅಂಥವರನ್ನು ಪರಮಾತ್ಮನು ಶಿಕ್ಷಿಸದೇ ಬಿಡನು.

ವಿಶ್ವಕಲ್ಯಾಣ ಮಿಶನ್ ಆಜೀವ ಸದಸ್ಯರು

೧. ಶ್ರೀ ಸಿದ್ಧರಾಮಪ್ಪಾ ಸುಲಗಂಟಿ, ಬೀದರ ೧೦೦೧-೦೦

೨. ಶರಣೆ ಕೌಶಲ್ಯಾಬಾಯಿ ಗದಿಗೆಪ್ಪಾ ಹೊಳಕುಂದಿ, ಬಸವಕಲ್ಯಾಣ ೧೦೦೧-೦೦

ಕಾಣಿಕೆ: ಶರಣೆ ಚಂದ್ರಮ್ಮ ನಾಗಣ್ಣ ಜಾಬಶೆಟ್ಟಿ, ಬೀದರ ೧೦೦೧-೦೦

ವಿಶ್ವ ಕಲ್ಯಾಣ ಮಿಶನ್ ಪರವಾಗಿ ಕೃತಜ್ಞತೆ ಸಲ್ಲಿಸುವುದೇ ಅಲ್ಲದೆ ಶುಭಾಶೀರ್ವಾದಗಳನ್ನು ಹಾರೈಸುತ್ತೇವೆ.

— ಛೇರ್ಮನ್

‘೩೯ ನೆಯ ಸ್ವಾತಂತ್ರ್ಯೋತ್ಸವದ ಸವಿ ನೆನಪಿಗಾಗಿ’

ವೀರಯೋಧ ನೇತಾಜಿ

— ಶಿ ಪಾ. ಮ.

“ಓ....ಭಾರತ ಮಾತೆಯ ಮಕ್ಕಳೆ! ನೀವೆಲ್ಲಾ ಮುಂದೆ ಬನ್ನಿ, ದೇಶಕ್ಕಾಗಿ ತ್ಯಾಗ–ಬಲಿದಾನಗಳನ್ನು ಮಾಡಬೇಕಾಗಿದೆ. ಬಂಧನದಲ್ಲಿ ಸಿಕ್ಕು ನರಳುತ್ತಿರುವ ನಮ್ಮ ಮಾತೆಯನ್ನು ಬಿಡುಗಡೆ ಮಾಡಬೇಕಾಗಿದೆ. ನೀವಾರೂ ಗುಲಾಮರಲ್ಲ. ಹಾಕಿದ ಕೂಳನ್ನು ತಿಂದು ಬೀಳುವ ಕುನ್ನಿಗಳಲ್ಲ. ಭಾರತಾಂಬೆಯ ಅಮೃತ ಪುತ್ರರು. ಅಷ್ಟೇ ಅಲ್ಲ ಸಿಂಹಗಳು. ಮದಸಿದ ಆನೆಯಂತಿರುವ ಬ್ರಿಟಿಷ್ ಸಾಮ್ರಾಜ್ಯವನ್ನು ತುಂಡರಿಸಬೇಕು. ರಕ್ತದ ಕಾಲುವೆ ಹರಿಸಬೇಕು. ಭಾರತದಲ್ಲಿನ ಕೆಂಪು ಮುಖ ಕಾಣದಂತಾಗಬೇಕು. ಇದು ಭಾರತ ಮಾತೆಯ ಸುಂದರ ಕನಸಾಗಿದೆ. ಇದನ್ನು ನನಸು ಮಾಡುವ ಭಾರ ನಮ್ಮ ಮೇಲಿದೆ. ಗುಲಾಮತನದಲ್ಲಿ ಸಿಕ್ಕು ನರಳಿ ಸಾಯುತ್ತಿರುವ ನಾವುಗಳೆಲ್ಲ ಸ್ವತಂತ್ರ ಭಾರತವನ್ನು ಕಟ್ಟಬೇಕು. ಸ್ವತಂತ್ರ ಭಾರತದ ಪ್ರಜೆಗಳಾಗಿ ಬಾಳಬೇಕು.” ಹೀಗೆ ಒಂದೇ ಸಮನೆ ನಿರರ್ಗಳವಾಗಿ ಸಿಂಹವಾಣಿ ಮೊಳಗುತ್ತಿತ್ತು. ಈ ಸಿಂಹವಾಣಿ ಯಾವುದೆಂದು ಊಹಿಸುವಿರಾ ? ಇನ್ನಾರದೂ ಅಲ್ಲ. ಬಂಧನದಿಂದ ಬಿಡುಗಡೆ ಮಾಡಲು ಅಹೋ ರಾತ್ರಿ ಶ್ರಮಿಸಿದ ವೀರ ಯೋಧ ನೇತಾಜಿ ಸುಭಾಷ್ಚಂದ್ರ ಭೋಸ್‌ರದು.

ಭೋಸರು ಕ್ರಾಂತಿಕಾರಿಗಳು. ಮಹಾತ್ಮಾ ಗಾಂಧಿಯವರು ಶಾಂತಿದೂತರೆನ್ನಿಸಿಕೊಂಡರೆ, ತದ್ವಿರುದ್ಧವಾಗಿ ನೇತಾಜಿಯವರು ಕ್ರಾಂತಿ ದೂತರೆನ್ನಿಸಿ ಕೊಂಡರು. ‘ಶಾಂತಿ, ಶಾಂತಿ, ಶಾಂತಿ’ ಎಂದು ಗಾಂಧೀಜಿ ಉಚ್ಚರಿಸಿದರೆ ಕ್ರಾಂತಿ, ಕ್ರಾಂತಿ, ಕ್ರಾಂತಿ ಎಂದು ನೇತಾಜಿ ಉಚ್ಚರಿಸುತ್ತಿದ್ದರು. ಒಂದು ಸಾರ್ವಜನಿಕ ಸಭೆಯನ್ನುದ್ದೇಶಿಸಿ ಗಾಂಧೀಜಿ ಮತು ನೇತಾಜಿ, ಒಂದೇ ವೇದಿಕೆಯ ಮೇಲೆ ಭಾಷಣ ಮಾಡುತ್ತಿದ್ದರು. ಗಾಂಧೀಜಿಯವರು ಭಾಷಣ ಮಾಡುವಾಗ ಜನ ಸಮೂಹ ಶಾಂತ ಚಿತ್ತದಿಂದ ಕೂಡಿತ್ತು. ಎಷ್ಟೊಂದು ಶಾಂತಿ ನೆಲೆಸಿತ್ತು ಎಂದರೆ ಚಾಕುವಿನಿಂದ ತಿವಿದರೂ ರಕ್ತ ಹೆಪ್ಪು ಗಟ್ಟಿದಷ್ಟು ಶಾಂತವಾಗಿತ್ತು. ನಂತರದಲ್ಲಿ ನೇತಾಜಿ ಮಾತನಾಡಲು ಪ್ರಾರಂಭಿಸಿದರು. “ಓ....ವೀರಯೋಧರೆ ಎಚ್ಚತ್ತು ಕೊಳ್ಳಿರಿ. ಶಾಂತಿ ಮಂತ್ರ ಜಪಿಸುವಷ್ಟು ನಮಗೆ ಸಮಯವಿಲ್ಲ. ಶಾಂತಿ ಮಂತ್ರ ಉಚ್ಚರಿಸುತ್ತ ಕುಳಿತರೆ ಸ್ವಾತಂತ್ರ್ಯ ಸಿಕ್ಕುವುದು ತಡವಾದೀತು. ಮುಳ್ಳನ್ನು ಮುಳ್ಳಿನಿಂದಲೇ ತೆಗೆಯಬೇಕು.

‘ಅಕ್ಕಿಯ ಕಾಳಿನಷ್ಟು ಬೆಂಕಿ. ಅರಣ್ಯವನ್ನೇ ದಹಿಸುತ್ತದೆ’ ಬ್ರಿಟಿಷ ಸಾಮ್ರಾಜ್ಯವೆಂಬ ಅರಣ್ಯವನ್ನು ಭಾರತದ ವೀರ ಪ್ರಜೆಗಳೆಂಬ ಬೆಂಕಿಯ ಕಿಡಿಗಳು ಸುಟ್ಟು ಬಿಡುತ್ತವೆ.” ನೀವೆಲ್ಲ ಮನಸ್ಸು ಮಾಡಬೇಕು. ದೇಶಕ್ಕಾಗಿ ಪ್ರಾಣಾರ್ಪಣೆ ಮಾಡಲು ಮುಂದೆ ಬರಬೇಕು.” ಎಂದು ಮಾತನಾಡಿದರು. ಆಗ ಯುವಕರ ಕಣ್ಣಿನಿಂದ ಬಿಸಿನೀರಿನ ಹನಿಗಳು ಒಸರಿ ಬಿದ್ದವು. ಹೃದಯ ಕಾವೇರಿತು. ಹೆಪ್ಪುಗಟ್ಟಿದ್ದ ರಕ್ತ ಬಿಸಿಗೊಂಡು ಮೈಯಲ್ಲ ಹರಿದಾಡಿತು. ತಮ್ಮ ಚರ್ಮ ಕತ್ತರಿಸಿ ರಕ್ತದಿಂದ ಸಹಿ ಮಾಡಲು ನೇತಾಜಿಯ ಹತ್ತಿರ ಬಂದು ಸಾಲಾಗಿ ನಿಂತರು. ನೇತಾಜಿಯ ಒಂದು ಭಾಷಣದಿಂದ ದೇಶಕ್ಕಾಗಿ ಸಾವಿರಾರು ಜನ ಯುವಕರು ವೀರ ಯೋಧರಾಗಿ ಪ್ರಾಣಾರ್ಪಣೆ ಮಾಡಲು ಸಿದ್ಧರಾಗಿ ಮುಂದೆ ಬಂದರು.

ನೇತಾಜಿಗೆ ಇಂಥ ಅದ್ಭುತವಾದ ಭಾಷಣ ಕಲೆ ಪ್ರಾಪ್ತವಾದುದು ಹೇಗೆ ? ಅವರು ಭಾಷಣವನ್ನು ಪರಿಣಾಮಕಾರಿ ಆಗುವಂತೆ ಮಾಡುವ ಕಲೆ ಕಲಿತಿದ್ದು ಯಾರಿಂದ ? ಇದಕ್ಕೆ ಉತ್ತರಿಸುವುದಾದರೆ ನೇತಾಜಿ ವಿದ್ಯಾರ್ಥಿಯಾಗಿದ್ದಾಗ ವಿವೇಕಾನಂದರ ಭಾಷಣವನ್ನು ಕೇಳಿದ್ದರು. ಅವರ ಪಾಂಚಜನ್ಯದಂತಹ ಕಂಠ ನೇತಾಜಿಯನ್ನು ಸೆರೆ ಹಿಡಿದಿತ್ತು, ಆದ್ದರಿಂದ ಅವರ ಶೈಲಿಯಲ್ಲಿಯೇ ಭಾಷಣವನ್ನು ಮಾಡುತ್ತಿದ್ದರು. ಹೀಗಾಗಿ ನೇತಾಜಿಯವರ ವೀರತನದ, ಕೆಚ್ಚೆದೆಯಿಂದ ತುಂಬಿ ಬರುತ್ತಿದ್ದ ಮಾತುಗಳು ಅನೇಕ ಯುವಕರನ್ನು ಪ್ರಚೋದಿಸುತ್ತಿತ್ತು ; ತ್ಯಾಗ ಮಾಡಲು ಎಳೆತಂದು ಒಂದು ಯುವ ಜನತೆಯ ಸಮೂಹವನ್ನು ಕಟ್ಟಿತು. ಅದಕ್ಕೆ ‘ಭಾರತೀಯ ‘ರಾಷ್ಟ್ರೀಯ ಸೈನ್ಯ’ ವೆಂದು ಕರೆಯಲಾಯಿತು. [I ndian National Army]

ಭಾರತ ಭೂಮಿಯ ಮಣ್ಣಿನಲಿ ಜನಿಸಿ, ಮಾತೃ ಭೂಮಿಯನ್ನು ತನ್ನದಾಗಿಸಿಕೊಳ್ಳಲು ಹೋರಾಡಿದ ವೀರ ಯೋಧರು ಸಾವಿರಾರು ಜನರು. ಸ್ವಾತಂತ್ರ್ಯ ಸಂಗ್ರಾಮದ ಆಕಾಶದಲ್ಲಿ, ದೇಶಕ್ಕಾಗಿ ಪ್ರಾಣಾರ್ಪಣೆಗೈದ ವೀರ ಯೋಧರಾದ ನೇತಾಜಿ, ಆಝಾದ, ಭಗತ್‌ಸಿಂಗ್–ಈ ಮೂವರು ಮಿನುಗು ತಾರೆಗಳು. ಆಝಾದರ ಧೈರ್ಯ–ಸಾಹಸಗಳನ್ನು ಕುರಿತು ಮಕ್ಕಳು ಕೇಳಿದರೆ ಮೈಯೆಲ್ಲಾ ನವಿರೇಳುತ್ತದೆ. ಸಿಂಗ್‌ರ ಉಪಾಯಗಳು–ವಿಚಾರಗಳು ಎಂಥಾ ಯುವಕನನ್ನು ಸಹ ಚತುರನನ್ನಾಗಿ ಮಾಡುತ್ತವೆ. ನೇತಾಜಿಯ ಸಂಘಟನಾ ಶಕ್ತಿ, ಭದ್ರವಾದ ಸೈನ್ಯ ಕಟ್ಟುವ ಉಪಾಯ ಎಂಥವನನ್ನೂ ನಾಯಕನನ್ನಾಗಿ ಮಾಡುತ್ತದೆ. ಈ ಮೂವರೂ ವ್ಯಕ್ತಿಗಳಲ್ಲ, ಮಹತ್ ಶಕ್ತಿಗಳು. ದೇಶಕ್ಕಾಗಿ ಮಾಡಿದ ತ್ಯಾಗ, ಇತಿಹಾಸದ ಪುಟಗಳಲ್ಲಿ ಸುವರ್ಣಾಕ್ಷರಗಳಿಂದ ಲಿಖಿತ ಗೊಂಡಿವೆ. ಆಝಾದರು ಪ್ರಾಯದಲ್ಲೇ ಗುಂಡು ಬಡಿಯಲ್ಪಟ್ಟು ಸಾವಿಗೆ ಈಡಾದರು ; ಭಗತ್ ಸಿಂಗ್‌ರು ಗಲ್ಲಿಗೇರಬೇಕಾಯಿತು. ನೇತಾಜಿಯ ಸಾವಿನ ಗುಟ್ಟು ರಟ್ಟಾಗದೆ ಹೋಯಿತು. ವಿಮಾನಾಪಘಾತದಲ್ಲಿ ಅಸು ನೀಗಿದರೆಂದು

ಟೋಕಿಯೋ ರೇಡಿಯೋ ವರದಿಮಾಡಿತು. ನೇತಾಜಿ ಕೊನೆಯ ಘಳಿಗೆಯವರೆಗೂ ನೇತಾಜಿ (ನಾಯಕ) ಯಾಗಿಯೇ ಮಾತೆಯ ಮಡಿಲು ಸೇರಿದರು.

ವಿದ್ಯಾರ್ಥಿಯಾಗಿದ್ದಾಗಲಾದರೂ ನೇತಾಜಿ ಹಿಂದುಳಿದಿದ್ದರೆ ? ಇಲ್ಲ ! ಅವರಲ್ಲಿ ದೇಶಾಭಿಮಾನ–ಸ್ವಾಭಿಮಾನ ತುಂಬಿ ತುಳುಕುತ್ತಿದ್ದವು. ಅವರು ವಿದ್ಯಾರ್ಥಿಯಾಗಿದ್ದಾಗ ಒಂದು ದಿನ ತರಗತಿಯಲ್ಲಿ ನಡೆದ ಘಟನೆ ನೆನಪಿಸಿ ಕೊಳ್ಳಬಹುದು. ಆಂಗ್ಲ ಪ್ರಾಧ್ಯಾಪಕರು ಪಾಠ ಮಾಡುತ್ತಿದ್ದರು. ಪಾಠ ಮಾಡುತ್ತ ಭಾರತೀಯ ವಿದ್ಯಾರ್ಥಿಗಳನ್ನು ತೀರ ತುಚ್ಛವಾಗಿ ಹೀಯಾಳಿಸಿ ವ್ಯಂಗ್ಯದ ಮಾತುಗಳನ್ನಾಡಿದರು. ಅದು ನೇತಾಜಿಯವರ ಸ್ವಾಭಿಮಾನಕ್ಕೂ, ದೇಶಾಭಿಮಾನಕ್ಕೂ, ಧಕ್ಕೆ ತಂದಿತು. ತಡೆದು ಕೊಳ್ಳಲಾಗಲಿಲ್ಲ. ಓಡಿ ಹೋಗಿ ಕತ್ತಿನ ಪಟ್ಟಿ ಹಿಡಿದವರೆ, ಪಾದರಕ್ಷೆಯ ಮೋಕ್ಷವನ್ನು ಕೊಟ್ಟರು. ವಿದ್ಯಾರ್ಥಿಯೊಬ್ಬನು ಆಂಗ್ಲ ಪ್ರಾಧ್ಯಾಪಕನನ್ನು ಹೊಡೆದದ್ದು ಅದೇ ಮೊದಲ ಸಲ. ಅದು ಇಡೀ ಇಂಗ್ಲೀಷ ಸಾಮ್ರಾಜ್ಯವನ್ನೇ ತಲ್ಲಣಗೊಳಿಸಿತು.

ಕೆರಳಿದ ಹುಚ್ಚುನಾಯಿ ಸಿಕ್ಕ ಸಿಕ್ಕವರನ್ನು ಕಚ್ಚುವಂತೆ, ಆಂಗ್ಲ ಪ್ರಾಧ್ಯಾಪಕರು, ಅಧಿಕಾರಿಗಳು, ಕೇವಲ ನೇತಾಜಿಯನ್ನಷ್ಟೇ ಅಲ್ಲ, ಇನ್ನಿತರ ಭಾರತೀಯ ವಿದ್ಯಾರ್ಥಿಗಳಿಗೆಲ್ಲಾ ಅನ್ಯಾಯ ಮಾಡಿದರು. I. C. S. ಪರೀಕ್ಷೆಯಲ್ಲಿ ಚೆನ್ನಾಗಿ ಮಾಡಿದ ನೇತಾಜಿಗೆ ಕೇವಲ ಕುದುರೆ ಸವಾರಿಯ ಪರೀಕ್ಷೆಯಲ್ಲಿ ಫೇಲು ಮಾಡಿ ಉನ್ನತ ಹುದ್ದೆಗೆ ಹೋಗುವ ಅವಕಾಶ ಕೊಡಲಿಲ್ಲ. ಇದು ತಮಗೆ ಆದ ವೈಯಕ್ತಿಕ ಅನ್ಯಾಯವಷ್ಟೆ ಅಲ್ಲ, ಭಾರತಮಾತೆಗೆ ಆದ ಅನ್ಯಾಯವೆಂದು ಪ್ರತಿಭಟಿಸಿ ನಿಂತರು. ಯುವಕರನ್ನು ಸಂಘಟಿಸತೊಡಗಿದರು. ಸ್ವತಂತ್ರ ಭಾರತವನ್ನು ಕಟ್ಟುವ ಕೂಗು ಹಾಕಿದರು. ಆ ಕೂಗು ನರಿಯ ಕೂಗಾಗಲಿಲ್ಲ. ಸಿಂಹ ಘರ್ಜನೆಯಾಯಿತು. ಈ ಘರ್ಜನೆ ಕೇಳಿದ ಅನೇಕ ಬ್ರಿಟಿಷ ಸಾಮ್ರಾಜ್ಯವೆಂಬ ಕಾಡಿನಲ್ಲಿ ವಾಸಿಸಿದ, ಅಧಿಕಾರಿಗಳೆಂಬ ಪ್ರಾಣಿಗಳು ಬಾಲ ಮುದುರಿಸಿಕೊಂಡು ಗವಿ ಸೇರಿದವು. ನೇತಾಜಿಯವರ ಸಿಂಹವಾಣಿಯಿಂದ ಘರ್ಜಿಸಿದ ನುಡಿಗಳು ಇಂದಿನವರೆಗೂ ಯುವಜನತೆಯ ಕಿವಿಯಮೇಲೆ ರವಗುಟ್ಟುತ್ತಿವೆ. ನೇತಾಜಿಯವರ ಜೀವನಾಂತ್ಯದ ಬಗೆಗೆ ಹಲವಾರು ವಿವಾದಗಳಿವೆ.' ಅಲ್ಲದೆ ನೇತಾಜಿಯು ಹಿಡಿದ ಗುರಿ ಮುಟ್ಟುವ ಮುನ್ನವೇ ದುರ್ಮರಣಕ್ಕೀಡಾದರೋ ಅಥವಾ ಅಜ್ಞಾತವಾಸಿಗಳಾದರೋ ಇನ್ನೂ ನಿರ್ಧರಿಸಲಾಗಿಲ್ಲ. ಅವರು ಸ್ವಾತಂತ್ರ್ಯ ಸಂಗ್ರಾಮದ ಮುಂಚೂಣಿಯಲ್ಲಿದ್ದಿದ್ದರೆ ಅವರ ಸಾಧನ ವಿಧಾನ ಯಶಸ್ವಿಯಾಗುತ್ತಿತ್ತೋ ಇಲ್ಲವೋ ಹೇಳಲಾಗದು. ಅವರ ಬದುಕಿನಿಂದ ನಾವು ಕಲಿಯಬೇಕಾದ್ದು ಧೈರ್ಯ–ಸಂಘಟನಾ ಕಲೆಯನ್ನು, ಆತ್ಮ ವಿಶ್ವಾಸ–ಸಮರ್ಪಣಾ ಮನೋಭಾವಗಳನ್ನು, ಸ್ವಾಭಿಮಾನ ಮತ್ತು ಮಾತೃದೇಶಾಭಿಮಾನವನ್ನು. ಹೀಗಾಗಿ ಯುವಜನಾಂಗಕ್ಕೆ ಅವರೊಂದು ಚಿರಂತನ ದಾರಿದೀಪ.

॥ ಓಂ ಶ್ರೀ ಗುರುಬಸವಲಿಂಗಾಯನಮಃ ॥

ಬಸವ ತತ್ತ್ವ ಪರಿಷತ್ (ರಿಜಿಸ್ಟರ್ಡ್ ಟ್ರಸ್ಟ್)

ವಿಶ್ವಗುರು ಬಸವಣ್ಣನವರ ದಿವ್ಯ ಜೀವನ, ಸಂದೇಶಗಳನ್ನು ವಿವಿಧ ರೀತಿಯಲ್ಲಿ ಪ್ರಚಾರ ಮಾಡಲೋಸುಗ ಬಸವ ತತ್ತ್ವ ಪರಿಷತ್ ಎಂಬ ಟ್ರಸ್ಟನ್ನು ರೂಪಿಸಲಾಗಿದೆ. ವಿಶ್ವ ಕಲ್ಯಾಣ ಮಿಷನ ಸಹಯೋಗದಿಂದ ಕೆಲಸ ಮಾಡುತ್ತಿದ್ದರೂ ಇದೊಂದು ಸ್ವತಂತ್ರ ವಿಶ್ವಸ್ಥ ಸಂಸ್ಥೆಯಾಗಿ ಕಾರ್ಯನಿರ್ವಹಿಸುವುದು.

ಬಸವ ತತ್ತ್ವ ಪರಿಷತ್—ಧ್ಯೇಯೋದ್ದೇಶ

1. ವಾರ್ಷಿಕವಾದ ಭಕ್ತಿ ಪಕ್ಷದ ಸಮ್ಮೇಳನಗಳನ್ನು ನಡೆಸುವುದು. ತರಬೇತಿ ಶಿಬಿರಗಳನ್ನು ಏರ್ಪಡಿಸುವುದು.
2. ಬಸವ ಧರ್ಮದ ರೂಪುರೇಷೆಗಳನ್ನು, ಸಂವಿಧಾನವನ್ನು (Constitution) ನಿರ್ಧರಿಸುವ ಒಂದು ತತ್ತ್ವ ನಿರ್ಣಯ ಸಮಿತಿಯ ಮೂಲಕ ತಾತ್ತ್ವಿಕ ನೆಲೆಗಟ್ಟು ನಿರ್ಮಿಸುವುದು.
3. ತತ್ತ್ವ ನಿರ್ಣಾಯಕ ಸಮಿತಿ ನಿರ್ಣಯಿಸಿದುದನ್ನು "ಬಸವ ದಳ" ಕಾರ್ಯನಿರ್ವಾಹಕ ಯುವ ಸಂಘಟನೆಯ ಮೂಲಕ ಆಚರಣೆಗೆ ತರುವುದು.
4. ಬಸವ ತತ್ತ್ವ ಪರಿಷತ್‌ನ ಜಿಲ್ಲಾವಾರು, ತಾಲ್ಲೋಕಾವಾರು, ಕೇಂದ್ರಗಳನ್ನು ತೆರೆಯುವುದು ಮತ್ತು ಬಸವ ದಳವನ್ನು ಸಂಘಟಿಸುವುದು.
5. ಸಾಮೂಹಿಕ ಪ್ರಾರ್ಥನಾ ಸಭೆಗಳನ್ನು ಅಲ್ಲಲ್ಲೇ ಸಂಘಟಿಸುವುದು. ಹೀಗೆಲ್ಲ ಹಲವಾರು ಉದ್ದೇಶಗಳಿವೆ. ಬಸವ ತತ್ತ್ವ ಪರಿಷತ್ ಟ್ರಸ್ಟ್ ಕಮಿಟಿಯ ವಿವರ ಹೀಗಿದೆ.

ಈ ಸಂಸ್ಥೆಗೆ ಇನ್‌ಕಮ್ ಟ್ಯಾಕ್ಸ್ ಕಮೀಷನರಿಂದ ದಿ. 16-5-1985 ರಂದು ಹೊರಡಿಸಿದ ಆಜ್ಞೆ No. 718-124/84 CI T (I) ಪ್ರಕಾರ 80 GI T Act 1961 ರಿಯಾಯಿತಿ ಸಹ ದೊರೆತಿದೆ. ಈ ಆಜ್ಞೆಯು 1-4-85 ರಿಂದ 31-3-1986 ರ ವರೆಗೆ ಚಾಲ್ತಿಯಲಿದ್ದು, ಪುನಃ ನವೀಕರಿಸಲ್ಪಡುತ್ತದೆ. ದಾನಿಗಳು ಇದರ ಸದುಪಯೋಗ ಪಡೆದುಕೊಳ್ಳಬೇಕೆಂದು ಸೂಚಿಸುತ್ತೇವೆ. ಉದಾರವಾದ ದೇಣಿಗೆ ನೀಡಲು ಕೋರುತ್ತೇವೆ.

ಬಸವ ತತ್ತ್ವ ಪರಿಷತ್ (ರಿ. ಟ್ರಸ್ಟ್)
ಬಸವ ಮಂಟಪ, 24, ಎರಡನೆ ಬ್ಲಾಕು
ಕಾರ್ಡ್‌ರಸ್ತೆ, ರಾಜಾಜಿನಗರ, ಬೆಂಗಳೂರು-೫೬೦೦೧೦

ಹೊಸ ಪ್ರಕಟಣೆಗಳು ಮತ್ತು ದೊರೆಯುವ ವಸ್ತುಗಳು

ವಿಶ್ವಕಲ್ಯಾಣ ಮಿಷನ್ ಹೊಸದಾಗಿ ಪ್ರಕಟಿಸಿರುವ ಪುಸ್ತಕಗಳು ಇವು

೧. ಶ್ರೀ ಬಸವೇಶ್ವರ ಪೂಜಾ ವ್ರತ.

$\frac{1}{8}$th ಡೆಮ್ಮಿ ೪೪ ಪುಟಗಳು: **ಬೆಲೆ ೩-೦೦ ರೂಪಾಯಿ**

ಲೇಖಕಿ:- ಜಗದ್ಗುರು ಮಾತೆ ಮಹಾದೇವಿ

ಕಲ್ಯಾಣ-ಕಿರಣದ ಜುಲೈ ಸಂಚಿಕೆಯನ್ನು ನೋಡಿ ಪ್ರಭಾವಿತರಾದ ಅನೇಕರು ಶ್ರೀ ಬಸವೇಶ್ವರ ಪೂಜಾ ವ್ರತವನ್ನು ಶ್ರಾವಣ, ನವರಾತ್ರಿ ಮುಂತಾದ ದಿನಗಳಲ್ಲಿ ಮಾಡಲಿಚ್ಛಿಸಿ ಪತ್ರ ಬರೆದು ಸ್ವತಂತ್ರ ಗ್ರಂಥವಾಗಿ ಪ್ರಕಟಿಸಲು ಸೂಚಿಸಿದ್ದಾರೆ. ಆದರಂತೆ ಸ್ವತಂತ್ರವಾದ ಗ್ರಂಥವನ್ನಾಗಿ ಪ್ರಕಟಿಸಲಾಗಿದೆ.

ಪುಸ್ತಕ ಬೇಕಾದವರು ಅಂಚೆವೆಚ್ಚ ೧ ರೂ ಸೇರಿಸಿ ೪ ರೂ ಕಳಿಸಬೇಕು.

೨. ಸಮಸ್ಯೆ-ಸಮಾಧಾನ 1/8 ಕ್ರೌನ್

ಲೇಖಕಿ:- ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ

ಮಾಸಪತ್ರಿಕೆ ಕಲ್ಯಾಣ ಕಿರಣ ೧೯೭೦ರಲ್ಲಿ ಪ್ರಾರಂಭವಾಯಿತು. ಅದರಲ್ಲಿ ಅತ್ಯಂತ ಜನಪ್ರಿಯ ವಿಭಾಗ ಸಮಸ್ಯೆ-?-ಸಮಾಧಾನ ! ಓದುಗರ ಪ್ರಶ್ನೆಗಳಿಗೆ ಇಲ್ಲಿ ಉತ್ತರ ವಿದೆ. ಅಂದಿನಿಂದ ಇಂದಿನವರೆಗೆ ಪ್ರಕಟವಾದ ಪ್ರಶ್ನೋತ್ತರಗಳ ಸಂಗ್ರಹ ಈ ಗ್ರಂಥದಲ್ಲಿದೆ. **ಬೆಲೆ ೧೮-೦೦** ಅಂಚೆ ವೆಚ್ಚ ೨ ರೂ.

೩. "ಹೃದಯ ವೀಣೆ ಮೀಂಟಿದಾಗ" ಕವನಗಳ ಸಂಗ್ರಹ 1/8 ಕ್ರೌನ್

ಲೇಖಕಿ:- ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ

ಬೆಲೆ ೮-೦೦ ಪುಟ ೧೨೦

ಪೂಜ್ಯರು ಬರೆದ ಹಲವಾರು ಭಾವಗೀತೆ, ದೇಶಭಕ್ತಿ ಗೀತೆಗಳ ಸಂಗ್ರಹ. ಹಾಡಲಿಕ್ಕೆ ಬರುವಂತಹ ಗೀತೆಗಳಿಂದ ಕೂಡಿದೆ.

೪. ವಿವಾಹ ವಿಧಾನ

ಲೇಖಕಿ:- ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ

ಬೆಲೆ -ಮುಂದೆ ತಿಳಿಸಲಾಗುವುದು.

ಸರಳವಾಗಿ ತಾತ್ತ್ವಿಕವಾಗಿ ಹೇಗೆ ಮದುವೆಯನ್ನು ಮಾಡಬಹುದೆಂಬ ಬಗ್ಗೆ ಸರಳ ಭಾಷೆಯಲ್ಲಿ ಬರೆಯಲ್ಪಟ್ಟ ಗ್ರಂಥ ಈಗ ಅಚ್ಚಿನಲ್ಲಿದೆ.

ಬಾಳ-ಬಟ್ಟೆ

— ಮಂಗಳಾದೇವಿ ಕಪ್ಪರದ.

ಜೀವನವನ್ನು ಪ್ರತಿಯೊಂದು ಜೀವಿಯೂ ನಡೆಸುತ್ತದೆ. ಸೂಕ್ಷ್ಮವಾದ ಜೀವಿಗಳಿಂದ ಹಿಡಿದು ಅತಿ-ದೊಡ್ಡ ಜೀವಿಯವರೆಗೂ, ಕೀಳಾದ ಕ್ರಿಮಿಯಿಂದ ಹಿಡಿದು ಅತ್ಯುನ್ನತ ಬುದ್ಧಿ ಮಟ್ಟದ ಮಾನವನವರೆಗೂ ಎಲ್ಲವೂ, ಎಲ್ಲರೂ, ತಮ್ಮದೇ ಆದ ಜೀವನವನ್ನು ಹೊಂದಿರುತ್ತವೆ.

ಪ್ರಾಣಿಗಳು ತಮ್ಮ ಜೀವಿತವನ್ನು ಊಟ, ಬೇಟೆ, ರಕ್ಷಣೆ, ಸಂತಾನೋತ್ಪತ್ತಿ ಇಷ್ಟರಲ್ಲಿಯೋ ಕಳೆಯುತ್ತವೆ. ಅವುಗಳಲ್ಲಿ ಬುದ್ಧಿ ಮಟ್ಟ ಇನ್ನೂ ಮುಂದುವರಿದಿರುವುದಿಲ್ಲ. ಆದ್ದರಿಂದ ಈ ರೀತಿಯಾಗಿ ವರ್ತಿಸುವುದು ಸಹಜ. ಆದರೆ, ಮುಂದುವರಿದ, ಬುದ್ಧಿ ಜೀವಿಯಾದ ಮಾನವನೂ ಈ ರೀತಿಯಾಗಿ ಜೀವನ ನಡೆಸುವುದು ಹೇಯ ತಾನೆ ? ಮಾನವನು ಈಗ ಎಷ್ಟೊಂದು ಮುಂದುವರಿದಿರುವನು ಎಂದರೆ ಆಕಾಶದಲ್ಲಿ ಮಿಂಚಿನಂತೆ ಹೋಗಿ ಈ ಪ್ರಪಂಚವನ್ನೇ ಸುತ್ತಿ ಬರಬಲ್ಲ ; ಅಲ್ಲದೆ ಆಕಾಶದಲ್ಲೇ ಯುದ್ಧಗಳನ್ನು ಮಾಡಬಲ್ಲ. ನ್ಯೂಕ್ಲಿಯರ್ ಬಾಂಬ್‌ಗಳನ್ನೇ ಎಸೆದು ಇಡೀ ದೇಶ, ದೇಶಗಳನ್ನೆಲ್ಲಾ ಸುಟ್ಟು ಬಿಡಬಲ್ಲ. ಮೀನಿನಂತೆ ಸಾಗರದ ತಳದವರೆಗೆ ಹೋಗಿ ಈಜಿ ಬರಬಲ್ಲ. ದೇಶ, ಕಾಲಗಳನ್ನು ಮೀರಿಸುವ ಮಾನವನು ಭೂಮಿಯ ಮೇಲೆ ಎಲ್ಲೆಂದರಲ್ಲಿ ಅಲ್ಪ-ಕಾಲದಲ್ಲಿಯೇ ಸಂಚರಿಸಿ ಬರಬಲ್ಲ. ಕುಳಿತಲ್ಲಿಂದಲೇ ಪ್ರಪಂಚದ ಮೇಲೆ ಜರುಗುವ ಅನೇಕ ಘಟನಾವಳಿಗಳನ್ನು ಕೇಳಬಲ್ಲ ಮತ್ತು ನೋಡಬಲ್ಲ. ಹೀಗೆ ವೈಜ್ಞಾನಿಕವಾಗಿ ಮನುಷ್ಯನು ತುಂಬಾ ಮುಂದುವರಿದಿದ್ದಾನೆ.

ಕೇವಲ ವಿಜ್ಞಾನದಿಂದಲೇ ಮಾನವ ಸಮಾಜವನ್ನು ಸುವ್ಯವಸ್ಥಿತವಾಗಿಯಾಗಲೀ, ಶಾಂತಿ-ಸಂತೃಪ್ತಿಯಿಂದಾಗಲಿ ಕಟ್ಟಲು ಸಾಧ್ಯವಿಲ್ಲ. ಉದಾಹರಣೆಗೆ ನ್ಯೂಕ್ಲಿಯರ್ ಬಾಂಬ್‌ಗಳು ಮಾನವ ಕುಲವನ್ನು ಸುಡಬಲ್ಲವೇ ವಿನಾ ಹಸಿವೆಯನ್ನು ತೃಪ್ತಿ ಮಾಡಲಾರವು. "ವಿಪರೀತ ಬುದ್ಧಿ ವಿನಾಶಕ್ಕೆ ದಾರಿ'' ಎಂಬ ಮಾತನ್ನರಿತು ವೇಗದಲ್ಲಿ ಸಾಗುವ ವಿಜ್ಞಾನಕ್ಕೆ ಬ್ರೇಕ್‌ನ್ನು ಹಾಕುತ್ತಾ ಸಾಗುವುದು ಅತಿ ಮುಖ್ಯ. ಧಾರ್ಮಿಕ ಪ್ರಜ್ಞೆ, ದೈವಭಕ್ತಿಗಳನ್ನು ವಿಜ್ಞಾನಿಯು ಅಳವಡಿಸಿಕೊಳ್ಳಬೇಕು. ವಿಜ್ಞಾನದಿಂದಲೇ ಸಮಾಜವನ್ನು ಅಥವಾ ಮನುಕುಲವನ್ನು ಸವ್ಯವಸ್ಥಿತವಾಗಿ ಶಾಂತಿಯುತವಾಗಿ ಸರ್ವಾಂಗೀಣವಾಗಿ ಕಟ್ಟಲು ಸಾಧ್ಯವಿಲ್ಲ. ಎಂಬುದನ್ನು ಮನಗಾಣ

ಬೇಕು. ಅದೇ ರೀತಿ ಕೇವಲ. ಧರ್ಮದಿಂದಲೂ ರಾಷ್ಟ್ರವನ್ನು ಅಚ್ಚುಕಟ್ಟಾಗಿ, ಬಲಿಷ್ಠವಾಗಿ ಕಟ್ಟಲು ಆಗದು. ಈ ಸಂದರ್ಭದಲ್ಲಿ ನಾವು ವಿಜ್ಞಾನಿ ಐನ್‌ಸ್ಟೀನ್‌ನ ಮಾತನ್ನು ಜ್ಞಾಪಿಸಿಕೊಳ್ಳಬಹುದು. ಅದೇನೆಂದರೆ "ಧರ್ಮವಿಲ್ಲದ ವಿಜ್ಞಾನ ಕುರುಡ, ವಿಜ್ಞಾನವಿಲ್ಲದ ಧರ್ಮ ಕುಂಟು'' ಎಂಬುದಾಗಿದೆ. ಸರಿ ; ಇನ್ನು ಮನುಷ್ಯನು ಯಾವ ರೀತಿಯಾಗಿ ಬದುಕಬೇಕು ?

ಮನುಷ್ಯನು ಕೇವಲ ಉಂಡುಟ್ಟು ಮಲಗಿದರೆ ಆತನ ಜೀವನವು ಪ್ರಾಣಿಗಳಿಗೂ ಮನುಷ್ಯನಿಗೂ ಯಾವುದೇ ವ್ಯತ್ಯಾಸವೇ ಇಲ್ಲದರಿಂದ, ಸಾರ್ಥಕತೆಯನ್ನು ಸಾಧಿಸದು. ಹಾಗಾದರೆ ಬುದ್ಧಿವಂತ ಜೀವಿ ಎನಿಸಿದ ಮಾನವನು ಆ ಹೆಸರಿಗೆ ತಕ್ಕಂತೆ ಸಾರ್ಥಕ ರೀತಿಯಲ್ಲಿ ವಿವೇಕ ಜ್ಞಾನ ಹಿಡಿದು ಜೀವನ ನಡೆಸಬೇಕು. ನಾನು ಯಾರು ? ನಾನು ಹುಟ್ಟಿ ಬಂದುದಕ್ಕೆ ಕಾರಣವೇನು ? ನನ್ನ ಮುಂದಿನ ಗುರಿ ಏನು ? ದೇವರಿದ್ದಾನೆಯೇ ? ಈ ಸಕಲ ಸೃಷ್ಟಿಗೆ ಕಾರಣವೇನು ? ಎಂಬುದನ್ನು ತಿಳಿದುಕೊಳ್ಳಲು ಪ್ರಯತ್ನಿಸಬೇಕು. ಅಲ್ಲದೇ, ಮಹಾತ್ಮರ–ಜ್ಞಾನಿಗಳ ದೃಷ್ಟಿಕೋನದಿಂದ ಈ ಜೀವನ ಹೇಗೆ ? ಹಾಗೂ ಅದರಲ್ಲಿ ತಾತ್ವಿಕ ಚಿಂತನ–ಮಂಥನದಿಂದ ನೋಡಿದರೆ, ಸರಿ ದೃಷ್ಟಿ ಯಾವುದು ? ಎಂಬುದನ್ನು ಆಲೋಚಿಸಿ, ಆತ್ಮ–ಕಲ್ಯಾಣಕ್ಕಾಗಿ ಪ್ರಯತ್ನಿಸಬೇಕು.

ಮಾತನಾಡುವಂತೆ, ಬರೆಯುವಂತೆ, ಬೋಧನೆ ಮಾಡುವಂತೆ ಈ ರೀತಿಯ ಉತ್ತಮ-ನಡೆಯನ್ನು ನಡೆಸುವುದು ಕಷ್ಟಸಾಧ್ಯವಾದಂಥ ಮಾತು, ಆದರೆ ಎಡ ಬಿಡದೆ ಪ್ರಯತ್ನಿಸಿದರೆ, ಸಮಯವನ್ನು ಹಾಳು ಮಾಡದೇ ಅದನ್ನು ಸರಿಯಾದ ರೀತಿಯಲ್ಲಿ ಉಪಯೋಗಿಸುತ್ತಾ ಹೋದರೆ ಖಂಡಿತ ಗುರಿ ಮುಟ್ಟುವೆವು. ಆದರೆ ಗುರಿ ಮುಟ್ಟುವಾಗ ಅನೇಕ ಕಷ್ಟ–ನಷ್ಟಗಳು ಬರಬಹುದು. ಎಡೆಬಿಡದ ತಾಪತ್ರಯಗಳು ಬರಬಹುದು ; ನಮ್ಮ ಗುರಿಯನ್ನೇ ಅಲ್ಲಾಡಿಸುವ ಸಂದರ್ಭಗಳು ಬರಬಹುದು. ಆದರೆ ಇವೆಲ್ಲವುಗಳನ್ನು ನಿವಾರಿಸಿಕೊಳ್ಳುತ್ತ ಗುರಿಯ ಕಡೆಗೆ ಸಾಗಬೇಕು. ಹೇಗೆಂದರೆ, ನಾವು ಒಂದು ಪರ್ವತವನ್ನು ಹತ್ತಬೇಕಾದರೆ, ದಾರಿಯಲ್ಲಿ ಬರುವ ದಿಬ್ಬ–ತಗ್ಗುಗಳನ್ನು ಕಲ್ಲು-ಮುಳ್ಳುಗಳನ್ನು ತುಳಿಯಲೇ ಬೇಕಾಗುತ್ತದೆ. ನಮ್ಮ ಗುರಿ ಪರ್ವತವನ್ನೇರಿ ವಿಜಯ ಪತಾಕೆಯನ್ನು ಹಾರಿಸುವುದು ಆಗಿರುವಾಗ ಮಾರ್ಗಮಧ್ಯದ ಕಷ್ಟಗಳನ್ನು ಅನುಭವಿಸಲೇ ಬೇಕು.

ಅದೇ ರೀತಿ ಆತ್ಮೋದ್ಧಾರ ಮಾಡಿಕೊಳ್ಳಲು, ಜನಕಲ್ಯಾಣ ಮಾಡಬೇಕೆಂದು ಹೊರಡುವಾಗ, ಜೀವನದಲ್ಲಿ ಅದೆಷ್ಟು ಕಷ್ಟ–ನಷ್ಟಗಳು, ಸೋಲುಗಳು ಬರುತ್ತವೆ. ಅವೆಲ್ಲವುಗಳನ್ನು ನಿವಾರಿಸಿಕೊಳ್ಳುತ್ತಾ ಮುನ್ನಡೆದರೆ ನಮ್ಮ ಗುರಿಯನ್ನು

ಮುಟ್ಟಿಯೇ ತೀರುತ್ತೇವೆ. ಅಂಥ ಯಶಸ್ಸಿಗೆ ಆತ್ಮಬಲ ಮುಖ್ಯ. ಇದನ್ನು ಈ ರೀತಿಯಾಗಿ ಹೇಳಬಹುದು.

ಜೀವನದ ರಂಗದೊಳು
    ಅಂಜದಿರು ನೀನೆಂದೂ ;
ಹೆಜ್ಜೆಯಿಡು ವೇಗದೊಳು
    ಆ ಗುರಿಯ ಮುಟ್ಟಲೆಂದು.
ಎಡರು–ತೊಡರುಗಳುಂಟು
    ಈ ಬಾಳ ಬೀದಿಯಲ್ಲಿ,
ಕಷ್ಟ ನಷ್ಟಗಳುಂಟು
    ಈಜೀವ ಜಂಜಡದಲ್ಲಿ.
ಅಂಜದಲೆ ಧೈರ್ಯದಿಂ ಮುನ್ನುಗ್ಗಿದರೆ
    ವಿಜಯ ಹೊಂದುವಿ ನೀ
    ಈ ಬಾಳ ಪಥದಲ್ಲಿ !

ಸಮುದ್ರದಲ್ಲಿ ಇಳಿಯುವಾಗ ಅದರ ಆಳವು ಅತಿಯೆಂದು ಹೆದರಿ ಅಥವಾ ಮೊಸಳೆ ತಿಮಿಂಗಿಲುಗಳಿಗೆ ಹೆದರಿ ಅರ್ಧಕ್ಕೆ ಬರುವುದು ಮೂರ್ಖತನ, ಹೇಡಿತನ. ಆದರೆ ಧೈರ್ಯದಿಂದ ಬಂದ ವಿಪತ್ತುಗಳೆಲ್ಲವನ್ನು ತೊಲಗಿಸುತ್ತಾ ಮುನ್ನಡೆದರೆ ನಮಗೆ ಸಮುದ್ರದ ಅಂತರಾಳದಲ್ಲಿರುವ ಪಚ್ಚೆ–ಮುತ್ತುಗಳು ಸಿಗುವುದಂತು ಖಂಡಿತ. ಅದೇ ರೀತಿ ವಿಘ್ನಗಳಿಗೆ ಹೆದರಿ ಕುಳಿತರೆ, ಸಾಮಾನ್ಯ ರೀತಿಯಲ್ಲಿ ಜೀವನ ನಡೆಸಿದರೆ ನಮ್ಮ ಬಾಳು ಪ್ರಾಣಿ ಜೀವನಕ್ಕೆ ಸಮವಾಗುತ್ತದೆ.

ಸಂತರ, ಮಹಾತ್ಮರ ಜೀವನವನ್ನು ಕೇಳಿ, ತಿಳಿದು, ಗ್ರಹಿಸಿ ಅದನ್ನು ಮಾರ್ಗದರ್ಶಿಯಾಗಿ ಇಟ್ಟುಕೊಂಡು ನಮ್ಮ ಸಾಧನೆಯ ಮೆಟ್ಟಲನ್ನು ಏರುತ್ತಾ ಹೋದರೆ, ಗುರಿ ಮುಟ್ಟುತ್ತೇವೆ. ಜೀವನವನ್ನು ಅರ್ಥಪೂರ್ಣವಾಗಿ ನಡೆಸಿದಂತಾಗುತ್ತದೆ ; ಬಾಳು ಉನ್ನತವಾಗುತ್ತದೆ.

ನಗೆ ಹನಿ

ಹೆಂಡತಿ :– ನೀವು ಕವನ ಬರೆಯುವುದು ಕಂಡರೆ ನನ್ನ ತಲೆ ತಿರುಗುತ್ತದೆ.

ಗಂಡ :– ತಲೆ ತಿರುಗುತ್ತದೆಯೆಂದೇ ಕವನ ಬರೆಯುವುದು.

– ಸಂಗನೇಶ ಹಿರಾಳ ಬಾಗಲಕೋಟ.

ಭಕ್ತಿಪಕ್ಷದ ಸಮಾವೇಶ ಜರುಗುವ ತಾಣ

"ಬಸವ ಗಂಗೋತ್ರಿ"— ಒಂದು ದಿವ್ಯ ಕ್ಷೇತ್ರ; ಅರುಹಿನ ಆಗರವಾಗಿ ಬಸವತತ್ತ್ವ ಪ್ರಸಾರ ಮಾಡುವ ಒಂದು ಕೇಂದ್ರವಾಗಿ ಬೆಳೆಯುತ್ತಿದೆ. ಇದು ಕರ್ನಾಟಕದ ರಾಜಧಾನಿ ಬೆಂಗಳೂರಿನಿಂದ ೨೧ಕಿ.ಮೀ. ದೂರದಲ್ಲಿ ಬೆಂಗಳೂರು ಮೈಸೂರು ಹೆದ್ದಾರಿಯ ಮೇಲೆ ಕುಂಬಳಗೋಡು ಗ್ರಾಮದ ಬಳಿ ಇದೆ. ೩೬ ಎಕರೆ ಸುಂದರ ಪ್ರದೇಶದಲ್ಲಿರುವ ಬಸವಗಂಗೋತ್ರಿ ಮುಂದೆ ಭವ್ಯವಾದೊಂದು "ಬಸವೇಶ್ವರ ಸ್ಮಾರಕ" ವನ್ನು ಹೊಂದಲಿದೆ. ಅಲ್ಲಿ ಸಾಕಷ್ಟು ಕಟ್ಟಡಗಳು ರಚನೆಯಾಗಿದ್ದು ಬಂದವರು ನಾಲ್ಕಾರು ದಿನ ಉಳಿಯಲು ಎಲ್ಲ ಅನುಕೂಲ ಹೊಂದಿ, ಪ್ರಶಾಂತ ತಾಣವಾಗಿದೆ. ಗ್ರಂಥಾಧ್ಯಯನಕ್ಕೆ ಸುಂದರ ಲೈಬ್ರರಿ ಇದೆ. ಬೆಂಗಳೂರಿನಲ್ಲಿರುವ ಕಲಾಸಿಪಾಳ್ಯಂ ಸಿಟಿ ಮಾರ್ಕೆಟ್ ಬಸ್‌ಸ್ಟ್ಯಾಂಡ್ ನಿಂದ ರೂಟು ನಂ.೨೨೫, ೨೨೬, ೨೨೬ಕ ಮತ್ತು ೨೨೮ ಬಸ್ಸುಗಳು ಗಂಗೋತ್ರಿಗೆ ಬರುತ್ತವೆ. ಕೆಲವು ಬಸ್ಸುಗಳು ಆಶ್ರಮದ ಪ್ರವೇಶದ್ವಾರದಲ್ಲಿ ನಿಲ್ಲುತ್ತವೆ. ಮತ್ತೆ ಕೆಲವು ದೊಡ್ಡಾಲದ ಮರದ ಕ್ರಾಸಿನ ಬಳಿ ನಿಲ್ಲುತ್ತವೆ. ಅಲ್ಲಿಂದ ಸ್ವಲ್ಪ ಮುಂದೆ ನಡೆದರೆ ಬಸವಗಂಗೋತ್ರಿ ಪ್ರವೇಶದ್ವಾರವಿದೆ. ಹೆಚ್ಚಿನ ವಿವರಗಳಿಗೆ ಬರೆಯಿರಿ.

ಕಾರ್ಯದರ್ಶಿ, ವಿಶ್ವಕಲ್ಯಾಣ ಮಿಷನ್	ಕಾರ್ಯದರ್ಶಿ, ಬಸವಗಂಗೋತ್ರಿ
ಬಸವ ಮಂಟಪ, ೨ನೇ ಬ್ಲಾಕು	ಕುಂಬಳಗೋಡು-೫೬೦೦೭೪
ಕಾರ್ಡ್‌ರೋಡ್, ರಾಜಾಜಿನಗರ	ಬೆಂಗಳೂರು-ಮೈಸೂರು ಹೆದ್ದಾರಿ
ಬೆಂಗಳೂರು-೫೬೦೦೧೦	[೨೧ ಕಿ. ಮಿ.]
	ಬೆಂಗಳೂರು ದಕ್ಷಿಣ-ತಾಲ್ಲೋಕು
	ಬೆಂಗಳೂರು-ಜಿಲ್ಲೆ

ವಿಶ್ವಗುರು ಬಸವಣ್ಣನವರ ತತ್ತ್ವ ಪ್ರಚಾರಕ್ಕಾಗಿ ನಿಧಿಗಾಗಿ ಕರೆ

ಕರ್ನಾಟಕದಾದ್ಯಂತ ಒಮ್ಮೆ ವ್ಯಾಪಕವಾದ ಧರ್ಮಪ್ರಸಾರದ ಸಂಚಾರವನ್ನು ನಾನು ಮತ್ತು ಪೂಜ್ಯ ಸದ್ಗುರು ಲಿಂಗಾನಂದ ಸ್ವಾಮೀಜಿಯವರು ಮಾಡಿದಂತಾಗಿದೆ. ಮಂತ್ರಪುರುಷ, ಕ್ರಾಂತಿದೂತ, ಮಹಾನುಭಾವಿ ಬಸವಣ್ಣನವರ ತತ್ತ್ವ ಮತ್ತು ವ್ಯಕ್ತಿತ್ವಕ್ಕೆ ಮಾರುಹೋದ ಅಸಂಖ್ಯಾತ ಭಕ್ತರು ಮತ್ತು ಅಭಿಮಾನಿಗಳು ಇದ್ದಾರೆಂಬುದನ್ನು ಮನಗಂಡಿದ್ದೇವೆ. ಕೆಲವರು ಪ್ರಕಟಿತ ಭಕ್ತಿ ಮಾಡಿದರೆ ಕೆಲವರು ಅಪ್ರಕಟಿತ ಭಕ್ತಿ ಮಾಡುವರು. ಕೆಲವರು ಪ್ರೌಢ ವಿಚಾರಶೀಲರಿದ್ದರೆ ಇನ್ನು ಕೆಲವರು ಮುಗ್ಧರು ಮತ್ತು ಭಾವುಕರು. ಆದರೆ ಎಲ್ಲರ ಕನಸು ಒಂದೇ. ಬಸವಣ್ಣನವರ ತತ್ತ್ವ ಮತ್ತು ಸಂದೇಶ ಇನ್ನಷ್ಟು ಪ್ರಚಾರವಾಗಬೇಕು. ಇನ್ನೂ ಬಹಳಷ್ಟು ಜನರು ಅವರ ತತ್ತ್ವಗಳನ್ನು ಅರಿಯಬೇಕು, ಅಳವಡಿಸಿಕೊಳ್ಳಬೇಕು. ಎಂಬುದು ಇಂಥ ಅಸಂಖ್ಯಾತರ ಆಕಾಂಕ್ಷೆ ಕ್ರಿಯಾರೂಪಕ್ಕೆ ಬರಬೇಕಾದರೆ ಬಹುದೊಡ್ಡ ಆರ್ಥಿಕ ಸಂಪನ್ಮೂಲ ಬೇಕು. ಮಾತ್ರವಲ್ಲ ಇಂತಹ ಅಸಂಖ್ಯಾತ ಶ್ರದ್ಧಾವಂತರು ತತ್ತ್ವ ಪ್ರಸಾರಕ್ಕೆ ತಮ್ಮ ಕಾಣಿಕೆ, ಹರಕೆ ಸಲ್ಲಿಸಲು ಅವಕಾಶ ಬೇಕು ಅದಕ್ಕಾಗಿ ಒಂದು ಸೂಚನೆ.

ಬಸವ ತತ್ತ್ವದಲ್ಲಿ, ಬಸವಣ್ಣನವರ ಮಹಿಮಾನ್ವಿತ ಜೀವನದಲ್ಲಿ-ಶಕ್ತಿಯಲ್ಲಿ ವಿಶ್ವಾಸವಿದ್ದ ಪ್ರತಿಯೊಬ್ಬರು ತಮ್ಮ ಮನೆಯಲ್ಲಿ ತಮ್ಮ ಅಂಗಡಿಗಳಲ್ಲಿ ಒಂದು ಕಾಣಿಕೆಯ ಡಬ್ಬಿ[ಹುಂಡಿ]ಯನ್ನು ಇಡಬೇಕು. ಅದರಲ್ಲಿ ತಮಗೆ ತಿಳಿದಷ್ಟು ಅನುಕೂಲವಾದಷ್ಟು ಅಥವಾ ಹರಕೆ ಮಾಡಿಕೊಂಡಷ್ಟನ್ನು ಸ್ವಯಂ ಪ್ರೇರಣೆಯಿಂದ ಹಾಕಿ, ತತ್ತ್ವ ಪ್ರಸಾರನಿಧಿಗೆ ತಮಗೆ ಅನುಕೂಲವಾದಾಗ, ಅಥವಾ ವರ್ಷಕ್ಕೊಮ್ಮೆ ಕಳುಹಿಸಬೇಕು. ಅಥವಾ ಪ್ರತಿ ವರುಷಕ್ಕೊಮ್ಮೆ ಅಕ್ಟೋಬರ್ ತಿಂಗಳಲ್ಲಿ ಬಸವ ಗಂಗೋತ್ರಿಯಲ್ಲಿ ನಡೆಯುವ ಭಕ್ತಿ ಪಕ್ಷದ ಸಮಾವೇಶಕ್ಕೆ ಬರಲು ಖರ್ಚಿಗಾಗಿ ಆ ಉಳಿತಾಯ ಹಣವನ್ನು ಬಳಸಿಕೊಳ್ಳಬಹುದು. ಇಲ್ಲವೇ ತಾವು ಪ್ರತಿವರ್ಷ ಬರುವ ಪದ್ಧತಿ ಬೆಳೆಸಿಕೊಳ್ಳುವವರೊಡನೆ ತಾವು ಬರುವಾಗ ಆ ಹಣವನ್ನು ತಂದು ಸಲ್ಲಿಸಬಹುದು.

ಇಂಥದೊಂದು ಪವಿತ್ರ ಸಂಕಲ್ಪದೊಡನೆ ಎಲ್ಲರೂ ಬದ್ಧರಾಗಬೇಕೆಂದು ವಿನಂತಿಸುವೆವು:

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ
ಅಧ್ಯಕ್ಷೆ, ಬಸವ ತತ್ತ್ವ ಪರಿಷತ್ತು
ಬಸವ ಮಂಟಪ, ಎರಡನೆ ಬ್ಲಾಕು
ಕಾರ್ಡ್‌ರಸ್ತೆ, ರಾಜಾಜಿನಗರ
ಬೆಂಗಳೂರು-೫೬೦೦೧೦

ಬಸವ ತತ್ತ್ವ ಪರಿಷತ್ತು.

ಅಕ್ಟೋಬರ್ ತಿಂಗಳಲ್ಲಿ ಭಕ್ತಿ ಪಕ್ಷದ ಸಮಾವೇಶ.

❖ ವಿಶ್ವ ಗುರು ಬಸವಣ್ಣನವರ ಭಕ್ತಿ ಪಕ್ಷದ ಬಳ್ಳಿಯು ಎಲ್ಲೆಡೆ ಹಬ್ಬಿದ್ದು ಆಸಕ್ತರು, ಅಭಿಮಾನಿಗಳು, ಸಾಧಕರು, ಮುಮುಕ್ಷುಗಳು ಒಂದೆಡೆ ಸೇರಲೋಸುಗ ಭಕ್ತಿಪಕ್ಷದ ನಾಲ್ಕನೆಯ ಸಮಾವೇಶವನ್ನು ಅಕ್ಟೋಬರ್ ತಿಂಗಳಲ್ಲಿ ಏರ್ಪಡಿಸಲಾಗಿದೆ,

❖ 1985 ಅಕ್ಟೋಬರ್ 2 ನೆಯ ತಾರೀಖು ಬುಧವಾರದಿಂದ ಪೂರ್ವಭಾವಿಯಾಗಿ ತತ್ತ್ವ ತರಬೇತಿ ಶಿಬಿರ ಪ್ರಾರಂಭವಾಗಲಿದೆ. 2-10-1985 ರಿಂದ 13-10-1985 ರ ವರೆಗೆ 12 ದಿವಸಗಳ ಕಾಲ ನಡೆಯಲಿದೆ. ಶನಿವಾರ ದಿನಾಂಕ 12-10-1985 ಮತ್ತು ಭಾನುವಾರ ದಿ. 13-10-1985 ರಂದು ವಿಶೇಷ ಕಾರ್ಯಕ್ರಮಗಳು ನಡೆಯಲಿದ್ದು, ಭಾನುವಾರ ಮಂಗಲ ಸಮಾರಂಭವಿದೆ. ಬೆಂಗಳೂರು–ಮೈಸೂರು ಹೆದ್ದಾರಿಯ ಮೇಲೆ 21 ಕಿ. ಮಿ. ದೂರದಲ್ಲಿರುವ ಕುಂಬಳಗೋಡು ಗ್ರಾಮದ ಸನಿಹದಲ್ಲಿರುವ "ಬಸವ ಗಂಗೋತ್ರಿ" ಯಲ್ಲಿ ಈ ತತ್ತ್ವ ತರಬೇತಿ ಶಿಬಿರ ಮತ್ತು ಭಕ್ತಿ ಪಕ್ಷ ಸಮ್ಮೇಳನ ನಡೆಯುವುದು.

❖ ಹನ್ನೆರಡು ದಿವಸಗಳ ತರಬೇತಿ ಬಯಸುವವರು ಶಿಬಿರ ಶುಲ್ಕವೆಂದು 100–00 (ಒಂದು ನೂರು) ರೂಪಾಯಿಗಳನ್ನು, ಕೇವಲ ಎರಡೇ ದಿವಸಗಳ ಭಕ್ತಿಪಕ್ಷದ ಸಮ್ಮೇಳನದಲ್ಲಿ ಭಾಗವಹಿಸುವವರು 20 ರೂಪಾಯಿಗಳನ್ನು ಶಿಬಿರ ಶುಲ್ಕವೆಂದು ಕಳಿಸಬೇಕು. ಎಂ. ಓ., ಬ್ಯಾಂಕ ಡಿ. ಡಿ. ಮುಖಾಂತರ ಹಣ ಕಳಿಸಬಹುದು.

❖ "ಬಸವ ತತ್ತ್ವ ಪರಿಷತ್" ಎಂದೇ ಡಿ. ಡಿ. ತೆಗೆಸಬೇಕು.

ವಿಶೇಷ ಸೂಚನೆ :— ಆರ್ಥಿಕ ಅನಾನುಕೂಲತೆಯಿಂದಾಗಿ ಶುಲ್ಕ ಕೊಡಲು ಅಶಕ್ತರಾದವರು; ಪೂರ್ವಭಾವಿಯಾಗಿ ಪತ್ರ ಬರೆದು ಒಪ್ಪಿಗೆ ಪಡೆದುಕೊಳ್ಳಬೇಕು. ಶಿಬಿರಾರ್ಥಿಗಳಿಗೆ ಬ್ಯಾಡ್ಜಸ್ ಕಳಿಸಲಾಗುವುದು. ಅದನ್ನು ಪಡೆದುಕೊಂಡೇ ಬರಬೇಕು.

❖ ಸ್ವಯಂ ಪ್ರೇರಣೆಯಿಂದ ಕಾಣಿಕೆ ಕಳಿಸುವವರೂ ಕಳಿಸಬಹುದು.

❖ ಬಸವ ತತ್ತ್ವ ಪರಿಷತ್‌ನ ವಿಶೇಷ ಸಂಚಿಕೆಯಾಗಿ ಕಲ್ಯಾಣ ಕಿರಣದ ವಿಶೇಷಾಂಕ "**ಬಸವ ಕಿರಣ**" ಹೊರಡಿಸಲಿದ್ದು, ಅದಕ್ಕೆ ಜಾಹಿರಾತು ಕೊಡುವವರೂ ಕೊಡಬಹುದು. ವಿವರಗಳು ಪ್ರತ್ಯೇಕವಾಗಿವೆ. ಗಮನಿಸಿರಿ.

❖ ತತ್ತ್ವ ತರಬೇತಿ ಶಿಬಿರದಲ್ಲಿ ಕೆಳಕಂಡ ತರಬೇತಿ ಕೊಡಲಾಗುವುದು.

- ಅ) ಯೋಗಾಸನ.
- ಆ) ಪೂಜೆ–ಧ್ಯಾನ.
- ಇ) ಪ್ರವಚನ.
- ಈ) ಸಾಮೂಹಿಕ ಪ್ರಾರ್ಥನೆ.
- ಉ) ಬಸವೇಶ್ವರ ಪೂಜಾ ವ್ರತ.
- ಊ) ನಾಮಕರಣ, ಲಗ್ನವಿಧಿ, ಅಂತ್ಯಸಂಸ್ಕಾರ ಮುಂತಾದವು.
- ಋ) ಸಮಸ್ಯೆ–ಸಮಾಧಾನ ಕಾರ್ಯಕ್ರಮಗಳು.

❖ ಎಲ್ಲ ಜಾತಿ ಮತ ಪಂಥಗಳವರಿಗೂ ಪ್ರವೇಶಾವಕಾಶ ಉಂಟು.

ವ್ಯವಹರಿಸುವ ವಿಳಾಸ :

ಕಾರ್ಯದರ್ಶಿ, ಬಸವ ತತ್ತ್ವ ತರಬೇತಿ ಶಿಬಿರ
"ಬಸವ ಗಂಗೋತ್ರಿ"
ಕುಂಬಳಗೋಡು–560074 ಬೆಂಗಳೂರು–ಮೈಸೂರು ಹೆದ್ದಾರಿ,
ಬೆಂಗಳೂರು ದಕ್ಷಿಣ–ತಾಲ್ಲೂಕು, ಬೆಂಗಳೂರು–ಜಿಲ್ಲೆ

ವಿಶೇಷ ತಿದ್ದುಪಡಿ

ಜುಲೈ ತಿಂಗಳ ಕಲ್ಯಾಣ ಕಿರಣವಲ್ಲಿ ಪುಟ ೩೦ರಲ್ಲಿ ಭಕ್ತಿ ಪಕ್ಷದ ಸಮಾವೇಶವು ಅಕ್ಟೋಬರ್ 4, 5 ಮತ್ತು 6 ರಂದು ಎಂದು ತಿಳಿಸುವ ಪ್ರಕಟಣೆ ಕೈತಪ್ಪಿನಿಂದ ಪ್ರಕಟವಾಗಿದೆ. ಇದು ಮೊದಲು ನಿರ್ಧರಿಸಿದ್ದ ಕಾರ್ಯಕ್ರಮ. ಪುನರ್ವಿಮರ್ಶಿತ ಮತ್ತು ಖಚಿತ ಕಾರ್ಯಕ್ರಮವೆಂದರೆ ಅಕ್ಟೋಬರ್ 2 ರಿಂದ ಅಕ್ಟೋಬರ್ 13 ರ ವರೆಗೆ ತರಬೇತಿ ಶಿಬಿರ. ಅಕ್ಟೋಬರ್ 12 ಮತ್ತು 13 ರಂದು ವಿಶೇಷ ಕಾರ್ಯಕ್ರಮಗಳು ಅದೂ ಸಹ ಜುಲೈ ಕಲ್ಯಾಣ ಕಿರಣದ 33 ನೆಯ ಪುಟದಲ್ಲಿ ಪ್ರಕಟವಾಗಿದೆ. ತಿದ್ದುಪಡಿ ಮಾಡಿಕೊಳ್ಳುವಿರಾಗಿ ನಂಬುತ್ತೇವೆ.

— ಸಂಪಾದಕರು

‘ಜನಪದ ಸಾಹಿತ್ಯದಲ್ಲಿ’

ಬಸವಣ್ಣನವರ ಚಿತ್ರ

— ಶಿವರಾಜ ಪಾಟೀಲ ಮಹಾಂತಪೂರ

ಜನಪದ ಸಾಹಿತ್ಯ ರಚಿಸಿದವರು ಆಸ್ಥಾನಕವಿಗಳಲ್ಲ. ಜನಪದ ಕಾವ್ಯ ಕಟ್ಟಿದವರು ಕವಿಗಳೇ ಅಲ್ಲ ಎನ್ನುವ ಕಾಲಬೇರೆ. ಹೀಗಿರುವಾಗ ಪಂಡಿತರೆನ್ನಿಸಿ ಕೊಂಡವರು, ಗೌರವಧನ ಪಡೆದು ‘ಕವಿ’ ಎಂಬ ಕಿರೀಟ ಧರಿಸಿ, ರಾಜ ಮಹಾರಾಜರನ್ನು ಸ್ತುತಿಸುತ್ತ ಹೊಗಳು ಭಟ್ಟಂಗಿತನ ಮಾಡಿದರು. ಅವರನ್ನೇ ಕುರಿತು ಮಹಾಕಾವ್ಯ ರಚಿಸಿದರು. ಮಹಾಕವಿಗಳಾಗಿ ಅರಮನೆಯ ಆವರಣದಲ್ಲಿ ಮಾತ್ರ ಉಳಿದರು. ಆದರೆ ಮಹಾಕವಿಗಳೆನ್ನಿಸಿ ಕೊಳ್ಳಬೇಕು ಮಹಾಕಾವ್ಯ ಬರೆದು ರಾಜಮನ್ನಣೆ ಪಡೆಯಬೇಕು ಎಂಬ ವಿಚಾರವಿಟ್ಟು ಕೊಳ್ಳದೆ, ಹೃದಯ ತೃಪ್ತಿಗೆ ಮನಸ್ಸಿನ ನೆಮ್ಮದಿಗಾಗಿ ಜನಪದ ಕವಿಗಳು ಹಾಡು ಕಟ್ಟಿದರು. ಕುಟ್ಟುವಾಗ, ಬೀಸುವಾಗ, ಸಂಕಟ ಬಂದಾಗ, ರಾಶಿ ಮಾಡುವಾಗ, ಹಾಡಿದರು. ಹೀಗೆ ಜಾನಪದ ನುಡಿಗಳು ಹಾಡು ಗಬ್ಬಗಳಾಗಿ ಬೆಳೆದವು ಶ್ರೀ ಸಾಮಾನ್ಯರ ಜನರ ನಾಲಿಗೆಯ ಮೇಲೆ ಲಾಸ್ಯವಾಡತೊಡಗಿದವು. ಜನಪ್ರಿಯತೆಗಳಿಸಿದವು. ಹೆಚ್ಚು ಆಕರ್ಷಿತವಾಗಿ ಜನರ ಮನವನ್ನು ಒಲಿಸಿ ಕೊಂಡವು. ಹೀಗಾಗಿ ಅರಮನೆಯ ಕವಿ ಪುಂಗವರಿಗಿಂತ ಜನಸಾಮಾನ್ಯರ ಮಧ್ಯದಲ್ಲಿರುವ ಅಜ್ಞಾತವಾದ ಜಾನಪದ ಕವಿಗಳೆ, ಪ್ರಚಾರದಲ್ಲಿ ಬಂದರು.

ಇಂದಿಗಾದರೂ ಆಸ್ಥಾನ ಕವಿಗಳು ರಚಿಸಿದ ಮಹಾಕಾವ್ಯಗಳೆಲ್ಲ ಪಂಡಿತರಿಗೆ ಮಾತ್ರ ಸೀಮಿತವಾಗಿ ಉಳಿದಿವೆ. ಶ್ರೀ ಸಾಮಾನ್ಯರು ಅವುಗಳನ್ನು ಓದುವುದಿರಲಿ, ನೋಡಲಿಕ್ಕೂ ಇಷ್ಟಪಡಲಿಲ್ಲ. ಹೀಗಾಗಿ ಅವು ಮೂಲೆ ಗುಂಪಾದವು. ಕೃತಕತೆ ಇಲ್ಲದ, ತೀರಾ ಸರಳವಾದ ಮತ್ತು ಸ್ಪಷ್ಟವಾದ ವಸ್ತುಚಿತ್ರಣ ಸಿಕ್ಕುವುದು ಜನಪದ ಸಾಹಿತ್ಯದಲ್ಲಿಯೇ ! ಅಲ್ಲದೆ ಪ್ರಾಸಗಳ ತ್ರಾಸಿಲ್ಲದೆ, ಛಂದಸ್ಸಿನ ಗೊಡವೆಯಿಲ್ಲದೆ, ಹೃದಯದಲ್ಲಿ ತುಂಬಿ ಬಂದ ಭಾವವು ತ್ರಿಪದಿಗಳಾಗಿ, ಹೂವಿನಂತೆ ಅರಳಿ ಬಂದಿವೆ. ಹೀಗಾಗಿ ಜನಪದ ಸಾಹಿತ್ಯದ ಸೌಂದರ್ಯ, ಸುಗಂಧ, ಕನ್ನಡ ನಾಡಿನಲ್ಲೆಲ್ಲ ಹಬ್ಬಿದೆ. ಹೀಗಾಗಿ ಜನಪದ ಸಾಹಿತ್ಯ ರಚಿಸಿದ ಕವಿಗಳು ಅಜ್ಞಾತರಾದರೂ ಅವರು ಕನ್ನಡ ಸಾಹಿತ್ಯ ಇರುವವರೆಗೆ ಅಮರವಾಗಿರುತ್ತಾರೆ. ಅವರು ಓದಿದವರಲ್ಲ, ಬರೆದವರಲ್ಲ. ಕವಿರಾಜಮಾರ್ಗಕಾರ ಹೇಳುವಂತೆ, ಕನ್ನಡಿಗರೆಂದರೆ “ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತ ಮತಿಗಳ್” ಎಂದಿದ್ದಾನೆ. ಅಂತಹ ಪರಿಣತಮತಿಗಳಾದ ಈ

ಜಾನಪದ ಕವಿಗಳು ಸಾವಿರ ಸಾವಿರ ಸಂಖ್ಯೆಯಲ್ಲಿ ಮೂರು ಸಾಲಿನ ಪದ್ಯಗಳನ್ನು ರಚಿಸಿದ್ದಾರೆ. ಆದರೆ ಎಲ್ಲವೂ ಲಭ್ಯವಿಲ್ಲ. ಈಗೀಗ ವಿದ್ವಾಂಸರ ಕೃಪೆಯಿಂದ, ಈಗ ಅವುಗಳನ್ನು ಸಂಗ್ರಹಿಸಿ ‘ಲಿಖಿತ’ದಲ್ಲಿ ಸ್ಥಾಪಿಸಬೇಕೆಂಬ ಬುದ್ಧಿ ಬಂದುದರಿಂದ ವಿಶ್ವವಿದ್ಯಾಲಯಗಳು ಶ್ರಮಿಸುತ್ತಿವೆ. ಜಾನಪದ ವಿಭಾಗವನ್ನು ತೆರೆದು ಕೆಲಸದಲ್ಲಿ ತೊಡಗಿವೆ. ಸಮಗ್ರವಾಗಿ ಸಂಶೋಧಿಸಿ ಪೂರ್ಣಗೊಳಿಸದಿದ್ದರೂ, ತೃಪ್ತಿಕರವಾಗಿ ಕೆಲಸ ಸಾಗಿದೆ ಎಂಬುದರಲ್ಲಿ ಯಾವ ಸಂಶಯವೂ ಇಲ್ಲ. ಇನ್ನೂ ಹೆಚ್ಚಿನ ರೀತಿಯಿಂದ ಕೆಲಸ ಸಾಗಬೇಕಾಗಿದೆ.

ಈಗ ಬಸವಣ್ಣನವರನ್ನು ಕುರಿತು ಜನಪದ ಕವಿಗಳು ಹಾಡಿದ ಕೆಲವು ಪದ್ಯಗಳನ್ನು ಇಲ್ಲಿ ನೋಡಬಹುದು. ಅವರ ಮೇಲೆ ಇದ್ದ ಭಕ್ತಿ, ಶ್ರದ್ಧೆ’ ನಿಷ್ಠೆ ಮತ್ತು ಅವರ ಬಗ್ಗೆ ಜನತೆಯಲ್ಲಿದ್ದ ಭಾವನೆ ಇವುಗಳ ಸಮಗ್ರ ಚಿತ್ರಣ ಈ ಜನಪದ ತ್ರಿಪದಿಗಳಲ್ಲಿ ಸಿಗುತ್ತದೆ.

ಮಲ್ಲಿಗೆಇದ್ದಾಗ ಮುಳ್ಳೇಕೆ ಮುಡಿಯುತಿ
ಕಲ್ಯಾಣದಲ್ಲಿ ಬಸವಯ್ಯ ಇದ್ದಾಗ
ಕಲ್ಗೇಕೆ ಕೈಯ ಮುಗಿಯುವೆ.

ಘಮ ಘಮಿಸುವ. ಪ್ರತಿಯೊಬ್ಬರನ್ನು ಆಕರ್ಶಿಸುವ ಮೈಸೂರು ಮಲ್ಲಿಗೆ ಹೂವು ಇರುವಾಗ ಯಾರಾದರೂ ಮುಳ್ಳನ್ನು ಮುಡಿಯುವರೆ? ಖಂಡಿತಾ ಇಲ್ಲ. ಕಲ್ಯಾಣದಲ್ಲಿ ಅನುಭವ ಮಂಟಪ ಕಟ್ಟಿ, ಜಾತಿ, ಮತ, ಪಂಥ, ಲಿಂಗಬೇಧವಿಲ್ಲದೆ ಸರ್ವರಿಗೂ ಅನುಭವ ನೀಡುತ್ತಿರುವ ಬಸವಣ್ಣ ಇರುವಾಗ ಗುಡಿಯೊಳಗಣ ಕಲ್ಲಿಗೇಕೆ ಕೈ ಮುಗಿಯಬೇಕು. ತೀರಾ ಜನ ಸಾಮಾನ್ಯರಿಗೂ ಬಸವಣ್ಣನವರ ತತ್ತ್ವ ಅರ್ಥವಾಗಿದೆ–ಕಲ್ಲು ದೇವರಲ್ಲ ಎಂಬುದು. ಇಲ್ಲಿರುವ ಹೋಲಿಕೆಯೂ ಸಮರ್ಪಕವಾಗಿದೆ. ‘ಕಲ್ಲು ದೇವರಲ್ಲ; ಮುಳ್ಳು ಹೂವಲ್ಲ’ ಉಪಮೆ ಸಹಜವಾಗಿಯೇ ಮೂಡಿ ಕಣ್ಣೆದುರಿಗೆ ಕಟ್ಟುತ್ತದೆ.

ಬಸವ ರಾಜ್ಯದ ಸಿರಿಯು ಬಸವ ಬಡವರ ನಿಧಿಯು
ಬಸವ ಮಳೆ ಬೆಳೆಯು ನಾಡೊಳಗೆ ಸಿಜದೀಪ
ಬಸವನೇ ಸಗ್ಗ ಸೋಪಾನ.

ಈ ಪದ್ಯದಲ್ಲಿ ಬಸವಣ್ಣ ಲೋಕ ಹಿತಕಾರಿ. ಸಕಲ ಜೀವಾತ್ಮರಿಗೆ ಲೇಸು ಬಯಸಿದವ, ದೀನ ದಲಿತರ ಏಳ್ಗೆಗಾಗಿ ಹಗಲಿರುಳು ಶ್ರಮಿಸಿದವ. ಹೀಗಾಗಿ ಬಸವನೇ ರಾಜ್ಯದ ಸಿರಿ. ಅವನು ಇರುವವರೆಗೆ ಕಲ್ಯಾಣದಲ್ಲಿ ಸಿರಿ ಇತ್ತು. ಅವನು ಹೋದಮೇಲೆ ಆ ಸಿರಿಯೇ ನಾಶವಾಯಿತು. ಬಸವನೇ ಬಡವರ ನಿಧಿ. ಬಡವರಿಗೆ

ಸಂಪತ್ತು ಬೇಕಾಗಿರಲಿಲ್ಲ. ಬಸವನೇ ಬೇಕಾಗಿತ್ತು. ಅವನಿದ್ದರೆ ಸಂಪತ್ತು ಇದ್ದಂತೆಯೇ ಎಂಬ ಭಾವ. ಬಸವನಿದ್ದರೆ ನಾಡಿನಲ್ಲಿ ಮಳೆ-ಬೆಳೆ ಸುಖ ಸಂಪದ್ಭರಿತವಾಗಿತ್ತು. ಬಿಜ್ಜಳನ ರಾಜ್ಯ ಸುಭಿಕ್ಷ-ಸಂತೃಪ್ತಿಗಳ ರಾಜ್ಯವಾಯಿತು ಬಸವಣ್ಣನಿಂದಾಗಿ. ಅವನು ಹೋಧಮೇಲೆ ಕೊಲೆ, ಸುಲಿಗೆ, ಮೋಸ, ವಂಚಕರಿಂದ ಕೂಡಿದ ಕಟುಕರ ಕೇರಿ ಯಾಯಿತು. ಬಸವಣ್ಣನೇ ನಿಜವಾದ ದೀಪ. ದೀಪಗಳಾದರೆ ಗಾಳಿ ಬೀಸಿದರೆ, ವಿದ್ಯುತ್ ಕಡಿತವಾದರೆ, ಆರಿಬಿಡುತ್ತವೆ. ಆದರೆ, ಜ್ಞಾನದ ಚಿರಂತನವಾದ-ನಿಜ ದೀಪ ಹೊತ್ತಿಸಿದ ಬಸವ ಎಲ್ಲರಿಗೂ ಸ್ವರ್ಗ[ಸುಖ] ತೋರಿಸುವ ಸೋಪಾನವಾಗಿದ್ದಾನೆ.

ಉಂಡು ತೇಗಿತು ಲೋಕ ಕೊಂಡಾಡಿ ಕಾಯಕವ
ಕಂಡ ಕಂಡಲ್ಲಿ ದಾಸೋಹ ಕಾಯಕದ
ಕಂಡ ಜೀವನದ ಶಿವಮಾತು.

ಬಸವನ ದಾಸೋಹ ಕೇವಲ ಅನ್ನ ದಾಸೋಹ ಮಾತ್ರವಲ್ಲ. ಜ್ಞಾನ ದಾಸೋಹವೂ ಆಗಿತ್ತು. ಲೋಕಕ್ಕೆ ಹಿತವಾಗಲೆಂದು ನಡೆಸಿದ ಈ ದಾಸೋಹದಲ್ಲಿ ಜನತೆ ಉಂಡು ತೇಗಿತು; ಕೊಂಡಾಡಿ ಕುಣಿಯಿತು. ಎಲ್ಲೆಲ್ಲೂ ದಾಸೋಹ, ಕಾಯಕ' ಶಿವ ಮಾತು ಇವುಗಳೇ ಕಲ್ಯಾಣದ ತುಂಬಾ ತುಂಬಿರುವಾಗ ಬಸವನ ಮಹಿಮೆ ಕೇಳಬೇಕೆ ?

ಬಸವ ಭಕ್ತಿಯ ಬೀಜ ಬಸವ ಮುಕ್ತಿಯ ತೇಜ
ಬಸವ ಕಾಯಕದ ಗುರುಬೀಜ । ಶಿವಮತಕೆ
ಬಸವ ಓಂಕಾರ ಶಿವನಾಮ.

ಬಸವಣ್ಣನೇ ಭಕ್ತಿಯ ಬೀಜ. 'ಭಕ್ತಿ'ಯನ್ನು ಲೋಕ ಕಲಿತಿದ್ದೇ ಅವನಿಂದ, ಮೇಲಾಗಿ ಮುಕ್ತಿಗೆ ಹೊಳಪನ್ನು ಕೊಟ್ಟವ. ಭಕ್ತಿಯನ್ನು ಮಾಡಿ ಮುಕ್ತಿಗೆ ಹೆಚ್ಚಿನ ಬೆಲೆ ತಂದವ ಬಸವಣ್ಣನೇ. ಕಾಯಕ ತತ್ತ್ವಕ್ಕೆ 'ಗುರುಬೀಜ' ಬಸವಣ್ಣ. ಕಾಯಕ ಕಲಿಸಿಕೊಟ್ಟವನೇ ಬಸವಣ್ಣ. ಹೀಗಾಗಿ ಶಿವಭಕ್ತಿಯನ್ನು ಅಳವಡಿಸಿಕೊಂಡ ಎಲ್ಲರಿಗೂ ಬಸವ ಓಂಕಾರಸ್ವರೂಪಿ, ಶಿವನಾಮರೂಪವಾಗಿದ್ದಾನೆ.

ಕಾಯಕವ ಕಲಿಸುವುದಕೆ ನಾಯಕನು ಬಸವಣ್ಣ
ಜೀಯ ಹೊಸಮತಕೆ ಶಿವಭಕ್ತಿ । ಸಾರುದಕೆ
ರಾಯ ಜೀವನದ ಹೊಸ ನುಡಿಗೆ.

ಸರಳವಾದ ಈ ಪದ್ಯದಲ್ಲಿ ಮಹತ್ತಾದ ಅರ್ಥವಿದೆ. ಕಾಯಕವ ಕಲಿಸುವುದಕ್ಕೆ ಬಸವಣ್ಣನೇ ನಾಯಕ. ಅವನ ನಾಯಕತ್ವದಲ್ಲಿ ರೂಪುಗೊಂಡ ಕಾಯಕ ತತ್ತ್ವ ಅಳವಡಿಸಿದರೆ. ಲೋಕವೇ ಪಾವನವಾಗುತ್ತದೆ. ಅಲ್ಲದೆ ಮನುಜ ಮತ, ಹೊಸಮತಕ್ಕೆ

ಬಸವಣ್ಣನೇ ಆದ್ಯ. ಶಿವಭಕ್ತಿ ವಿಸ್ತರಿಸಿದ ಮಹಾನುಭಾವ, ಜೀವನದಲ್ಲಿ ಹೊಸ ಮಾತು ಕೇಳಿಬರಲು. ಹೊಸ ವಿಚಾರದ ಗಾಳಿ ಹಾಯ್ದು ಬರಲು' ವಿಚಾರಧಾರೆ ಹರಿದು ಬರಲು ಬಸವಣ್ಣನೇ ಕಾರಣವೆಂದು ಈ ಕವಿಯ ಅಭಿಮತಕ್ಕೆ ಎಲ್ಲರ ಸಮ್ಮತಿಯೂ ಇದೆ. ಕೊನೆಗೆ ಬಸವನ ಮಹಿಮೆ, ವ್ಯಕ್ತಿತ್ವ ಇತ್ಯಾದಿ ಕುರಿತು, ಒಂದೇ ತ್ರಿಪದಿಯಲ್ಲಿ ಕವಿ ಹೀಗೆ ಹಿಡಿದಿಡುತ್ತಾನೆ.

ಉತ್ತಿ ಬಿತ್ತುವ ಮಂತ್ರ ಬಿತ್ತಿ ಬೆಳೆಯುವ ಮಂತ್ರ
ಸತ್ಯ ಶಿವಮಂತ್ರ ನಿನ್ಹೆಸರು । ಬಸವಯ್ಯ
ಮರ್ತ್ಯದೊಳು ಮಂತ್ರ ಜೀವನಕೆ.

ಮರ್ತ್ಯದ ಜೀವಿಗಳಿಗೆಲ್ಲ ಸತ್ಯವಾದ ಮತ್ತು ಶಿವಸ್ವರೂಪವಾದ ಮಂತ್ರ ಬಸವನ ನಾಮ್ಯವಾಗಿದೆ. ಬಸವಣ್ಣನವರು ಇಷ್ಟು ಪ್ರಖ್ಯಾತಿಗೆ ಬರಲು, ಜನರ ಮನವನ್ನಾಕರ್ಷಿಸಲು ಕಾರಣವೇನು? ಜನ ಇಷ್ಟೊಂದು ಕೊಂಡಾಡಲು ಸ್ತುತಿಸಲು ಕಾರಣವೇನು? ಇದಕ್ಕೆ ಜಾನಪದ ಕವಿಯ ಉತ್ತರ ಇಲ್ಲಿಯೇ ಇದೆ.

ಎಲ್ಲ ಬಲ್ಲಿದನಯ್ಯ ಕಲ್ಯಾಣ ಬಸವಯ್ಯ
ಚೆಲ್ಲಿದನು ತಂದು ಶಿವಬೆಳಕ । ನಾಡೊಳಗೆ
ಸೊಲ್ಲೆತ್ತಿ ಜನವು ಹಾಡುವುದು.

ಎಲ್ಲವನ್ನು ಬಲ್ಲಿದನಾದ ಬಸವ ಗುರು, ಲೋಕ ಕಲ್ಯಾಣ ಮಾಡಲು ಕಲ್ಯಾಣ ನಾಡಿನೊಳಗೆ ಶಿವಬೆಳಕು ತಂದು ಚೆಲ್ಲಿದನು. ಆದ್ದರಿಂದ ನಾಡಿನ ಜನವೆಲ್ಲ ಸೊಲ್ಲೆತ್ತಿ ಹಾಡುವುದು.

ಗ್ರಂಥಋಣ : **"ನುಡಿ ನೈವೇದ್ಯ" — ಸಂ. ಮಾತೆ ಮಹಾದೇವಿಯವರು**

ನೆಗೆ ಹನಿ.

ಭಕ್ತ :- ದೇವರೇ ನನ್ನನ್ನು ಸಹಾಯ ಮಾಡು.

ದೇವರು :- ನನ್ನನ್ನು ಸಹಾಯಕ್ಕೆ ಕರೆದೆಯಾ ?

ಭಕ್ತ :- ಹೌದು !

ದೇವರು :- ಇದು ಕಲಿಯುಗವೆಂಬುದು ಗೊತ್ತಿಲ್ಲವೆ ? ನೀನೆ ನನಗೆ ಸಹಾಯ ಮಾಡು.

— ಶಿ. ಪಾ. ಮ.

ಪತ್ರಿಕಾ ಗೋಷ್ಠಿ

— ಶ್ರೀ ಈಶ್ವರ ಮಲ್ಲಪ್ಪ ಮುಗ್ದುಂ ಅಧ್ಯಕ್ಷರು
ಅಖಿಲ ಭಾರತ ವೀರಶೈವ ಮಹಾಸಭಾ ನಂ. 18,
ಶೇಷಾದ್ರಿ ರಸ್ತೆ, ಬೆಂಗಳೂರು – 0 009 ದಿನಾಂಕ : 22-7-1985

ಸರ್ವೋಚ್ಚ ನ್ಯಾಯಾಲಯವು ತನ್ನ ತೀರ್ಪಿನಲ್ಲಿ ನೀಡಿದ ಮಾರ್ಗ ಸೂಚಿಗಳು ಕೆಳಗಿನಂತಿರುತ್ತವೆ

೧. ಜನಗಳನ್ನು ಹಾಗೂ ಜನಾಂಗಗಳನ್ನು ಹಿಂದುಳಿದವರೆಂದು ನಿರ್ಧರಿಸಲು ಜಾತಿಯನ್ನೊಂದೇ ಆಧಾರವಾಗಿಟ್ಟುಕೊಳ್ಳುವುದು ಸರಿಯಲ್ಲ. ಹಿಂದುಳಿದವರೆಂದು ನಿರ್ಧರಿಸಲು ಜಾತಿಯ ಆಧಾರದ ಜೊತೆಗೆ ಆರ್ಥಿಕ ಪರಿಸ್ಥಿತಿ ಹಾಗೂ ಇನ್ನುಳಿದ ಆಧಾರಗಳನ್ನೂ ಗಣನೆಗೆ ತೆಗೆದುಕೊಳ್ಳಬೇಕು. ಹಿಂದುಳಿದವರೆಂದು ವರ್ಗೀಕರಿಸಲು ಶೈಕ್ಷಣಿಕವಾಗಿ ಹಾಗೂ ಸಾಮಾಜಿಕವಾಗಿ ಹರಿಜನ ಗಿರಿಜನರಷ್ಟು ಹಿಂದುಳಿದವರಾಗಿರಬೇಕು.

೨. ಸಂವಿಧಾನದ ೧೫(೪) ಹಾಗೂ ೧೬(೪) ಅಧಿನಿಯಮದ ಮೇರೆಗೆ ಮೀಸಲಾತಿಯು ಪ್ರತಿಶತ ೫೦ ಕ್ಕಿಂತ ಹೆಚ್ಚಿರಬಾರದು.

೩. ಸಂವಿಧಾನದ ೧೫(೪) ಹಾಗೂ ೧೬(೪) ಅಧಿನಿಯಮದಲ್ಲಿ ಹೇಳಿದ "ವರ್ಗ" ಎಂಬ ಶಬ್ದಕ್ಕೆ ಜಾತಿಯೆಂದು ಅರ್ಥ ಮಾಡುವುದು ಸರಿಯಲ್ಲ. ಜಾತಿ ಎಂಬ ಶಬ್ದವನ್ನು ಉಪಯೋಗಿಸಿಕೊಂಡರೂ ಕೂಡ ಆರ್ಥಿಕ ಪರಿಸ್ಥಿತಿ, ಶೈಕ್ಷಣಿಕ ಪರಿಸ್ಥಿತಿ ಹಾಗೂ ಸಾಮಾಜಿಕ ಪರಿಸ್ಥಿತಿಯನ್ನು ವಿಚಾರಣೆಗೆ ತೆಗೆದುಕೊಂಡು ಹಿಂದುಳಿವಿಕೆಯನ್ನು ನಿರ್ಧರಿಸುವುದು ವಿಹಿತ. ಇದರಿಂದ ಹಿಂದುಳಿದ ವರ್ಗದಲ್ಲಿ ಅನೇಕರು ಆರ್ಥಿಕವಾಗಿ ಶೈಕ್ಷಣಿಕವಾಗಿ ಮುಂದುವರಿದವರಾಗಿದ್ದಾರೆ. ಅಂಥವರು ನಿಜವಾಗಿ ಹಿಂದುಳಿದವರಿಗೆ ದೊರಕಬೇಕಾದ ಮೀಸಲಾತಿಯ ಲಾಭವನ್ನು ದೋಚಿಕೊಂಡು ಹೋಗಬಾರದೆಂಬ ಉದ್ದೇಶವೂ ಇದೆ.

೪. ಆಯೋಗದವರು ಶೈಕ್ಷಣಿಕ ಆಧಾರದ ಮೇಲೆ ವರ್ಗೀಕರಣ ಮಾಡುವಾಗ ರಾಜ್ಯದಲ್ಲಿಯ ಪ್ರತಿಶತ ೫೦ ರ ಸರಾಸರಿಯ ರೇಖೆಯನ್ನು ಮೀರಬಾರದು.

೫. ಕಾಲಕಾಲಕ್ಕೆ ಹಿಂದುಳಿದ ವರ್ಗಗಳ ಸಮೀಕ್ಷಣೆ ನಡೆಯಬೇಕು. ಸರ್ವೋಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರು ಹರಿಜನ–ಗಿರಿಜನರಿಗೆ ಮೀಸಲಾತಿಯ ಸವಲತ್ತು ೨೦೦೦ಇಸ್ವಿ(ಎ.ಡಿ.)ವರೆಗೆ ಇರಬೇಕೆಂದು ಅಭಿಪ್ರಾಯಪಟ್ಟಿದ್ದಾರೆ.

ಸರ್ವೋಚ್ಚ ನ್ಯಾಯಾಲಯವು ಸಲಹೆ ಮಾಡಿದ ತತ್ತ್ವದ ಮೇರೆಗೆ ಈಗಿನ ಕರ್ನಾಟಕ ಸರ್ಕಾರದವರು ಇದಕ್ಕೆ ಸಂಬಂಧಪಟ್ಟ ಹಿಂದಿನ ಆಜ್ಞೆಯನ್ನು ಎರಡನೆ ಹಿಂದುಳಿದ ಆಯೋಗವು ತನ್ನ ವರದಿಯನ್ನು ಸಲ್ಲಿಸುವವರೆಗೆ ತಡೆಹಿಡಿಯುವುದು ಅವರ ಕರ್ತವ್ಯವಾಗಿದೆ.

ಕರ್ನಾಟಕ ಸರ್ಕಾರದವರು ಹಾವನೂರು ಆಯೋಗದ ವರದಿಯ ಮೇರೆಗೆ ಹೊರಡಿಸಿದ ಆಜ್ಞೆಯ ಪ್ರಕಾರ ಕಳೆದ ಎಂಟು ವರ್ಷಗಳಲ್ಲಿ ಅರ್ಹ ವಿದ್ಯಾರ್ಥಿಗಳಿಗೂ ಹಾಗೂ ಅಭ್ಯರ್ಥಿಗಳಿಗೂ ಬಹಳಷ್ಟು ಅನ್ಯಾಯವಾಗಿದೆ. ಎರಡನೆ ಆಯೋಗದ ವರದಿಯು ಕೈಸೇರುವವರೆಗೆ ಹಾವನೂರು ಆಯೋಗದ ವರದಿಯ ಮೇರೆಗೆ ಹೊರಡಿಸಿದ ಸರಕಾರದ ಆಜ್ಞೆಯನ್ನು ತಡೆದಿಡಿಯುವುದು ನ್ಯಾಯಬದ್ಧವಾಗಿದೆ.

ಸಂಕ್ಷಿಪ್ತದಲ್ಲಿ ಹೇಳುವುದಾದರೆ :—

ಅ] ಹಿಂದುಳಿವಿಕೆಯನ್ನು ನಿರ್ಧರಿಸಲು ಜಾತಿಯೊಂದೇ ಆಧಾರವಾಗಬಾರದು, ಅದರಜೊತೆಗೆ ಆರ್ಥಿಕ ಪರಿಸ್ಥಿತಿಯನ್ನು ಗಣನೆಗೆ ತೆಗೆದುಕೊಳ್ಳತಕ್ಕದ್ದು.

ಆ] ಯಾರಾದರೊಬ್ಬರನ್ನು — ಅವನ ಸ್ಥಿತಿಯು ಬಡ ಹರಿಜನ – ಗಿರಿಜನರಂತೆ ಇರಬೇಕು.

ಇ] ಹಿಂದುಳಿದ ವರ್ಗಗಳನ್ನು ಕಾಲಕಾಲಕ್ಕೆ ಪರಿಶೀಲಿಸಬೇಕು, ಹಾಗೂ ಸಮೀಕ್ಷಣೆ ಮಾಡಬೇಕು. ಹರಿಜನ – ಗಿರಿಜನರಿಗೆ ಕೂಡ ಮೀಸಲಾತಿಯ ಸವಲತ್ತು ೨೦೦೦ ಇಸ್ವಿ (ಎ.ಡಿ.)ಗೆ ಮಾತ್ರ ಇರಬೇಕು.

ಈ] ಸರ್ವ ಸಾಮಾನ್ಯವಾಗಿ ಮೀಸಲಾತಿಯು ಒಟ್ಟು ಪ್ರತಿಶತ ೫೦ಕ್ಕೆ ಮೀರಬಾರದು.

ವೆಂಕಟಸ್ವಾಮಿ ಆಯೋಗದವರು ಸರ್ವೋಚ್ಚ ನ್ಯಾಯಾಲಯವು ನೀಡಿದ ಮಾರ್ಗಸೂಚಿಗಳನ್ನು ಅವಲೋಕಿಸಬೇಕು. ಯಾರನ್ನಾದರೂ ಹಿಂದುಳಿದ ವರ್ಗಕ್ಕೆ ಸೇರಿಸುವಾಗ ಅವನ ವಾರ್ಷಿಕ ಆದಾಯ ಹಾಗೂ ಅವನು ವಾಸಿಸುವ ಪ್ರದೇಶಗಳನ್ನು ಗಣನೆಗೆ ತೆಗೆದುಕೊಳ್ಳತಕ್ಕದ್ದು. ಹಿಂದುಳಿದವರೆಂದು ಪರಿಗಣಿಸಬೇಕಾದರೆ ಗ್ರಾಮಾಂತರದಲ್ಲಿರುವವರ ವಾರ್ಷಿಕ ಆದಾಯ ರೂ. ೭೫೦೦; ಹಾಗೂ ನಗರದಲ್ಲಿರುವವರ ಆದಾಯ ರೂ. ೧೦,೦೦೦ ಕ್ಕಿಂತ ಕಡಿಮೆ ಇರಬೇಕು.

ಸರ್ವೋಚ್ಚ ನ್ಯಾಯಾಲಯವು ನೀಡಿದ ತೀರ್ಪಿನಲ್ಲಿ ಸಲಹೆ ಮಾಡಿದ ಮಾರ್ಗಸೂಚಿಗಳ ಪ್ರಕಾರ ಹಾವನೂರು ಆಯೋಗದ ವರದಿಯ ಮೇರೆಗ ಕರ್ನಾಟಕ ಸರಕಾರವು ೧೯೭೭ರಲ್ಲಿ ಮೀಸಲಾತಿಯ ಬಗ್ಗೆ ಹೊರಡಿಸಿದ ಆಜ್ಞೆಯು ನ್ಯಾಯಬಾಹಿರವಾಗಿರುತ್ತದೆ. ಆದುದರಿಂದ ಕರ್ನಾಟಕ ಸರಕಾರವು ಎರಡನೆ ಹಿಂದುಳಿದ ಆಯೋಗದ

ವರದಿಯು ಕೈ ಸೇರುವವರೆಗೆ ಈ ವಿಷಯಕ್ಕೆ ಸಂಬಂಧಿಸಿದ ೧೯೭೭ ರ ಆಜ್ಞೆಯನ್ನು ತಡೆಹಿಡಿಯಲೇಬೇಕು.

ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ಅನುಗುಣವಾಗಿ ವೆಂಕಟಸ್ವಾಮಿ ವರದಿ ಹಿಂದುಳಿದ ಆಯೋಗವು ಹೊಸ ಪ್ರಶ್ನಾವಳಿಯನ್ನು ತಯಾರಿಸುವುದು ಅನಿವಾರ್ಯವಾಗಿದೆ. ಹೀಗೆ ಮಾಡಿದರೆ ಹೆಚ್ಚಿನ ಮಾಹಿತಿಯನ್ನು ಸಂಬಂಧಪಟ್ಟ ಅಂಕಿ-ಸಂಖ್ಯೆಗಳನ್ನು ಒಳಪಡಿಸಿಕೊಂಡು ಹೊಸ ನಿವೇದನಾ ಪತ್ರಿಕೆಯನ್ನು ಸಲ್ಲಿಸಲು ಅನುಕೂಲವಾಗುತ್ತದೆ. ಇದಕ್ಕೆ ಸಂಬಂಧಿಸಿದಂತೆ ಅ. ಭಾ. ವೀ. ಮ. ಯು ಹೆಚ್ಚಿನ ವಿವರಗಳನ್ನೊಳಗೊಂಡ ಹೊಸ ಪ್ರಶ್ನಾವಳಿಗೆ ಉತ್ತರಿಸಲು ಅನುಕೂಲವಾಗುತ್ತದೆ. ಇಲ್ಲವೆ ಹೆಚ್ಚಿನ ಮಾಹಿತಿಯನ್ನು ಆಯೋಗಕ್ಕೆ ಸಲ್ಲಿಸಲು ಕಾಲಾವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳಲಾಗಿದೆ.

ಸಂವಿಧಾನದ ೧೫(೪) ಹಾಗೂ ೧೬(೪) ಅಧಿನಿಯಮದ ಮೇರೆಗೆ ರೋಸ್ಟರ್ ಪದ್ಧತಿಯನ್ನನುಸರಿಸಲು ಅರ್ಹ ಜನಾಂಗದವರಿಗೆ ಸಾಕಷ್ಟು ಪ್ರಾತಿನಿಧ್ಯ ಕೊಡುವುದು ವಿಹಿತ. ಆದರೆ ಕೆಲವೇ ಜನಾಂಗದವರಿಗೆ ಅತಿ ಹೆಚ್ಚು ಪ್ರಾತಿನಿಧ್ಯ ರೋಸ್ಟರ್ ಪದ್ಧತಿಯಿಂದ ಸಿಗುವಂತೆ ಆಗುವುದನ್ನು ನ್ಯಾಯಬದ್ಧವಾಗಿ ತಡೆಹಿಡಿಯಬೇಕು.

ವಿಶ್ವಮಾತೆಗೆ ವಂದನೆ

— ಕಮಲಾಕ್ಷಿ ಹಿರೇಮಠ

ನಮ್ಮ ಮಾತೆಯೆ ಪೂಜ್ಯ ಮಾತೆಯೆ ।
ನಿನಗೆ ಅನುದಿನ ವಂದನೆ ॥ಪ॥
ದಿವ್ಯ ದೀಪ್ತಿಯೆ ಜಗದಜ್ಯೋತಿಯೆ।
ನೀನೇ ನಮ್ಮಯಾನಂದ॥ಅ। ಪ॥
    ನಿನ್ನ ನುಡಿಯಲಿ ಬಸವ ವಾಣಿಯು।
    ಹರಿದು ಬರುತಿದೆ ಗಂಗೆಯೋಲ್॥
    ತಾಯೆ ನೀನು ನಮ್ಮ ಮೆದುಳಿಗೆ।
    ಜ್ಞಾನವೀಯುವ ಜ್ಯೋತಿಯೆ॥೧॥
ನೀನು ಬಂಧುವು ನೀನು ಬಳಗವು ।
ನಿನ್ನ ಒಲುಮೆಯೆ ರಕ್ಷೆಯು ।
ಮಾತೆ ನಿನ್ನಯ ಚರಿತೆ ಕೇಳಲು ।
ಎನ್ನ ಮನದೊಳು ಸಂತಸ ॥೨॥
    ನಿಮ್ಮ ಚಿನ್ಮಯ ವಾಣಿಯೆಂಬುದು ।
    ಭವವು ದಾಂಟಿಪ ದೋಣಿಯು ।
    ನಮ್ಮ ಪ್ರಾಣವು ನಮ್ಮ ಆತ್ಮವು ।
    ಭಜಿಸುವುದೆಂದಿಗೂ ॥೩॥

ಮುಂದುವರೆದ ಲೇಖನ-೪

ಶ್ರೀ ಶಿವಯೋಗಿ ಸಿದ್ಧರಾಮೇಶ್ವರರ ವಚನ ಜ್ಯೋತಿ.

ಶ್ರೀ ಸಿದ್ಧೇಶ್ವರ ಸ್ವಾಮಿಗಳು, ಜ್ಞಾನಯೋಗಾಶ್ರಮ, ವಿಜಾಪುರ.

[ಕಳೆದ ಮೂರು ದಶಕಗಳಿಂದ ವಿಜಾಪುರದಲ್ಲಿಯೇ ಪ್ರವಚನ ಕಾಯಕ ಕೈಗೊಂಡ ಶಿವಾನಂದ ಮಠದ ವೇದಾಂತ ಕೇಸರಿ ಶ್ರೀ ಮಲ್ಲಿಕಾರ್ಜುನ ಮಹಾಸ್ವಾಮಿಗಳ ಮಾನಸ ಪುತ್ರರಾದ ಶ್ರೀ ಸಿದ್ಧೇಶ್ವರ ಸ್ವಾಮಿಗಳವರು ವಿಜಾಪುರ ಜ್ಞಾನಯೋಗಾಶ್ರಮದ ಜ್ಞಾನನಿಧಿ ಎನಿಸಿದ್ದಾರೆ. ಎಂ.ಎ. ಪದವೀಧರರಾದ ಇವರು ಸಂಸ್ಕೃತ, ಕನ್ನಡ ಮತ್ತು ಇಂಗ್ಲೀಷ್ ತ್ರಿಭಾಷೆಗಳಲ್ಲೂ ನಿರರ್ಗಳವಾಗಿ ಆಧ್ಯಾತ್ಮ ವಿಚಾರಗಳನ್ನು ಬರೆಯಬಲ್ಲರು, ಪ್ರವಚನ ಮಾಡಬಲ್ಲರು. ಸರಳ ಸಾಧಕ ಜೀವನದ ಸಾಕಾರ ಮೂರ್ತಿಗಳಾದ ಇವರನ್ನು ಜನರು "ಬುದ್ಧೀಜಿ" ಎಂದೇ ಸಂಭೋಧಿಸುತ್ತಾರೆ. ಅನೇಕ ಗ್ರಂಥಗಳನ್ನು ಆಧ್ಯಾತ್ಮ ಸಾಹಿತ್ಯಕ್ಕೆ ನೀಡಿದ್ದಾರೆ. ಶ್ರೀ ಸಿದ್ಧರಾಮೇಶ್ವರ ವಚನಗಳ ಒಳನೋಟ" ಕೃತಿಯಿಂದ ಆಯ್ದ ಕೆಲವು ವಚನಗಳನ್ನು ಇಲ್ಲಿ ಕೊಡಲಾಗಿದೆ.]

ವಿಶ್ವವು ಭಗವನ್ಮಹಿಮೆ ೧೦

ಹೇಮಾಭಿದಾನವದು ಮಂದರಾದ್ರಿಯಯ್ಯಾ.
ಸಿದ್ಧರವಲು ಪರಿಚಾರಕರಯ್ಯಾ.
ನಿಮ್ಮ ರಾಣಿವಾಸದ ಜನನವಯ್ಯಾ ಈ ತಲೋಕದಲ್ಲ.
ಅಂದಿಗಯ್ಯಾ ಸಮಾಧಿಯ ಬಿಡುಗಡೆನೋಡಾ, ಕಪಿಲಸಿದ್ಧ ಮಲ್ಲಿಕಾರ್ಜುನಾ

ವಿವರಣ :

ಮಂದರಾದ್ರಿಯ ದೇವನ ಸಂಪದ. ಸಿದ್ಧರು ಅವನ ಸೇವಕರು. ಕೆಳ ಲೋಕವು ಅವನ ರಾಣಿವಾಸದ ಸ್ಥಾನ. ಸಮಸ್ತ ವಿಶ್ವವು ಅವನ ಸೊತ್ತು. ಅವನ ರೂಪ; ಅವನದೇ ಮಹಿಮೆ. ಈ ದೃಷ್ಟಿ ಬಂದಂದು ಸಮಾಧಿಯು ಬಿಡುಗಡೆ. ಅಂದಿಗೆ ಮೃತ್ಯುವು ಮರೆ. ಅಮೃತತ್ತ್ವ ಸಿದ್ಧಿ ಎನ್ನುತ್ತಾನೆ ಸಿದ್ಧರಾಮೇಶ್ವರ.

ಹೇಮಾಭಿದಾನವದು ಮಂದರಾದ್ರಿಯಯ್ಯಾ :— ಮಂದರವು ಮಹದ್ ಗಿರಿ. 'ಶೈಲಾನಾಂ ಶರಣ್ಯಃ' =ಶೈಲಗಳ ಆಶ್ರಯ. 'ರತ್ನಾನಾಂ ನಿಲಯಃ'–ರತ್ನಗಳ ನಿಲಯ. ಹೇಮಾಭಿಧಾನವದು ಎಂದರೆ ಸಿರಿ-ಸಂಪದವೆಂಬುದು. ಮಂದರಾದ್ರಿ ಶಬ್ದವು ಜಗತ್ತಿನೊಳಗಿರುವ ಭವ್ಯ ಪರ್ವತಗಳನ್ನೆಲ್ಲ ಸೂಚಿಸುತ್ತದೆ. ಪರ್ವತಗಳು

ಅಸಂಖ್ಯ. ಅವುಗಳಲ್ಲಿರುವ ಸೌಂದರ್ಯ-ಸಿರಿ ಅಪಾರ. ಎತ್ತರವಾಗಿ ಹರವಾಗಿ ಬೆಳೆದ ವೃಕ್ಷರಾಜಿ. ಇಂಚರಿಸುವ ಪಕ್ಷಿ ಸಮುದಾಯ. ತಿಳಿನೀರ ನದಿಗಳ ಜಾಲ. ಹಿಮಾಚ್ಛಾದಿತ ಗಗನ ಚುಂಬಿತ ಶಿಖರಗಳು. ಪರ್ವತವೆಂದರೆ ಚೆಲುವಿನ ಆಕರ. ನಿಲಯ. ಅದು ಪರಮಾತ್ಮನ ಪ್ರೀತಿಯ ನಿಧಾನ.

ಸಿದ್ಧರವರು ಪರಿಚಾರಕರಯ್ಯಾ :— ಸಿದ್ಧರು ಸಿದ್ಧಿಸಂಪನ್ನರು ದೇವ ಗಣಂಗಳು. ಅಪಾರ ಸಾಮರ್ಥ್ಯವಂತರು. ಎಂಥ ಕಠಿಣ, ಅಸಾಧ್ಯವಾದರೂ ಸರಿ. ಕೇವಲ ಸಂಕಲ್ಪದಿಂದ ಪೂರೈಸಬಲ್ಲ ಶಕ್ತರು. ಭಕ್ತಿ ಭರಿತರು. ಶಿವನ ಪರಿಚರ್ಯ ದಲ್ಲಿ ನಿತ್ಯಾಸಕ್ತರು. ಅಂಥ ಬಲವಂತರೂ ಪರಮಾತ್ಮನ ರೂಪರು.

ನಿಮ್ಮ ರಾಣಿವಾಸದ ಜನನವಯ್ಯಾ ಈ ತಲೋಕದಲ್ಲಿ :— ತಲೋಕ= ತಲ+ಲೋಕ=ಕೆಳಲೋಕ. ಅದು 'ರಾಣಿವಾಸದ ಜನನವು'. ಸುಖಸ್ಥಾನ, ವಿಶ್ರಾಮ ಗೃಹ. ಶಯನ ಮಂದಿರ. ಕೆಳಗಿರುವುದು [ತಾತ್ವಿಕವಾಗಿ] ಮಹದ್ರವ್ಯರಾಶಿ, ಪೃಥ್ವಿ ತತ್ತ್ವ. ಜಲ ಅಗ್ನಿ ವಾಯು ಮಿಶ್ರಿತವಾದ 'ಭೂ'ತತ್ತ್ವ, ಆಕಾಶವು ದೇವನ ಕ್ರಿಯಾಂಗಣವಾದರೆ ಈ ಭೂ-ತತ್ತ್ವವು ಅವನ ಶಯನ ತಲ್ಪ.

ಅಂದಿಗಯ್ಯಾ ಸಮಾಧಿಯ ಬಿಡುಗಡೆ ನೋಡಾ:– ಸಮಾಧಿ ಪದದ ಅರ್ಥ ಹಲವು. ಇಲ್ಲಿ ಮರಣ, ನಾಶ, ಮೃತ್ಯು ಎಂದು ಅರ್ಥ ಮಾಡಿದರೆ ಹೆಚ್ಚು ಸೂಕ್ತ. ಯಾವಾಗ ಸಾಧಕನು ತನ್ನ ಸುತ್ತ ಮುತ್ತ ಮೇಲೆ ಕೆಳಗೆ ಕಾಣುವುದೆಲ್ಲ ಪರಮಾತ್ಮನ ವಿಭವ, ದೇವನ ಮಹಿಮಾ ಎಂದು ಜಾನಿಸುತ್ತಾನೆಯೋ ಅಂದು ಮೃತ್ಯುಭಯದಿಂದ ಮುಕ್ತನಾಗುತ್ತಾನೆ. ಮೂಡುವ ಸೂರ್ಯ, ಮುಳುಗುವ ಚಂದಿರ, ಹರಿವ ನದಿ, ಸುಸ್ಥಿರ ಪರ್ವತ, ಅರಳುವ ಹೂ, ಸಾಯುವ ದೇಹ, ಮೇಲೆ ಅಸೀಮವಾಗಿ ವಿಸ್ತರಿಸಿದ ಆಗಸ, ಕೆಳಗೆ ಹರಡಿಕೊಂಡ ಭೂ ದ್ರವ್ಯರಾಶಿ, ಮೇಲೆ ಬಾಳುವ ದೇವ-ದೇವತೆಗಳು, ಕಳಗೆ ಇಲ್ಲಿ ಬಾಳುವ ಮಾನವರು, ಜೀವ ಜಂತುಗಳು; ಎಲ್ಲವೂ ದೇವನ ಅಭಿವ್ಯಕ್ತಿಗಳು' ವಿಶ್ವವೇ ಭಗವಂತನ ವಿರಾಡ್ರೂಪ ಎಂದು ಜನಿಸಿದ ನಂತರ ಮರಣಕ್ಕೆಲ್ಲಿ ಅವಕಾಶ? ಅದಯ್ಯ ಶರಣರ ವಿರಾಡ್ದರ್ಶನದ ವಚನವೊಂದಿಲ್ಲಿದೆ. ಮೆಲುಕು ಹಾಕಿ ನೋಡಿ, ಅಮೃತತ್ತ್ವ ನಮ್ಮ ಸುತ್ತ ಸುಳಿವುದು'

"ಪಾತಾಳದಿಂದ ಕೆಳಗೆ ಪಾದ. ಸ್ವರ್ಗಲೋಕದಿಂದ ಮೇಲೆ ವುತ್ತಮಾಂಗ. ಬ್ರಹ್ಮಾಂಡವೇ ಮುಕುಟ. ಗಗನವೇ ಮುಖ. ಚಂದ್ರಾರ್ಕಾಗ್ನಿಗಳೆ ನೇತ್ರ. ದಶ ದಿಕ್ಕುಗಳೇ ಬಾಹುಗಳು, ಮಹಾದಾಕಾಶವೇ ಶರೀರ. ತರುಗಳೇ ತನುರೂಪ. ಶೂನ್ಯವೇ ಕರಸ್ಥಲದ ಲಿಂಗ. ನಕ್ಷತ್ರಗಳೇ ಪುಷ್ಪ. ನಿತ್ಯವೇ ಪೂಜೆ. ಮೇಘವೇ ಜಡೆ. ಬೆಳದಿಂಗಳೇ ವಿಭೂತಿ. ಪರ್ವತಂಗಳೇ ರುದ್ರಾಕ್ಷಿ.

ಪಂಚಬ್ರಹ್ಮವೇ ಪಂಚಾಕ್ಷರ. ತತ್ತ್ವಗಳೇ ಜಪಮಾಲೆ. ಮೇರುವೇ ದಂಡ. ಸಮುದ್ರವೇ ಕಮಂಡಲು. ಶೇಷನೇ ಕಟಿಸೂತ್ರ. ಜಗವೇ ಕಂಥೆ. ಅನಂತನೇ ಕೌಪೀನ. ತ್ರಿಗುಣ ಒಂದಾದುದೇ ಖರ್ಪರ. ಚತುರ್ಯುಗಂಗಳೇ ಗಮನ. ಮಿಂಚೇ ಅಂಗರುಚಿ. ಸಿಡಿಲೇ ಧ್ವನಿ. ವೇದಾಗಮವೇ ವಾಕ್ಯ. ಜ್ಞಾನ ಮುದ್ರೆಯೇ ಉಪದೇಶ. ಪೃಥ್ವಿಯೇ ಸಿಂಹಾಸನ. ದೀಪಾರಾತ್ರಿಯೇ ಅರಮನೆ. ಶಿವಜ್ಞಾನವೇ ಐಶ್ವರ್ಯ. ನಿರಾಳವೇ ತೃಪ್ತಿ. ಇಂಥ ಚೈತನ್ಯ ಜಂಗಮಕ್ಕೆ ನಮೋ ನಮೋ ಎನುತಿರ್ದೆನಯ್ಯಾ ಸೌರಾಷ್ಟ್ರ ಸೋಮೇಶ್ವರಾ.

ಆದಯ್ಯನವರ ದೃಷ್ಟಿಯಲ್ಲಿ ವಿಶ್ವವು ಚೈತನ್ಯಜಂಗಮ ಅಂದರೆ ಚಲಿಸುವ ಚೇತನ! ಸಾಕಾರ ಮಹಾದೇವ. ಅವನ ಬಿಟ್ಟು ಏನೂ ಇಲ್ಲವೇ ಇಲ್ಲವೆಂದ ಬಳಿಕ ಮರಣವೆಲ್ಲಿ? ಹಿಂದಿನ ವಚನದಲ್ಲಿ ಸಿದ್ಧರಾಮನು ದೇವನನ್ನು ಅಜ ಎಂದು ಬಣ್ಣಿಸಿದ. ಅಜನು ಅಮೃತವೆಂದು ಬೇರೆ ಹೇಳಬೇಕಿಲ್ಲ. ಇಂಥ ಅಮೃತ ದೇವನೇ ನಮ್ಮ ಸುತ್ತಲಿನ ಸೃಷ್ಟಿಯ ಮಧ್ಯ ಕಾಣಬಂದರೆ ಮೃತ್ಯುವಿಗೆಲ್ಲಿ ಸ್ಥಾನ? ಅಂದಿಂಗೆ ಸಮಾಧಿಯ ಬಿಡುಗಡೆ ನೋಡಾ' !

ಹುಟ್ಟು ಮೆಟ್ಟು ದೇವನಿಗಿಲ್ಲ ನೋಡಾ ೧೧

ಹುಟ್ಟು ಮೆಟ್ಟೆಂಬುದು ನಿಮಗಿಲ್ಲವಯ್ಯಾ.
ನಿಮ್ಮಿಂದ ನೀವೆ ಸ್ವಯಂಭುವಯ್ಯಾ.
ಇಂತಾದಿರಯ್ಯಾ ಹರುಷದಿಂ ನೀವಿಂತಾದಿರಯ್ಯಾ.
ನಿಮ್ಮ ಮಹಾತ್ಮೆಯ ನೀವೆ ಬಲ್ಲಿರಯ್ಯಾ
ನಿಜಗುರು ಕಪಿಲಸಿದ್ಧ ಮಲ್ಲಿಕಾರ್ಜುನ.

ವಿವರಣ :

ದೇವನಿಗೆ ಹುಟ್ಟು (ಜನ್ಮ) ಇಲ್ಲ, ಮೆಟ್ಟು (ನಿಶ್ಚಿತವಾದ ವಾಸಸ್ಥಾನ) ಇಲ್ಲ. ಅವನಾ ಸ್ವಯಂಭು. ಅವನೇ ಈ ವೈವಿಧ್ಯಪೂರ್ಣ ಜಗತ್ತಾದ; ತನ್ನ ಆನಂದಕ್ಕಾಗಿ. ಅವನ ಮಹಿಮೆಯನ್ನು ಅವನೇ ಬಲ್ಲ. ಪರಿಮಿತಿಗೆ ಒಳಗಾದ ಮಾನವ-ಮತಿ[ಅರಿಯದು. ಸಿದ್ಧರಾಮೇಶ್ವರನು ಈ ಬಗೆಯಲ್ಲಿ ಪರಮಾತ್ಮನನ್ನು ಚಿತ್ರಿಸಿದ್ದಾನೆ.

ಹುಟ್ಟು ಮೆಟ್ಟೆಂಬುದು ನಿಮಗಿಲ್ಲವಯ್ಯಾ :—ಹುಟ್ಟು=ಉತ್ಪತ್ತಿ, ಜನ್ಮ ಉದಯ. ಮೆಟ್ಟು=ಸ್ಥಾನ, ವಾಸಸ್ಥಳ, ವಾಸಕ್ಕಾಗಿ ಮಾಡಲಾದ ಬೀಡು. ಹುಟ್ಟು ಮೆಟ್ಟು ಈ ಎರಡೂ ನಿಕಟವಾಗಿ ಹೊಂದಿಕೊಂಡಿವೆ. ಹುಟ್ಟು ಉಳ್ಳದೆಲ್ಲಿ ಮೆಟ್ಟು ಉಳ್ಳುದು. ಮೆಟ್ಟು ಉಳ್ಳುದೆಲ್ಲ ಹುಟ್ಟು ಉಳ್ಳುದು. ಅಂದರೆ, ಯಾವುದು ಕಾಲ

ದಲ್ಲಿ (ಕಾಲ ಪ್ರವಾಹದಲ್ಲಿ) ಮೂಡಿಬಂದಿದೆಯೋ. ಅದು ದೇಶ ಪರಿಮಿತಿಗೆ ಒಳಗಾಗಿದೆ. ಯಾವುದು ಒಂದು ನಿಶ್ಚಿತ ಸ್ಥಾನದಲ್ಲಿದೆಯೋ, ಅದು ಕಾಲ–ಸೀಮಿತವಾಗಿದೆ. ಇದು ವೈಶ್ವಿಕ ಸತ್ಯ. ಅಂದರೆ ಸರ್ವಕಾಲಿಕ, ಸಾರ್ವದೇಶಿಕ ಸತ್ಯ. ಉದಾ: ಚಂದಿರ ಗ್ರಹ. ಅದು ಕೆಲವು ನೂರು ಕೋಟಿ ವರುಷಗಳ ಹಿಂದೆ ಹುಟ್ಟಿದೆ, ಅದುದರಿಂದ ಅದು ಮಹಾಕಾಶದ ಒಂದು ನಿರ್ದಿಶ ಸ್ಥಾನದಲ್ಲಿ ಸುತ್ತುತ್ತಿದೆ. ಸೂರ್ಯ ನಕ್ಷತ್ರಾದಿ ಜ್ಯೋತಿಃಕಾಯಗಳು ಕೂಡ ಗಗನ ಮಂಡಲದಲ್ಲಿದ್ದ ಒಂದೊಂದು ಪರಿಮಿತ ಸ್ಥಾನ(ಪ್ರದೇಶ)ದಲ್ಲಿ ನೆಲೆಸಿವೆ, ಚಲಿಸುತ್ತ. ಅದ್ದರಿಂದ ಅವು ಒಂದೊಂದು ಕಾಲದಲ್ಲಿ ಜನ್ಮ ತಾಳಿರಲೇ ಬೇಕು.

ಹುಟ್ಟುಮೆಟ್ಟುಗಳಿಗೆ ಇನ್ನೊಂದು ಬಗೆಯ ಅರ್ಥ ಕೊಡುವುದು ಸಾಧ್ಯ. ಹುಟ್ಟೆಂದರೆ ವ್ಯಕ್ತವಾಗುವಿಕೆ, ಮೂರ್ತಗೊಳ್ಳುವಿಕೆ. ಮೆಟ್ಟೆಂದರೆ ಕಾಲದಿಂದ ತುಳಿಯಲ್ಪಡುವಿಕೆ, ಅವ್ಯಕ್ತವಾಗುವಿಕೆ, ನಾಶ ಹೊಂದುವಿಕೆ. ಯಾವುದು ಹುಟ್ಟಿದೆಯೋ ಅದನ್ನು ಕಾಲವು ತುಳಿದು ನಾಶ ಮಾಡುತ್ತದೆ. ನನ್ನ ಎದುರಿಗಿರುವ ಈ ಭವ್ಯ ಮಂದಿರ ಕಾಲದಲ್ಲಿ ರಚನೆಗೊಂಡಿದೆ. ಮುಂದೊಂದು ದಿನ ಅದೇ ಕಾಲವು ಈ ಮಂದಿರವನ್ನು ವಿನಾಶಗೊಳಿಸುತ್ತದೆ. ಜಗತ್ತೆಲ್ಲ ಕಾಲದಲ್ಲಿ ತೋರಿ ಬಂದಿದೆ ಅದ್ದರಿಂದ ಅದು ಸುನಿಶ್ಚಿತವಾಗಿ ಕಾಲಗರ್ಭವನ್ನು ಪ್ರವೇಶಿಸುತ್ತದೆ.

ಪರಮಾತ್ಮನಿಗೆ ಮಾತ್ರ ಹುಟ್ಟೂ ಇಲ್ಲ, ಮೆಟ್ಟೂ ಇಲ್ಲ. ಅವನು ಕಾಲಪರಿಮಿತನೂ ಅಲ್ಲ, ದೇಶಪರಿಮಿತನೂ ಅಲ್ಲ. ಅವನು ಹುಟ್ಟಿಯೂ ಇಲ್ಲ, ನಾಶವಾಗುವುದೂ ಇಲ್ಲ. ಈ ದೇವಾಲಯದ ಗರ್ಭಗುಡಿಯ ಅತ್ಯಲ್ಪ ಸ್ಥಳದಲ್ಲಿ ಪ್ರತಿಷ್ಟಿತವಾದ ದೇವ–ಮೂರ್ತಿಯು ಹುಟ್ಟಿದೆ: ಕಾಲಾಂತರದಲ್ಲಿ ವಿನಾಶವಾಗುವುದು, ಅದ್ದರಿಂದ ಈ ಪರಿಮಿತ ದೇವರು ನಿಜ–ದೇವನ ಆಭಾಸ ಮಾತ್ರ. ಇದೇ ದೇವರಲ್ಲ. ಇದರಲ್ಲಿರುವ ಕಾಲದ ಅಂಶ ಹಾಗೂ ದೇಶದ ಅಂಶಗಳನ್ನು ಕಳಚಿ ಹಾಕಿದರೆ ಉಳಿಯುವದೆ ಹುಟ್ಟು- ಮೆಟ್ಟೆಂಬುದಿಲ್ಲದ ಸತ್ಯ–ಶಿವ.

ಒಬ್ಬ ಸಂತ, ಆತ್ಮಶೋಧಕ ಒಂದು ಸುಂದರ ಪ್ರದೇಶಕ್ಕೆ ಬಂದ. ಅಲ್ಲಿ ಪ್ರಶಾಂತ ಪರಿಸರ. ದೇವ–ಧ್ಯಾನ ಮಗ್ನನಾದ. ಅವನ ದೈನಂದಿನ ದೈಹಿಕ ವ್ಯವಹಾರಗಳು ಕೇವಲ ಯಾಂತ್ರಿಕವಾಗಿ ಸಾಗಿದ್ದವು. ಅಷ್ಟು ತಲ್ಲಿನ, ಹಗಲು ರಾತ್ರಿ ಶ್ರೇಷ್ಠ ಮಹಾತ್ಮ, ದೇವಧ್ಯಾನಿ ಎಂಬ ಕೀರ್ತಿ ದೂರ ದೂರ ಹರಡಿತು. ಆ ಪ್ರದೇಶದ ರಾಜನ ಕಿವಿಗೂ ತಲುಪಿತು. ಬಂದು ನೋಡಿದ. ವಂದಿಸಿದ. ಸ್ವಲ್ಪ ಕಾಲದಲ್ಲಿಯೇ ಆ ಸಂತನ ಆರಾಧನೆಗಾಗಿ ಅಪೂರ್ವವಾದ, ಭವ್ಯವಾದ ಸುಂದರ ಮಂದಿರ ಕಟ್ಟಿಸಿದ. ಸಂತನ ಆರಾಧ್ಯ ದೇವಮೂರ್ತಿಯನ್ನು ಅಲ್ಲಿ ಪ್ರತಿಷ್ಠಾಪಿಸಿದ. ಸಂತನಿಗೆ ಇದಾವುದರ ಪ್ರಜ್ಞೆಯೇ ಇರಲಿಲ್ಲ. ಒಂದು ದಿನ, ಹತ್ತು ವರುಷಗಳ ನಂತರ ಮೈ ಭಾನ ಬಂತು.

ಸುತ್ತ ಮುತ್ತ ನೋಡಿದ. "ಏನಿದು?" ಎಂದ. ಎದುರಿನಲ್ಲಿದ್ದ ರಾಜ ಹರ್ಷದಿಂದ ಉತ್ತರಿಸಿದ. ಇದು ತಮಗಾಗಿಯೇ ಕಟ್ಟಲಾದ ದೇವ ಮಂದಿರ. ಇದು ನನ್ನ ದೇವನಿಗಾಗಿ? ನನ್ನ ಸಂಪೂಜ್ಯ ದೇವನನ್ನು ಈ ಚಿಕ್ಕ ಮಂದಿರ ಕಟ್ಟಿ ಹಾಕೀತೆ? ನನ್ನ ದೇವ ಅನಂತ: ಶಬ್ದ ರೂಪುಗಳ ಬಂಧನಗಳನ್ನು ಕಡಿದು ಹಾಕಿದ ನಿಶ್ಶಬ್ದ, ನಿರೂಪ ಪ್ರಭು. ಅವನು ಅನಿಕೇತ. ಅವನಿಗೆ ನಿಕೇತ ನಿರ್ಮಿಸಿದ ನೀನೊಬ್ಬ ಹುಚ್ಚ. ಸಂತ ಹೊರಟು ಹೋದ ದಿಗಂತದಾಚೆ! ಸಂತರು ಸತ್ಯ–ಶಿವನ ಭಕ್ತರು.

ನಿಮ್ಮಿಂದ ನೀವೆ ಸ್ವಯಂಭುವಯ್ಯಾ :—ನಿರ್ಮಾಣವಾದುದು ಕಾರ್ಯ. ನಿರ್ಮಾಣ ಮಾಡಿದುದು ಕಾರಣ. ಗಡಿಗೆ ಕಾರ್ಯ, ಮಣ್ಣು, ಕುಂಬಾರ ಕಾರಣ. ಜಗತ್ತು ಕಾರ್ಯ, ಪ್ರಕೃತಿಯು ಕಾರಣ, ಪರಮಾತ್ಮನು ಮಾತ್ರ ಕಾರ್ಯನೂ ಅಲ್ಲ, ಕಾರಣ ಅಲ್ಲ. ಕಾರ್ಯ-ಕಾರಣ–ಕೋಟೆಗೆ ಸಿಗದ ವಿಮುಕ್ತ ನವ. ಅವನು ಕಾಲ-ದೇಶ–ವಸ್ತು-ಅಪರಿಚಿನ್ನ ಸತ್ಯ. ಅವನು ಸ್ವಯಂಭೂ. ಸ್ವಯಂ–ಅಸ್ತಿತ್ವರೂಪ. ನಿರಾಲಂಬ ಭಗವಂತ. ಅವರ ಪವಿತ್ರ ಸನ್ನಿಧಾನದಲ್ಲಿ ಕಾರ್ಯ ಕಾರಣಗಳು ತೋರುತ್ತವೆ. ಅಡಗುತ್ತವೆ.

ಇಂತಾದಿರಯ್ಯಾ, ಹರುಷದಿಂ ನೀವಿಂತಾದಿರಯ್ಯಾ :—ಮಹಾಸಾಗರದಲ್ಲಿ ಅಸಂಖ್ಯ ತೆರೆಯಾಡುತ್ತವೆ. ಸಾಗರವು ಬರಿ ಸನ್ನಿಧಾನ. ತೆರೆಗಳೆಲ್ಲ ಆ ಸಾಗರದ ವಿಲಾಸ! ಸಾಗರದಲ್ಲಿ ತೆರೆಗಳ ತೋರಿಕೆ ಏಕೆ? ಕಾರಣವಿಲ್ಲ. ನಿರ್ನಿಮಿತ್ತ. ಅದು ಸಾಗರದ ಆನಂದ ಲೀಲೆ, ಹಾಗೆ ದೇವ. ಅಸ್ತಿತ್ವ ಸಾಗರ. ಚಿದಬ್ಧಿ. ಆನಂದ ಶರಧಿ. ಅಸಂಖ್ಯ ಬ್ರಹ್ಮಾಂಡಗಳು, ಜೀವಿಗಳೂ, ದೇಹಗಳೂ ಕಾಣಬಂದ ತೆರೆಗಳು. ದೇವನು ಇಂತು+ಆದ; ಇಂತು ಈ ವಿವಿಧತೆಯಿಂದ ಕೂಡಿದ ಜಗತ್ತಾದ. ಏಕೆ? ಏಕೆಂದು ಹೇಳಿದರೆ ಅದಕ್ಕದೇ ಕೊರತೆ. ಅಂಥ ಉತ್ತರ ದೋಷಪೂರ್ಣ. ಸಿದ್ಧರಾಮೇಶ್ವರ ಹೇಳಿದ 'ಹರುಷದಿಂ' ಎಂದು. ಭಗವಂತನು ಆನಂದಪೂರ್ಣ. ಆ ಆನಂದ, ಆ ಹರ್ಷದ ಲೀಲೆ ಈ ತೋರಿಕೆಯ ವಿಶ್ವ ! 'ಹರುಷದಿಂ ನೀವಿಂತಾದಿರಯ್ಯಾ' !

ನಿಮ್ಮ ಮಹಾತ್ಮೆಯ ನೀವೆ ಬಲ್ಲಿರಯ್ಯಾ, ನಿಜಗುರು ಕಪಿಲಸಿದ್ಧ ಮಲ್ಲಿಕಾರ್ಜುನಾ :—ದೇವನಹರುಷದ ಲೀಲೆ, ದೇವನ ಸೃಷ್ಟಿ ವಿಲಾಸದ ಮಹಿಮೆ ದೇವನೇ ಬಲ್ಲ. ನಮ್ಮ ಮತಿ ಪರಿಮಿತ. ಭಗವಂತನನ್ನಾಗಲಿ, ಅವನ ಸಾಕಾರ ಅಭಿವ್ಯಕ್ತಿಯಾದ ಭವಿಶ್ವ–ವೈಭವನ್ನಾಗಲಿ ಅರಿವ ಬಲ ಮತಿಯಲ್ಲಿಲ್ಲ. ಅಕ್ಕನೂ ಹೇಳುತ್ತಾಳೆ :

> "ಅರಿದಿಹೆನೆಂದರೆ ಅರಿಯಬಾರದು, ನೋಡಾ! ಘನಕ್ಕೆ ಘನತಾನೆ ನೋಡಾ.
> ಚೆನ್ನ ಮಲ್ಲಿಕಾರ್ಜುನನ ನಿರ್ಣಯವಿಲ್ಲದೆ ಹೋದನು".

ಋಗ್ವೇದ ಘೋಷಿಸಿದೆ:

"ಪುರುಷ ಏವೇದಂ ಸರ್ವಂ, ಯದ್ಭೂತಂ ಯಚ್ಚ ಭವ್ಯಂ।
ಏತಾಮೃತತ್ತ್ವಸ್ಯೇಶಾನಃ ಯದನ್ನೇನಾತಿರೋಹತಿ॥
ಏತಾವಾನಸ್ಯ ಮಹಿಮಾ, ಅತೋ ಜ್ಯಾಯಾಂಶ್ಚ ಪೂರುಷಃ ।
ಪಾದೋಸ್ಯ ವಿಶ್ವಾ ಭೂತಾನಿ ತ್ರಿಪಾದಾಸ್ಯಾಮೃತಂ ದಿವಿ ॥

ಋ. ವೇದ, ೧೦. ೯೦. ೧—೩.

ಭೂತ ವರ್ತಮಾನ ಭವಿಷ್ಯತ್ ಕಾಲದಲ್ಲಿ ಇರುವದೆಲ್ಲ ದೇವ. ಅವನು ವಿಶ್ವರೂಪದಲ್ಲಿ ಸುವ್ಯಕ್ತನಾಗುತ್ತಾನೆ. ಅವನು ಅಮೃತತ್ವದ ಒಡೆಯ ನಮಗೆ ಗೋಚರಿಸುವದೆಲ್ಲ

ಭೂತ ವರ್ತಮಾನ ಭವಿಷ್ಯತ್ ಕಾಲದಲ್ಲಿ ಇರುವದೆಲ್ಲ ದೇವ. ಅವನು ವಿಶ್ವರೂಪದಲ್ಲಿ ಸುವ್ಯಕ್ತನಾಗುತ್ತಾನೆ. ಅವನು ಅಮೃತತ್ವದ ಒಡೆಯ. ನಮಗೆ ಗೋಚರಿಸುವದೆಲ್ಲ ಅವನ ಮಹಿಮಾ. ಅವನು ಅತ್ಯಂತ ಬೃಹತ್. ವಿಶ್ವವು ಅವನ ಅಸ್ತಿತ್ವದಲ್ಲಿ ಒಂದಂಶ ಮಾತ್ರ. ಅದು ಒಂದು ಪಾದ. ಅವನು ಪೂರ್ಣಪಾದ, ತ್ರಿಪಾದ: ಅವಿನಾಶಿಯಾದ ಅಮೃತನು ಅವನೇ (ಋಕ್). ಆದರೆ 'ಪರತಂ ಪರಃ' 'ಅಗ್ರಾಹ್ಯಃ' ಅವನು ಪರತ್ಪರ; ಅತ್ಯಂತ ಸೂಕ್ಷ್ಮ. ಅವನ ಸಾಕಾರ ಹಾಗೂ ನಿರಾಕಾರ ರೂಪುಗಳನ್ನು ನಮ್ಮ ಸಾಧನೆಗಳು (ಜ್ಞಾನ-ಸಾಧನಗಳು) ಗ್ರಹಿಸಲಾರವು. ಆದುದರಿಂದಲೇ ಸಿದ್ಧರಾಮೇಶ್ವರನು ನುಡಿದ. "ಭಗವಂತನೆ, ನಿನ್ನ ಮಹಿಮೆಯನರಿವ ಅಳವು ನನಗಿಲ್ಲ. ನಿನ್ನ ಮಹಿಮೆಯು ಹಿರಿಮೆ-ಗರಿಮೆ ನಿನಗೇ ಗೊತ್ತು".

೧೨. ನುಡಿವಿರಹಿತ ಲಿಂಗ

ಈಗ ಅರಸುವ ನುಡಿ ವಿರಹಿತ ಲಿಂಗದ ನಿಲುಕಡೆ ಬೇರೆ ಉಂಟೆ ?
ಮುಕುಳದಲ್ಲಿ ಪರಿಮಳ ತೋರುವ ಕಾಲಕ್ಕೆ ತೋರದಿಪ್ಪುದೆ ?

ಕಪಿಲಸಿದ್ಧ ಮಲ್ಲಿಕಾರ್ಜುನಾ.

ವಿವರಣ :

ನಾವೀಗ ಅರಿವ ಬಯಸಿದ ಲಿಂಗದೇವನು (ವಿಶ್ವ ಕಾರಣ ಪರಮಾತ್ಮನು) ನಿಶ್ಶಬ್ದ-ಬ್ರಹ್ಮರೂಪ. ಆತ ಮುಕುಳ, ಮೊಗ್ಗು. ಸಮಯ ಬಂದಾಗ ಮೊಗ್ಗು ಅರಳುತ್ತದೆ. ಮಕರಂದವ ಹರಡುತ್ತದೆ. ಹಾಗೆ, ಸಮಯ ಬಂದಾಗ ನಿಶ್ಶಬ್ದ ಬ್ರಹ್ಮ-ದೇವನು ವಿಕಾಸಗೊಳ್ಳುತ್ತಾನೆ. ಆಗ ಈ ಸಮಸ್ತ ಜಗತ್ತು ತೋರಿಬರುತ್ತದೆ. ಇದು ಸಿದ್ಧರಾಮೇಶ್ವರನು ಮೆಚ್ಚಿ ಹೇಳಿದ ದೈವೀ-ವಿಕಾಸ-ವಾದ.

ಈಗ ಅರಸುವ ನುಡಿ ವಿರಹಿತ ಲಿಂಗದ ನಿಲುಕಡೆ ಬೇರೆ ಉಂಟೆ ? :— ಈಗ ಅರಸುವ=ಈಗ ಅರಸುತ್ತಿದ್ದೇವೆ. ವಿಶ್ವದ ವಸ್ತುಗಳ ಬಿಚ್ಚಿ ಪರೀಕ್ಷಿಸುತ್ತಿದ್ದೇವೆ. ಕಾರ್ಯ-ಜಗತ್ತನ್ನು ಹಿಡಿದು ಅವರ ಮಹಾಕಾರಣ ತತ್ತ್ವದತ್ತ ಹೆಜ್ಜೆ ಹಾಕುತ್ತಿ

ದ್ದೇವೆ. ದೇಹ ಪ್ರಾಣ ಇಂದ್ರಿಯಾದಿಗಳನ್ನು ಬದಿಗೆ ಸರಿಸಿ, ಭೂತಾತ್ಮಕವಾದ ವೈಷಯಿಕ ಸಂಸಾರವನ್ನು ಹೃದಯದಿಂದ ತೊಳೆದು ಹಾಕಿ, ಮೇಲೆ ನಡೆಯುತ್ತೇವೆ. ಭಾವ ಮಂಡಲ, ವಿಚಾರ ಮಂಡಲಗಳ ಮೀರಿ ನಿಲ್ಲುತ್ತೇವೆ. ಆಗ ಕಾಣಬರುವದು 'ಲಿಂಗ' ! ವಿಶ್ವದ ಪರಮಾಧಾನ ವಸ್ತು. ವಿಶ್ವ-ಮೂಲ ! ಅದು ಎಂಥದು ? ಅದು ನುಡಿ-ವಿರಹಿತ. ಅಲ್ಲಿ ನುಡಿಯಿಲ್ಲ. ಶಬ್ದಗಳ ಜಾಲವಿಲ್ಲ. ಅಲ್ಲಿಗೆ ಮಾತು ವಿರದೆ ; ಅದನ್ನು ವರ್ಣಿಸದು. ಅದು ನುಡಿ-ಮೌನ. ಅದು ನುಡಿಯಾಚೆ. 'ನಿಶ್ಶಬ್ದಂ ಬ್ರಹ್ಮ ಮುಚ್ಯತೇ' ಎಂದಿದೆ ಶ್ರುತಿ. ನುಡಿ ವಿರಹಿತತೆಯೇ ಆ ಮಹಲಿಂಗದ ನಿಲುಕಡೆ-ಸ್ವರೂಪ. ಮಡಿವಾಳ ಮಾಚಿದೇವರ ಒಂದು ವಚನ ಈ ಸಂದರ್ಭದಲ್ಲಿ ನೆನೆಸುವಂಥದು :

"ತನು ನಷ್ಟ, ಮನ ನಷ್ಟ, ನೆನಹು ನಷ್ಟ, ಭಾವ ನಷ್ಟ, ಜ್ಞಾನ ನಷ್ಟ.
ಇಂತೀ ಪಂಚ ನಷ್ಟದೊಳಗೆ ನಷ್ಟವಾದೆನು. ಆ ನಷ್ಟದೊಳಗೆ ನೀನು
ನಷ್ಟವಾದೆ, ಕಲಿದೇವರ ದೇವನೆಂಬ ನುಡಿ ನಿಶ್ಶಬ್ದ ಬ್ರಹ್ಮ ಉಚ್ಯತೇ."

ತನು ಮನ ನೆನಹು ಭಾವ ಹಾಗೂ ಜ್ಞಾನಗಳ ಸ್ಪಂದನಾಶೂನ್ಯವಾದ ದೇವನಲ್ಲಿ ನಾನು-ನೀನು ಎಂಬ ಶಬ್ದಗಳು ಮರೆ. ಅದು ನಾಮ-ನುಡಿಗಳಿಲ್ಲದ ನಿಶ್ಶಬ್ದ ಬ್ರಹ್ಮ !

ಅಂಥ ದಿವ್ಯ ಲಿಂಗದೇವನ ನಿಲುಗಡೆ ಬೆರೆ ಉಂಟೆ ? ಎಂದಿದ್ದಾನೆ ಸಿದ್ಧರಾಮೇಶ್ವರ. ಬೇರೆ ಎಂದರೆ ಈ ಮಹಾ ವಿಶ್ವ ಅಸ್ತಿತ್ವದಿಂದ ಭಿನ್ನವಾಗಿದೆ. ದೇವನೊಬ್ಬ ಬೇರೆ, ಈ ಜಗತ್ತೊಂದು ಬೇರೆ ಎಂದಲ್ಲ. ಎರಡು ವಸ್ತುಗಳಿಗೆ ಅವಕಾಶವಿಲ್ಲ. ಆ ಬಯಲ ದೇವನೇ ತೋರ-ವಿಶ್ವದ ಹಾಸು-ಹೊಕ್ಕು. ಮೇಲೆ ಮೇಲೆ ಭಿನ್ನವಾಗಿ ಕಂಡರೂ ಅಂತರಿಕವಾಗಿ ಅಭಿನ್ನ. ಮಣ್ಣಿಗೂ ಮಡಿಕೆಗೂ ಬೇರೆ ಉಂಟೆ ? ದೇವನೇ ವೈವಿಧ್ಯಪೂರ್ಣವಾದ ಪ್ರಪಂಚವಾಗಿ ಅಭಿವ್ಯಕ್ತನಾಗಿದ್ದಾನೆ. ಭಗವಂತನ ವಿಕಸಿತರೂಪೇ ವಿಶ್ವ.

ಮುಕುಳದಲ್ಲಿ ಪರಿಮಳ ತೋರುವ ಕಾಲಕ್ಕೆ ತೋರದಿಪ್ಪುದೆ ? ಕಪಿಲ ಸಿದ್ಧ ಮಲ್ಲಿಕಾರ್ಜುನಾ :—ಮುಕುಳ=ಮೊಗ್ಗು. ಅದನ್ನು ಬಿಚ್ಚಿ ಬಿಚ್ಚಿ ನೋಡಿ. ಅದರಲ್ಲೆಲ್ಲೂ ಮಕರಂದ ತೋರದು. ತೋರದೆಂದರೆ ಅದು ಅದರಲ್ಲಿ ಇಲ್ಲವೆಂದಲ್ಲ. ಇದೆ. ಹೇಗೆ ? ಅವ್ಯಕ್ತವಾಗಿ. ಕಾಲ ಬಂತೆಂದರೆ ಆ ಮೊಗ್ಗು ನಿಧಾನವಾಗಿ ಅರಳುತ್ತದೆ ಮೊದಲು ಕಾಣದ ಮಕರಂದ ವ್ಯಕ್ತವಾಗುತ್ತದೆ. ಸುತ್ತಲೆಲ್ಲ ಹರಡುತ್ತದೆ.ಅದರಂತೆ ನಮ್ಮ ಮನಸ್ಸು. ಅದು ಅವಿಕಸಿತವಾಗಿದ್ದರೆ ಮೊಗ್ಗೆಯ ಅವಸ್ಥೆ. ಲೌಕಿಕ ಭಾವನೆಗಳು ಅದರಲ್ಲಿ ತುಂಬಿಕೊಂಡಿರುತ್ತವೆ. ಕಾಮಾದಿಗಳಿಗೆ ಅಲ್ಲಿ ಅವಕಾಶವಿದೆ. ಅಂಥ ಮನಸ್ಸಿನ ಒಳಗೆಲ್ಲ ಭಗವಂತನಿದ್ದರೂ ಅವನು ವ್ಯಕ್ತವಾಗುವದಿಲ್ಲ. ಆದ್ದರಿಂದ ದೇವನಿಲ್ಲ ಎಂಬ ಕಲ್ಪನೆಯು ಮನಸ್ಸರಸ್ಸಿನಲ್ಲಿ ತೇಗೆಯಾಗುತ್ತದೆ.

ಕಾಲ ಮಾಗಿತೆನ್ನಿ, ಆಗ ಗುರುವು ಸ್ಪರ್ಶಿಸುತ್ತಾನೆ. ಆತ್ಮಜ್ಞಾನದ ತನಿಗಾಳಿ ತೀಡುತ್ತದೆ. ವಿವೇಕ-ಸೂರ್ಯ ಮೂಡುತ್ತಾನೆ. ಮನಸ್ಸು-ಮೊಗ್ಗು ಹದವಾಗಿ ಹರವಾಗುತ್ತದೆ. ಅರಳುತ್ತದೆ. ಧ್ಯಾನಸ್ಥಿತಿ ಅಳವಡುತ್ತದೆ. ಅಲ್ಲಿ ಈ ಮುಂಚೆ ಕಾಣಬರದಿದ್ದ ಪರಮಾತ್ಮ-ಮಕರಂದವು ಸುವ್ಯಕ್ತವಾಗುತ್ತದೆ. ಅದು ಆತ್ಮ-ದರ್ಶನ !

ವಾಲ್ಮೀಕಿ ಅತಿ ಕ್ರೂರ ಬೇಡ. ಪ್ರಾಣಿಗಳನ್ನು ತರಿದ. ಪ್ರವಾಸಿಕರನ್ನು ಅರಣ್ಯ ಮಾರ್ಗದಲ್ಲಿ ಇರಿವ. ಅವನ ಹೆಸರು ಕೇಳಿದರೂ ಪ್ರಯಾಣಿಕರು ನಡುಗುತ್ತಿದ್ದರು. ಅವನ ಮನ ಸಂಕುಚಿತ. ಅಲ್ಲಿ ಹೆಂಡತಿ ಮಕ್ಕಳಿಗಲ್ಲದೆ ಸತ್ಯ, ಅಹಿಂಸೆಗಳಿಗೆ ಅವಕಾಶವಿರಲಿಲ್ಲ; ಕಾಮ ಕ್ರೋಧಗಳಿಗಲ್ಲದೆ ಗುರು-ದೇವತೆಗಳಿಗೆ ಸ್ಥಾನವಿರಲಿಲ್ಲ. ಅದು ಅವನ ಅವಿಕಸಿತ ರೂಪು. ಮುಂದೊಂದು ದಿನ ಬಂತು. ಮಹರ್ಷಿ ನಾರದರ ದರ್ಶನವಾಯ್ತು. ಅವನ ಮನಸ್ಸು ತನ್ನ ಮೌಢ್ಯವನ್ನು ತ್ಯಜಿಸಿತು. ಸಂಕೋಚ ವೃತ್ತಿಯನ್ನು ಚೆಲ್ಲಿಹಾಕಿತು. ರಾಮನಾಮದ ಕಾವಿನಲ್ಲಿ ಹೂವಾಯಿತು. ಆತ್ಮ-ರಾಮನ ಸಾಕ್ಷಾತಾರ ಹೊಂದಿತು. ಅವನು ಮಹರ್ಷಿಯಾದ. ಅವನ ಮಾತಿನ ತುಂಬ ಭಗವಂತನ ಸತ್ಯ-ಶಿವ-ಸುಂದರ ರೂಪು ಪ್ರತಿಫಲಿಸಿತು !

ಗುರು ಚರಣಕ್ಕೆ ನುಡಿಕಾಣಿಕೆ

—ಶಿವರುದ್ರಮ್ಮ ಬಿ. ಎಸ್. ಸಿ.

ವಚನ ಕ್ರಾಂತಿಯ, ಪಾಂಚಜನ್ಯವ ಮೊಳಗಿಸಿದ
ಸ್ವಾಮಿ ಸದ್ಗುರುಲಿಂಗಾನಂದ
ಸದ್ಗುರು ಸ್ವಾಮಿ ಲಿಂಗಾನಂದ ॥ ಪಲ್ಲವಿ ॥
ಬಸವ ಧರ್ಮದ , ಸಂವಿಧಾನದ
ನೀತಿ ನಿಯಮದಿಂದ
ಲೋಕಕಾನಂದ ತಂದ ,ಕನ್ನಡಾಂಬೆಯ ಕಂದ ॥೧॥
ದೀನದಲಿತರ , ಊರು-ಕೇರಿಯಲಿ
ವಚನ ತತ್ತ್ವ ಬೀರಿ
ಜಾಗಟೆಯ ಬಾರಿಸಿದ, ಜನಜಾಗ್ರತಿಯ ಮೂಡಿಸಿದ ॥೨॥
ವಿಶ್ವಕೆ ಕರೆಯ, ನೀಡಿಹ ನೋಡಿ
ಮನುಜರೊಂದೆ ಎಂದು
ಕುಹಕ ಜನರು ನಿಂದಿಸಿ ನಗಲು
ನಿಜ ಜಂಗಮಕ್ಕಳವಿಲ್ಲವೆಂದರು ॥೩॥
ಜಾತಿವಾದಿಗಳ ಲೆಕ್ಕಿಸದೆ
ಅಕ್ಕನ ಪೀಠವ ಸ್ಥಾಪಿಸುತ
ಅಕ್ಕನ ಪ್ರತಿರೂಪ ರೂಪಿಸಿದ
ಜಗದ್ಗುರು ಮಾತೆ ಮಹಾದೇವಿಯ
ನಿರ್ಮಿಸಿದ – ನಿರೂಪಿಸಿದ ॥೪॥

ಸಮಸ್ಯೆ—ಸಮಾಧಾನ

— ಅಮರನಾಥ ಕೋಹಿನೂರ, ಬೀದರ :

● ಬಸವಣ್ಣನವರು ಲಿಂಗೈಕ್ಯರಾಗುವ ಮುಂಚೆ ತನ್ನ ಸತಿಯಳಾದ ನೀಲಾಂಬಿಕೆಯನ್ನು ಕಲ್ಯಾಣದಿಂದ ಕೂಡಲಸಂಗಮಕ್ಕೆ ಬರುವಂತೆ ಕರೆ ಕಳುಹಿಸಿದರು. ಗಂಗಾಂಬಿಕೆಯನ್ನೇಕೆ ಕರೆಯಲು ಹೇಳಲಿಲ್ಲ?

○ ಬಸವಣ್ಣ-ಗಂಗಾಂಬಿಕೆ-ನೀಲಾಂಬಿಕೆ, ಇವರುಗಳೆಲ್ಲರು ವೈವಾಹಿಕ ಸಂಬಂಧ, ರಕ್ತಸಂಬಂಧಕ್ಕಿಂತ ಹೆಚ್ಚಾಗಿ ಅಧ್ಯಾತ್ಮಿಕ ಸಂಬಂಧ ಹೊಂದಿದ್ದವರು. ಪ್ರೇಮ-ವ್ಯಾಮೋಹಗಳ ಕಕ್ಷೆಯಲ್ಲಿ ನಿಂತು ಕೆಲಸ ಮಾಡುವುದಕ್ಕಿಂತ ಮಿಗಿಲಾಗಿ, ಕರ್ತವ್ಯಭಾವದಿಂದ ದುಡಿಯುವವರು. ಅಕ್ಕನಾಗಮ್ಮ, ಗಂಗಾಂಬಿಕೆ, ಚನ್ನಬಸವಣ್ಣನಿಗೆ ಸಾಹಿತ್ಯವನ್ನು ಹೊತ್ತು ಅದನ್ನು ರಕ್ಷಿಸುವ ಹೊಣೆಗಾರಿಕೆ ಇತ್ತು. ಅವರು ಉಳವಿ ಕಡೆಗೆ ಹೋದರು. ರಾಜ ಮನೆತನದೊಡನೆ ಸಂಬಂಧ ಹೊಂದಿದ್ದ ನೀಲಾಂಬಿಕೆ ಕಲ್ಯಾಣದಲ್ಲಿ ಉಳಿದಿದ್ದ ಶರಣರ ಹಿತರಕ್ಷಣೆಯಲ್ಲಿ ನಿರತಳಾಗಿದ್ದು, ಕಾಲಾನಂತರದಲ್ಲಿ ಹೇಳಿ ಕಳಿಸಿದಾಗ ಸಂಗಮದ ಕಡೆಗೆ ಬರುತ್ತಾಳೆ. ಎಲ್ಲಕ್ಕಿಂತ ಮಿಗಿಲಾಗಿ, ಆಕೆ ಬಸವಣ್ಣನವರಿಗೆ "ವಿಚಾರ ಪತ್ನಿ" [Intellectual Companion] ಯಾಗಿ, ಉತ್ತಮ ಸಲಹೆಗಾರಳಾಗಿದ್ದಿರಬಹುದು; ಧರ್ಮ ಜಾಗೃತಿಯ ಕಾರ್ಯದಲ್ಲಿ ಸಹಭಾಗಿಯಾಗಿದ್ದಳು. ಅಂತೆಯೇ ಬಸವಣ್ಣನವರ ವಚನಗಳಲ್ಲಿ. ಉಳಿದ ಶರಣರ ವಚನಗಳಲ್ಲಿ ನೀಲಾಂಬಿಕೆಯ ಹೆಸರು ಉಲ್ಲೇಖವಾದಷ್ಟು ಗಂಗಾಂಬಿಕೆಯ ಹೆಸರು ಉಲ್ಲೇಖವಾಗಿಲ್ಲ.

— ಅನುರನಾಥ, ಬೀದರ :

● ಕೇವರು ಹೇಳುತ್ತಾರೆ; ಚಾಡಿ ಹೇಳುವವರ ನಾಲಿಗೆ ಕೊಯ್ಯಬೇಕು, ಕೇಳುವವರ ಕಿವಿ ಕೊಯ್ಯಬೇಕು ಎಂಬುದಾಗಿ. ಆದರೆ ಆ ಕೆಲಸವನ್ನು ಅವರೇ ಮಾಡುತ್ತಾರೆ. ಅಂಥವರನ್ನು ಏನು ಮಾಡಬೇಕು ?

○ 'ಆರೆ ಭಕ್ತರಾದವರ ನೆರೆಬೇಡ, ಹೊರೆಬೇಡ' ಎಂಬ ಬಸವಣ್ಣನವರು ಹೇಳಿ

ಲ್ಲವೆ? ನುಡಿದಂತೆ ನಡೆವವರು ಪೂರ್ಣಭಕ್ತರು; ನುಡಿ ಚೆನ್ನಾಗಿದ್ದು, ನಡೆಯಿಲ್ಲದವರು ಅರೆಭಕ್ತರು. ಆದ್ದರಿಂದ ಅಂತಹ ಅರೆಭಕ್ತರ ಸಹವಾಸ ತೊರೆದು, ದೂರವಿರಿ. ಅಂಥವರ ಮಾತು ಕೇಳುವ ಮುನ್ನ ಬಹಳ ಎಚ್ಚರಿಕೆಯಿಂದ ಫಿಲ್ಟರ್ ಮಾಡಿ ವಿಷಯಗಳನ್ನು ಅರ್ಥಮಾಡಿಕೊಳ್ಳುವ ಜಾಣತನವಿರಲಿ.

— **ಭಾರತಿ ಕೌಠಾ, ಬೀದರ ;**

● ಬಸವಣ್ಣನವರು ಕಲ್ಯಾಣದಲ್ಲಿ ಕ್ರಾಂತಿಯಾದ ನಂತರ ಸಂಗಮಕ್ಕೆ ಹೋಗಿ. ಮೂರು ತಿಂಗಳ ಕಾಲ ಅನುಷ್ಠಾನದಲ್ಲಿದ್ದು ಶ್ರಾವಣ ಶುದ್ಧ ಪಂಚಮಿಯಂದು ಲಿಂಗೈಕ್ಯರಾದರು ಎಂದಿದ್ದೀರಿ. ಆದರೆ, ನೀಲಾಂಬಿಕೆ ಕರೆ ಕಳುಹಿಸಲ್ಪಟ್ಟು ಹೋಗುವಾಗ, ಮಾರ್ಗ ಮಧ್ಯದಲ್ಲಿರುವಾಗಲೇ ಬಸವಣ್ಣನವರು ಲಿಂಗೈಕ್ಯರಾದ ಸುದ್ದಿ ತಿಳಿದಾಗ ತಂಗಡಗಿಯಲ್ಲಿ ಲಿಂಗೈಕ್ಯಳಾದಳು ಎಂದಿದ್ದೀರಿ. ನಮಗಿದು ಅರ್ಥವಾಗುತ್ತಿಲ್ಲ ವಿವರಿಸಿರಿ.

○ ಅಂದಿನ ಕಾಲದಲ್ಲಿ ಕಲ್ಯಾಣದಿಂದ ಸಂಗಮಕ್ಕೆ ಬರುವಾಗ. ಕೃಷ್ಣಾ ನದಿಯನ್ನು ದಾಟಬೇಕಾಗಿದ್ದಿತ್ತಷ್ಟೆ. [ಈಗ ಸೇತುವೆಯಾಗಿದೆ.] ತಂಗಡಗಿ ಈಗ ಇರುವ ಸ್ಥಳದಲ್ಲಿ, ಅಂಥದೊಂದು ದಾಟುವ ಸ್ಥಳವಿತ್ತು. ಅಪ್ಪಣ್ಣನವರೊಡಗೂಡಿ ನೀಲಾಂಬಿಕೆ ಬಂದಾಗ, ಕೃಷ್ಣೆಯಲ್ಲಿ ಪ್ರವಾಹ ತುಂಬಿ ಬಂದಿದೆ. ಆಗ ಸುದ್ದಿ ತಿಳಿಯುತ್ತದೆ. ಕೃಷ್ಣಾನದಿಯ ಆ ಬದಿಗಿರುವ ಸಂಗಮದಲ್ಲಿರುತ್ತಿದ್ದ ಬಸವಣ್ಣನವರು ಲಿಂಗೈಕ್ಯರಾಗಿರುತ್ತಾರೆ. ನೀಲಾಂಬಿಕೆ ಉದ್ವಿಗ್ನಳಾಗಿ ದುಃಖಿಸದೆ, ಇಷ್ಟಲಿಂಗ ಪೂಜೆಯಲ್ಲಿ ತಲ್ಲೀನಳಾಗಿ ಕುಳಿತಾಗ ಅದರಲ್ಲಿಯೇ ಬಸವಣ್ಣನ ದರ್ಶನವನ್ನು ಪಡೆಯುತ್ತಾಳೆ. ಅವರ ನಿರೂಪದಂತೆ ತಾನು ಇಚ್ಛಾಮರಣಿಯಾಗಿ ದೇಹವನ್ನು ವಿಸರ್ಜಿಸಿ ದೇವರಲ್ಲಿ ಒಂದಾಗುತ್ತಾಳೆ. ಸಂಗಮ ಮತ್ತು ತಂಗಡಗಿ ಕೃಷ್ಣಾನದಿಯ ಎರಡೂ ಬದಿಗಳಲ್ಲಿವೆ ಎಂಬುದನ್ನು ನೀವು ಗಮನಿಸಬೇಕು, ಬಸವಣ್ಣನವರ ಸಮಾಧಿ ಮಂಟಪದಲ್ಲಿಟ್ಟ ದೀಪ ನೀಲಾಂಬಿಕೆಯ ಗುಡಿಯಲ್ಲಿರುವ ಒಂದು ಕಿಂಡಿಯ ಮೂಲಕ ನೋಡಿದಾಗ ಕಾಣುತ್ತದೆ ಎಂಬ ಪ್ರಚಲಿತ ಪದ್ಧತಿ ನಮ್ಮ ಈ ವಿಚಾರಕ್ಕೆ ಪುಷ್ಟಿ ಕೊಡುತ್ತದೆ.

— **ಅನ್ನಪೂರ್ಣ ಕೌಠಾ, ಬೀದರ**

● ಬಾಲ ಲೀಲಾ ಮಹಾಂತ ಶಿವಯೋಗಿಗಳು, ಓರ್ವ ಸ್ತ್ರೀಯು ಮಕ್ಕಳನ್ನು ಕಳೆದುಕೊಂಡು, ಮಕ್ಕಳ ವರವನ್ನು ಅನುಗ್ರಹಿಸಿರಿ ಎಂದಾಗ, ತಮ್ಮನ್ನೇ ಮಗನನ್ನಾಗಿ ಸ್ವೀಕರಿಸಲು ಹೇಳಿ, ಮಗುವಿನಂತಾಗಿ ಲೀಲೆ ಮಾಡಿದರಂತೆ. ಇದು ಹೇಗೆ ಸಾಧ್ಯ ?

○ ಅದೇ ಅಧ್ಯಾತ್ಮ ಸಾಧನೆಯ ಗುರಿ! ಅಕ್ಕಮಹಾದೇವಿಯನ್ನು ಕುರಿತು ಬಸವಣ್ಣನವರು ಹೇಳುವರು : "ಹೆಂಗೂಸಿನಂಗವ ನೋಡಿರೆ ಪುರಾತನರು, ಬಾಲತನದಂಗವ ನೋಡಿರೇ ಲಿಂಗವಂತರು," ಎಂಬುದಾಗಿ. ಇಂತಹ ಬಾಲತನವನ್ನು, ಮಗುವಿನಂತಹ ನಿಷ್ಕಲ್ಮಷ, ಮುಗ್ಧ ಸ್ವಭಾವವನ್ನು ಪಡೆಯುವುದೇ ಪರಮಾರ್ಥಿಕ ಜೀವನದ ಧ್ಯೇಯ.

— **ಎಸ್. ಗುಜ್ಜಲಕರ್, ಬಿಜಾಪುರ :**

● ಕರ್ಮಾನುಸಾರ ಹುಟ್ಟು–ಸಾವು ಸ್ವಾಭಾವಿಕ. ಹುಟ್ಟಿದ ಮನುಷ್ಯ ಸಾಯಬೇಕು. ಆದರೆ ಅದೇ ಆಗ ಹುಟ್ಟಿದ ಮಕ್ಕಳು, ಅಥವಾ ಎರಡು–ಮೂರು ತಿಂಗಳವು ಅಥವಾ ಚಿಕ್ಕ ವಯಸ್ಸಿನವು ಕೆಲವು ಸಲ ಸಾವನ್ನಪ್ಪುತ್ತವೆ. ಯಾವ ಪಾಪವನ್ನೂ ಕಂಡರಿಯದ ಮಕ್ಕಳ ಪ್ರಾಣವನ್ನು ದೇವರು ಏಕೆ ತೆಗೆದುಕೊಳ್ಳುತ್ತಾನೆ ?

○ ಆ ಜೀವ ಈ ಜನ್ಮದಲ್ಲಿ ಯಾವ ಕರ್ಮವನ್ನು ಮಾಡಿರದಿದ್ದರೂ ಹಿಂದಿದ ಜನ್ಮದಲ್ಲಿ ಮಾಡಿದ ಕರ್ಮಾನುಸಾರ ವರ್ತಿಸುತ್ತದೆ. ಒಂದು ಟ್ರೇನ್ ಇಳಿದು ಇನ್ನೊಂದು ಟ್ರೇನ್ ಹತ್ತುವ ಮುನ್ನ ತಾತ್ಕಾಲಿಕವಾಗಿ ನಿಲ್ದಾಣದಲ್ಲಿ ಕಾಯುವಂತೆ, ಕೆಲವು ಜೀವಗಳು ತಮ್ಮ ಶಾಶ್ವತ ನೆಲೆಯನ್ನು ಕಂಡುಕೊಳ್ಳುವ ಮೊದಲು ತಾತ್ಕಾಲಿಕವಾಗಿ ಕೆಲವು ತಾಯಿ – ತಂದೆಗಳಲ್ಲಿ ನೆಲೆ ನಿಲ್ಲುತ್ತವೆ. ಹೀಗಾಗಿ ಕೆಲವೇ ಸಮಯದಲ್ಲಿ ಅಲ್ಲಿಂದ ನಿರ್ಗಮಿಸುತ್ತವೆ, ಬೇರೆ ಭೂಮಿಕೆ ಸಿದ್ಧವಾಗಿರುವಾಗ.

— **ಡಾ|| ವಿ. ಕೆ. ಜವಳಿ, ಬೆಂಗಳೂರು :**

● " ಕುದುರೆ ಮೋತಿ" ಮಠಾಧೀಶರ ಪ್ರಕರಣದ ವಿಷಯ ಪತ್ರಿಕೆಗಳಲ್ಲಿ ಬರುತ್ತಿದೆ. ತಾವೇಕೆ ಪ್ರತಿಭಟನೆ ಹೇಳಿಕೆ ಕೊಡುತ್ತಿಲ್ಲ ?

○ ಸತ್ಯಾಸತ್ಯ ನಿರ್ಣಯ ಮಾಡಲು ಸಂಬಂಧಿಸಿದ ಇಲಾಖೆ ಇದೆ; ನ್ಯಾಯಾನ್ಯಾಯ ನಿರ್ಧರಿಸಲು ನ್ಯಾಯಾಲಯಗಳಿವೆ. ಒಬ್ಬೊಬ್ಬರು ಒಂದೊಂದು ಬಗೆಯ ಹೇಳಿಕೆ, ವರದಿ ಕೊಡುವಾಗ ನಮಗೆ ಸಂಬಂಧಿಸದ ವಿಷಯದಲ್ಲಿ ಮೂಗು ಚಾಚುವುದು ತಪ್ಪಲ್ಲವೆ? ಸರ್ಕಾರವೇ ಸಮಿತಿ ರಚಿಸಿದೆ ಅಂದಾಗ ನಾವು ಮನಸ್ಸಿಗೆ ಬಂದಂತೆ ಮಾತನಾಡುವುದು ಸರಿಯಲ್ಲ.

— **ಶಿವನಗೌಡ, ದೇವಲ ಸುಗೂರು :**

● ಜುಲೈ ತಿಂಗಳ ಕಲ್ಯಾಣ ಕಿರಣ ಓದಿದೆವು. ಬಸವಣ್ಣನವರು ಹುಟ್ಟಿದುದು ಎಳ್ಳಮವಾಸ್ಯೆಯ ದಿನ ಎಂದು ತಾವು ಬರೆದಿದ್ದೀರಿ. ಆದರೆ ಈಗ ಪ್ರಚಾರ

ದಲ್ಲಿರುವುದು ಅಕ್ಷಯ ತೃತೀಯಂದು! ಮಾತ್ರವಲ್ಲ ಸರ್ಕಾರವು ಸಾರ್ವತ್ರಿಕ ರಜೆಯನ್ನೂ ಸಹ ಕೊಟ್ಟಿದೆ. ಯಾವುದು ಸರಿ ?

○ ಬಸವಣ್ಣನವರ ಜಯಂತಿಯನ್ನು ಆಚರಿಸಬೇಕೆಂಬ ಆಕಾಂಕ್ಷೆಯೊಡನೆ ಸಂಸ್ಕೃತ ಬಸವ ಪುರಾಣದಲ್ಲಿ ಬಂದ ಉಲ್ಲೇಖದಂತೆ ಶ್ರೀ ಹರ್ಡೇಕರ್ ಮಂಜಪ್ಪನವರು ಮತ್ತು ಪೂಜ್ಯ ಶ್ರೀ ಮೃತ್ಯುಂಜಯ ಸ್ವಾಮಿಗಳು ಅಕ್ಷಯ ತೃತೀಯಾವನ್ನು ಆರಿಸಿಕೊಂಡರು. ಆದರೆ ಪಾಲ್ಕುರಿಕೆ ಸೋಮನಾಥ ಮತ್ತು ಭೀಮಕವಿಯ ಬಸವ ಪುರಾಣಗಳ ಅಧಿಕೃತ ಹೇಳಿಕೆಯಂತೆ ಬಸವಣ್ಣನವರು ಹುಟ್ಟಿದುದು ಅತ್ಯಂತ ವಿಶೇಷ ಘಳಿಗೆಯಾದ ಅರ್ಧೋದಯದಲ್ಲಿ. ಎಷ್ಟೋ ವರುಷಗಳಿಗೊಮ್ಮೆ ಬರುವ ಈ ಅರ್ಧೋದಯವು ಭಾನುವಾರ ೨೧-೧-೧೧೪೦ ರಂದು ಬಂದಿತೆಂದು ಡಾ|| ಬಾಡಾಲ ರಾಮಯ್ಯನವರ ಖಚಿತ ಅಭಿಪ್ರಾಯ. ಅದು ಹಿಂದೂ ಕಾಲಮಾನದ ಪ್ರಕಾರ ಪುಷ್ಯಮಾಸದ ಅಮವಾಸ್ಯೆ. ಬಸವಣ್ಣನವರ ಜನ್ಮಸ್ಥಳವಾದ ಬಾಗೇವಾಡಿಗೆ ಹೋದಾಗ ಅಲ್ಲಿ ಕೆಲವು ವಯಸ್ಕ ಹಳ್ಳಿ ಹೆಣ್ಣು ಮಕ್ಕಳು ಜನಪದ ಗೀತೆ ಹಾಡುವರೆಂಬುದನ್ನು ಕೇಳಿ ಕರೆಸಿದೆವು. ಆ ಜನಪದ ಗೀತೆಗಳಲ್ಲಿ ಎಳ್ಳಮವಾಸ್ಯೆ ದಿನ, ತೆನೆ ತುಂಬಿದ ಜೋಳದ ಹೊಲದಲ್ಲಿ ಬಸವಣ್ಣನನ್ನು ಹೆತ್ತಳು ಎಂದು ಹಾಡುತ್ತಾರೆ. ಡಾ|| ಬಾಡಾಲ ರಾಮಯ್ಯನವರ ಸಂಶೋಧನೆ ಬಹಳ ಅಧಿಕೃತವಾಗಿರುವ ಕಾರಣ, ಅದನ್ನೇ ಸ್ವೀಕರಿಸಲು ನಾವು ಬಯಸಿದ್ದೇವೆ. ಈ ದಿವಸದ ಬಳಕೆ ಜನಪ್ರಿಯವಾಯಿತೆಂದರೆ, ಸಾರ್ವತ್ರಿಕ ರಜಾದಿನದ ಬದಲಾವಣೆಗಾಗಿ ಸಮಾಜದವರು ಪ್ರಯತ್ನಿಸಬಹುದು.

— **ಮಾತೆ ಸತ್ಯವತಿ ದೇವಿ, ಬಾಗಲಕೋಟೆ** :

● ಜುಲೈ ಕಲ್ಯಾಣ ಕಿರಣ ನೋಡಿ ತುಂಬಾ ಸಂತೋಷವಾಯಿತು, ಬಸವಣ್ಣನವರಿಂದ ಇಷ್ಟಲಿಂಗವು ರೂಪುಗೊಂಡಿತು ಎಂದರೆ, ಹಾಗಾದರೆ ನೀವೆಲ್ಲ ಬ್ರಾಹ್ಮಣರೇ ಎಂದು ಕೊಂಕಿನಿಂದ ಕೇಳುತ್ತಾರೆ. ಅವರಿಗೆ ಏನು ಹೇಳಬೇಕು ?

○ ಜನ್ಮತಃ ಬ್ರಾಹ್ಮಣರಾದ ಬಸವಣ್ಣನವರು ಒಂದು ಹೊಸ ತತ್ತ್ವ, ಕುರುಹು ಕೊಟ್ಟ ಮಾತ್ರಕ್ಕೆ, ಅದನ್ನು ಬ್ರಾಹ್ಮಣರೇ ಸ್ವೀಕರಿಸಬೇಕೆಂದೇನೂ ಇಲ್ಲ. ರೇಲ್ವೆ ಗಾಡಿಯನ್ನು ಕಂಡುಹಿಡಿದವನು ಸ್ಟೀವನ್‌ಸನ್ ಅಂದ ಮಾತ್ರಕ್ಕೆ ಅದರಲ್ಲಿ ಕ್ರೈಸ್ತರೇ ಪ್ರಯಾಣಿಸಬೇಕೆಂದೇನೂ ಇಲ್ಲ. ಗುರಿಯನ್ನು ತಲುಪಬೇಕೆಂಬುವವರೆಲ್ಲ ಪ್ರಯಾಣಿಸುವಂತೆ, ದೈವೀ ಸಾಮರಸ್ಯ ಪಡೆಯಬೇಕೆಂಬುವವರೆಲ್ಲ ಜಾತಿ ಮತ ಪಂಥ ಭೇದವಿಲ್ಲದೆ ಪಡೆದುಕೊಳ್ಳಬಹುದು.

ವಿಜ್ಞಾನ ಮತ್ತು ಹಿಂದೂ ಪರಂಪರೆ

— ಆರ್. ಶಿವರುದ್ರಯ್ಯ ರಾಮಮೂರ್ತಿನಗರ

ಸತತ ಪರಿಶ್ರಮದಿಂದಲೂ, ಸಂಶೋಧನೆಯಿಂದಲೂ ಸಿಗುವ ಜ್ಞಾನಕ್ಕೆ ವಿಜ್ಞಾನ ಎನ್ನಬಹುದಾಗಿದೆ. ಭೌತಿಕವಾಗಿ ನಮಗೆ ಗೋಚರಿಸಬೇಕು., ಅಥವಾ ಬುದ್ಧಿ-ಮನಸ್ಸುಗಳಿಗಾದರೂ ಅನ್ನಿಸಬೇಕು. ಅಂತಹ ಪ್ರಯೋಗಾತ್ಮಕ ಜ್ಞಾನಕ್ಕೆ ವಿಜ್ಞಾನ ಎನ್ನಲಾಗಿದೆ. ಹಿಂದೂ ಪರಂಪರೆಯು ಸಹ ಇಂತಹ ವೈಜ್ಞಾನಿಕ ಅಂಶಗಳಿಗೆ ಮಹತ್ವವಿತ್ತಿದೆ. ಉಪನಿಷತ್ತುಗಳಲ್ಲಿ ಅದು ಹೇಗೆ? ಇದು ಹೇಗೆ? ಎಂಬುವಂತಹ ಜಿಜ್ಞಾಸೆಯಿದೆ. ನಾನು ಯಾರು? ನನ್ನ ಒಡೆಯನಾರು? ಈ ಜಗತ್ತಿಗೆ ಆಧಾರ ಏನು ಎಂಬುವಂತಹ ಚಿಂತನೆಯನ್ನು ನಮ್ಮೀ ಉಪನಿಷತ್ತುಗಳು ಒದಗಿಸುತ್ತವೆ. "ವಿದ್ಯಾಂ ಚ ಅವಿದ್ಯಾಂ ಚ ಯಿಸ್ತದ್ವೇದೋ ಭಯಂ ಸಹ ಅವಿದ್ಯೆಯಾ ಮೃತ್ಯುಂತೇತ್ವಾನ್ ವಿದ್ಯೆಯಾ ಅಮೃತಮಶ್ನುತೇ" ಎಂದರೆ ವಿಜ್ಞಾನ ಮತ್ತು ಅಧ್ಯಾತ್ಮ ಜ್ಞಾನವನ್ನು ಯಾರು ತಿಳಿಯುತ್ತಾರೋ ಅವರು ವಿಜ್ಞಾನದಿಂದ ಈ ಮರ್ತ್ಯಲೋಕವನ್ನು (ಸುಖದಿಂದ) ದಾಟಿ ಅಧ್ಯಾತ್ಮ ಜ್ಞಾನದಿಂದ ಅಮರತ್ವವನ್ನು ಹೊಂದುತ್ತಾರೆಂದು ನಮ್ಮ ಋಷಿಮುನಿಗಳು ಹೇಳಿದ್ದಾರೆ. ಇಂದು ನಾವು ಬಳಸುವಂತೆ ನಮ್ಮ ಪೂರ್ವಜರೂ ವಿಮಾನವನ್ನು ಬಳಸುತ್ತಿದ್ದರು. ರಾವಣನ ಬಳಿ ಪುಷ್ಪಕ ವಿಮಾನವಿದ್ದುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಇತ್ತೀಚೆಗೆ ಪತ್ರಿಕೆಗಳಲ್ಲಿ ಪ್ರಕಟವಾಗಿರುವಂತೆ ಒಬ್ಬರು ಸಂಚಾರೀ ಕಾರು ನಿಲ್ದಾಣವನ್ನು ರಚಿಸಲಿದ್ದು ೫೦ ಕಾರುಗಳು ನಿಲ್ಲುವ ಕಡೆ ೨೫೦ಕ್ಕೂ ಹೆಚ್ಚಿನ ಕಾರುಗಳನ್ನು ನಿಲ್ಲಿಸಬಹುದು. ಹಾಗೂ ಇದರ ವೆಚ್ಚವೂ ಕಡಿಮೆಯಾಗುವುದು. ಅದೇ ರೀತಿ ರಾವಣನ ಪುಷ್ಪಕ ವಿಮಾನ ಅಗತ್ಯಕ್ಕೆ ತಕ್ಕಂತೆ ಹಿರಿದಾಗಿಯೂ ಕಿರಿದಾಗಿಯೂ ವಿಕಾಸವಾಗುತ್ತಿತ್ತು. ಹಾಗೂ ಗಣಿತಶಾಸ್ತ್ರಕ್ಕೆ ಕ್ರಾಂತಿಯನ್ನೇ ಮಾಡಿದ ಸೊನ್ನೆಯನ್ನು ನಮ್ಮ ಋಷಿಮುನಿಗಳೇ ಕಂಡುಹಿಡಿದಿರುತ್ತಾರೆ. ಸ್ವಾಮಿ ವಿವೇಕಾನಂದರು ರಾಮಕೃಷ್ಣರನ್ನು ಪರೀಕ್ಷಿಸಿ, ತಮಗೆ ಇವರು ಗುರುವಾಗಲು ಲಾಯಕ್ಕು ಎನ್ನಿಸಿದ ಮೇಲೆಯೇ ಅವರನ್ನು ಗುರುವಾಗಿ ಸ್ವೀಕರಿಸಿದ್ದು. ಹಾಗೂ ಇಂದಿನ ಶಿಕ್ಷಣ ಪದ್ಧತಿಯಲ್ಲಿರುವಂತಹ ಯೂನಿವರ್ಸಿಟಿಗಳು ನಮ್ಮೀ ದೇಶದಲ್ಲಿದ್ದವು. ನಳಂದಾ ತಕ್ಷಶಿಲೆ ಮೊದಲಾದ ಕಡೆಗಳಲ್ಲಿ ಇಂತಹ ವಿಶ್ವವಿದ್ಯಾಲಯಗಳಿದ್ದು, ನಳಂದಾ ವಿಶ್ವವಿದ್ಯಾಲಯದಲ್ಲಿ ಇಪ್ಪತ್ತು ಸಾವಿರ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದರು. ಘಜನಿ ಮಹಮ್ಮದನು ಇದನ್ನು ಹಾಳುಮಾಡಿದನೆಂಬುದು ಐತಿಹಾಸಿಕ ಘೋರ ದುರಂತವೇ ಸರಿ. ಕತ್ತಲಿನಲ್ಲಿ ಕುಳಿತು ಕತ್ತಲು ಕತ್ತಲು ಎಂದರೆ ಬೆಳಕು ಬಂದೀತೆ? ಒಂದು ದೀಪ

ಹಚ್ಚಿದರೆ ಬೆಳಕು ಕಂಡೀತು ಎನ್ನುವಂತೆ ದೇವರು ಎಲ್ಲಿ ಎಲ್ಲಿ ಎಂದು ಕೇಳಿದರೆ ಸಂದುಗೊಂದುಗಳಲ್ಲಿ ತಡಕಾಡಿದರೆ ದೇವರು ಸಿಗುವನೇ? ಸಂದರ್ಶನಕ್ಕೆ ಹೋಗುವವನು ತಯಾರಿ ನಡೆಸಿಕೊಂಡು ಹೋಗುವಂತೆ ವಿಜ್ಞಾನಿಯು ಯಾವುದೋ ಒಂದು ಸೂತ್ರಕ್ಕಾಗಿ ವರುಷಗಳನ್ನೇ ಕ್ಷಣಗಳನ್ನಾಗಿಸಿ ಪ್ರಯತ್ನಿಸುವಂತೆ ದೇವರನ್ನು ಕಾಣುವ ಅಧ್ಯಾತ್ಮ ಜ್ಞಾನವನ್ನು ಸಂಪಾದಿಸು ಅಂದರೆ ಈ ಅಧ್ಯಾತ್ಮ ಜ್ಞಾನ ಒಂದು ಬಗೆಯ ಟ್ರೈನಿಂಗ್ ಇದ್ದಂತೆ. ಡಿಪ್ಲೊಮಾ ತರಬೇತಿ ಪಡೆದವರಿಗೆಲ್ಲ ಸರ್ಕಾರಿ ಉದ್ಯೋಗ ಸಿಗುವುದಿಲ್ಲ. ತನಗೆ ಸರ್ಕಾರಿ ಉದ್ಯೋಗ ಸಿಗಲಿಲ್ಲವೆಂದು ಈ ದೇಶದಲ್ಲಿ ಸರ್ಕಾರವೂ ಇಲ್ಲ ಪ್ರಜಾಪ್ರಭುತ್ವವೂ ಇಲ್ಲ ಎನ್ನಲಾದೀತೆ? ಗಾಳಿಯು ಹಿಂದೆಯೂ ಇತ್ತು-ಈಗಲೂ ಇದೆ ಮುಂದೆಯೂ ಇರುತ್ತದೆ. ಆದರೆ ಅದನ್ನು ಪೊಟ್ಟಣದಲ್ಲಿ ಕಟ್ಟಿಸಿ. ಭೌತಿಕವಾಗಿ ನೋಡಲು ಸಾಧ್ಯವಾದೀತೆ! ಹಾಗೆಂದು ಅದನ್ನು ಇಲ್ಲ ಎಂಬುನಂತಹ ತೀರ್ಮಾನ ಸರಿಯೇ? ದೇವರನ್ನು ಕಾಣಲು ಪ್ರಯತ್ನಿಸದೆ ದೇವರೆಲ್ಲಿ ಎಂದರೆ ನೋಡಲು ಸಾಧ್ಯವೇ? 'ಸರಿ, ನಾನು ಪ್ರಯತ್ನ ಪಡ್ತೀನಪ್ಪ, ನಂಗೆ ನೀನು ದೇವ್ರನ್ನ ತೋರ್‍ಸು' ಎಂದು ಮಕ್ಕಳಂತೆ ಹಟ ಹಿಡಿದರೆ ಸಾಧ್ಯವೇ? ಅದಕ್ಕಾಗಿಯೇ ಗೀತೆಯಲ್ಲಿ ಪ್ರಯತ್ನ ನಿನ್ನದು ಫಲಾಪೇಕ್ಷೆ ನಿರೀಕ್ಷಿಸಬೇಡ. ಸರಿಯಾದ ಫಲ ದೊರೆಯದಿದ್ದರೆ ನಮ್ಮ ಕಾರ್ಯದಲ್ಲಿಯೇ ಲೋಪವಿರಬೇಕು. ನಮ್ಮ ಲೋಪ ಹುಡುಕದೆ ಸರಿಯಾದ ಪ್ರತಿಫಲ ದೊರೆಯಲಿಲ್ಲವೆನ್ನುವುದು ಸರಿಯಿಲ್ಲ. ಆರ್ಕಿಮಿಡೀಸ್ ಹಲವಾರು ವರ್ಷಗಳನ್ನೇ ತನ್ನ ಸಂಶೋಧನೆಗಾಗಿ ಮೀಸಲಿಟ್ಟಿದ್ದ. ಸ್ನಾನದ ಮನೆಯಲ್ಲಿ ಅವನಿಗೆ ಬೇಕಾದ ಸೂತ್ರ ಪಾತ್ರೆಯಿಂದ ಹೊರಚೆಲ್ಲುವ ನೀರಿನ ಭಾರವು ಆ ಪಾತ್ರೆಯ ತೂಕಕ್ಕೆ ಸಮನಾಗಿರುತ್ತದೆ ಎಂದು ಅವನಿಗೆ ಹೊಳೆದ ಕೂಡಲೇ ನನಗೆ ತಿಳಿಯಿತು! ನನಗೆ ತಿಳಿಯಿತು! ಎಂದು ಆನಂದದಿಂದ ಬರಿಮೈಲೇ ಓಡಿಬಂದವನಂತೆ. ಹಾಗೆಯೇ ನಾವು ಯಾವುದೇ ಕಾರ್ಯ ಮಾಡಬೇಕಾದರೂ ಮಾರ್ಗ ಸರಿಯಾಗಿರಬೇಕು. ದೇವರನ್ನು ಕಾಣುವ ಮಾನಸಿಕ ಶಾಂತಿಯನ್ನು ಹೊಂದುವ ಪ್ರಥಮ ಹಂತವಾಗಿ ಯೋಗವನ್ನು ನಮ್ಮ ಹಿರಿಯರು ಜನಪ್ರಿಯಗೊಳಿಸಿದರು. ಅದರಲ್ಲಿ ಹಲವಾರು ಆಸನಗಳನ್ನೂ ರೂಢಿಸಿದರೇ. ಇಂದು ವಿಜ್ಞಾನದಿಂದ ದೊರೆಯುವ ಚಿಕಿತ್ಸೆಯನ್ನು ಮನುಷ್ಯನಿಗೆ ಯೋಗಾಸನ ನೀಡುತ್ತದೆ. ಇದೆಲ ಹಿಂದೂ ಪರಂಪರೆಯ ವೈಜ್ಞಾನಿಕ ದೃಷ್ಟಿಕೋನವಾಗಿದೆ. ದೊಡ್ಡ ದೊಡ್ಡ ನಗರಗಳಲ್ಲಿ ಯಾರನ್ನಾದರೂ ವಿಳಾಸ ಕೇಳಿದರೆ ವಿಳಾಸ ಹೇಳುವಷ್ಟು ತಾಳ್ಮೆ ಇರುವುದಿಲ್ಲ. ಇನ್ನು ಅರ್ಥಗೆ ಮನಸ್ಸನ್ನು ಒಂದೆಡೆ ಕೇಂದ್ರೀಕರಿಸಲು ಸಾಧ್ಯವೇ? ಅದಕ್ಕಾಗಿ ಈ ಯೋಗಾಭ್ಯಾಸವನ್ನು ವೈಜ್ಞಾನಿಕವಾಗಿ ಬೆಳೆಸಲಾಗಿದೆ.

ಹಿಂದೂ ತತ್ತ್ವವು ಎಂದೆಂದಿಗೂ ವಿಜ್ಞಾನಕ್ಕೆ ವಿರೋಧಿಯಾಗಿಲ್ಲ. "ಸೂರ್ಯ ಆತ್ಮಾ ಜಗಸ್ತಸ್ಥುಷಶ್ಚ" ಪ್ರಕೃತಿ ವ್ಯವಸ್ಥೆಗೆ ಸೂರ್ಯನೇ ಆಧಾರ ಎಂಬ ವೈಜ್ಞಾನಿಕ

ಸತ್ಯವನ್ನೇ ಮೇಲಿನ ಶ್ಲೋಕ ದೃಢೀಕರಿಸುತ್ತದೆ. ಕೋಪರ್ನಿಕಸನ ಭೂಮಿಯು ದುಂಡಾಗಿರುವುದೆಂಬ ಸಿದ್ಧಾಂತ ಅಂದಿಗೆ ಹೊಸತಾದರೆ, ನ್ಯೂಟನ್ನನ ಗುರುತ್ವಾಕರ್ಷಣೆಯೂ ಅಂದು ಹೊಸದಾಗಿತ್ತು. ಐನ್‌ಸ್ಟೀನ್ ಪರಮಾಣು ಸೂತ್ರವೂ ಅಂದು ಹೊಸದಾಗಿದ್ದು ಥಾಮಸ್ ಅಲ್ವಾ ಎಡಿಸನ್ ಕಂಡುಹಿಡಿದ ವಿದ್ಯುದ್ದೀಪವೂ ಅಂದು ಹೊಚ್ಚ ಹೊಸದಾಗಿತ್ತು. ರೇಡಿಯೋ, ಟಿ. ವಿ, ವಿಡಿಯೋ, ಚಲನಚಿತ್ರಗಳು ವೈಜ್ಞಾನಿಕ ಸಂಶೋಧನೆಗಳಿಂದ ಸಿದ್ಧವಾಗಿ ಹೊಸದಾಗಿ ಬಂದಾಗ ಅವುಗಳಿಗೆ ಅಪಾರ ಬೇಡಿಕೆಯಿತ್ತು. ಬೆಂಗಳೂರಿಗೆ ಪ್ರಪ್ರಥಮವಾಗಿ ಟಿ.ವಿ.ಗಳನ್ನು ಪರಿಚಯಿಸಿದಾಗ ಒಂದೊಂದು ಟಿ.ವಿ. ಅಂಗಡಿಗಳ ಎದುರಲ್ಲಿಯೂ ಒಂದು ಥಿಯೇಟರಿನಲ್ಲಿ ಕೂರುವಷ್ಟು ಜನ ರಸ್ತೆಯಲ್ಲಿ ನಿಂತು ಟಿ.ವಿ. ವೀಕ್ಷಿಸಿದರು. ಅನಂತರ ಹಲವಾರು ಟಿ. ವಿ. ಕಾರ್ಖಾನೆಗಳು ಮಾರಾಟ ಕೇಂದ್ರಗಳನ್ನು ಹಲವೆಡೆ ತೆರೆದರು. ಇಂದು ಒಂದು ಟಿ.ವಿ. ಬಳಿಯಲ್ಲಿ ಕೇವಲ ಹತ್ತಿಪ್ಪತ್ತು ಜನ ಮಾತ್ರವೇ ಇರುತ್ತಾರೆ. ಅಂದರೆ ಹೊಸ ಹೊಸ ವೈಜ್ಞಾನಿಕ ಸಂಶೋಧನೆಗಳಾದಾಗ ಅಂದಿನ ಸ್ಥಿತಿಗೆ ಅದು ಹೊಸದಾಗಿರುತ್ತದೆ. ದಿನಕ್ರಮೇಣ ಅದು ಹಳೆಯದಾಗಿ ಜನ ಅದನ್ನು ಬಳಕೆಯಲ್ಲಿ ಉಪಯೋಗಿಸುತ್ತಾರೆ. ಹೊಸಹೊಸದನ್ನು ಪ್ರಯೋಗಮಾಡಿ ಸಂಶೋಧಿಸಿ, ಹೊಸಹೊಸದನ್ನು ಕಂಡುಹಿಡಿದು ಅದರಿಂದ ಜನೋಪಕಾರ ಮಾಡಲು ವಿಜ್ಞಾನ ಶ್ರಮಿಸುತ್ತದೆ. ಹಾಗೆಯೇ ಹಿಂದೂ ಪರಂಪರೆಯಲ್ಲಿ ಆಯಾ ಕಾಲಕ್ಕೆ ಅನುಗುಣವಾದ ಹೊಸ ಹೊಸ ವಿಚಾರಗಳನ್ನು ಇಲ್ಲಿನ ಮಹಾ ಪುರುಷರು ಪ್ರತಿಪಾದಿಸಿದರು. ಕೇವಲ ವೇದಾಂತದಲ್ಲೇ ಅಡಗಿ ದಿನ ನಿತ್ಯ ಯಜ್ಞ-ಯಾಗಾದಿಗಳಲ್ಲೇ ಮುಳುಗಿದ್ದಾಗ ಆ ವೇದಾಂತದ ಹೆಸರಿನಲ್ಲಿ ಆಗುತ್ತಿದ್ದ ಶೋಷಣೆಗಳನ್ನು ತಪ್ಪಿಸಲು ಮೂಡಿಬಂದ ಗೌತಮ ಬುದ್ಧ ಎಲ್ಲರನ್ನೂ ಪ್ರೀತಿಸುವುದನ್ನೂ, ಅಹಿಂಸಾ ಪರಮೋಧರ್ಮವನ್ನು ಘೋಷಿಸಿದ. ಕಾಲಾನುಕ್ರಮದಲ್ಲಿ ಘಜನಿ ಮಹಮ್ಮದನು ಕೇವಲ ಹದಿನೆಂಟು ಸೈನಿಕರೊಂದಿಗೆ ೨೦ ಸಾವಿರ ವಿದ್ಯಾರ್ಥಿಗಳಿದ್ದ ನಳಂದ ವಿಶ್ವವಿದ್ಯಾನಿಲಯವನ್ನೇ ಧ್ವಂಸಮಾಡಿದ. ಬುದ್ಧದೇವನ ಅಹಿಂಸೆಯನ್ನು ಕಟ್ಟುನಿಟ್ಟಾಗಿ ಪಾಲಿಸಿದ್ದರಿಂದ ಕೇವಲ ಹದಿನೆಂಟು ಜನ ೨೦ ಸಾವಿರ ಮಂದಿಯ ಕಗ್ಗೊಲೆ ಮಾಡಿ ಇಡೀ ವಿಶ್ವವಿದ್ಯಾಲಯಕ್ಕೆ ಬೆಂಕಿ ಹಚ್ಚಿದರು. ಇದೇ ಸಂದರ್ಭದಲ್ಲಿ ಬ್ರಾಹ್ಮಣರು ನಾಲಿಗೆ ಚಪಲವಾದಾಗ ಒಂದೊಂದು ಯಜ್ಞಮಾಡಿ ಅಲ್ಲಿ ಕತ್ತರಿಸುತ್ತಿದ್ದರು ಆಡು, ಕುದುರೆ, ಮೊದಲಾದ ಪ್ರಾಣಿಗಳ ಮಾಂಸಭಕ್ಷಣೆ ಮಾಡುತ್ತಿದ್ದರು.

ಮೌರ್ಯರ ಕಾಲಾವಧಿಯಲ್ಲಿ ಹಿಂದುಸ್ಥಾನವು ಪರಿಪೂರ್ಣ ವೈಭವವನ್ನು ಸಂಪಾದಿಸಿದ ನಂತರ ಸಮಾಜಕ್ಕೆ ಭೌತಿಕ ವಸ್ತುಗಳಲ್ಲಿರುವ ವ್ಯರ್ಥತೆ ಅರಿವಿಗೆ ಬಂದು ಜೀವನ ದುಃಖಮಯ ಶರೀರವು ಕ್ಷಣಿಕ ಎಂದು ಬುದ್ಧದೇವ ಹೇಳಿದ್ದು ಸರ್ವರಿಗೂ ಹಿಡಿಸಿತು. ಹಾಗು ಬುದ್ಧನಿಗಾಗಿ ಯಜ್ಞಗಳು ನಿಂತುಹೋಗಿ ಅಹಿಂಸೆ ಜನಪ್ರಿಯವಾಯಿತು.

ವೈದಿಕ ಧರ್ಮವು ಕರ್ಮಕಾಂಡದ ಸಂಕೋಲೆಯೊಡನೆ, ಜಾತಿವಾದ-ಅಸ್ಪೃಶ್ಯತೆ

ಗಳ ರೂಪವನ್ನು ನಿರ್ಮಿಸಿದ್ದರೆ, ಬೌದ್ಧ ಧರ್ಮ ನಿರಾಶಾವಾದವನ್ನು ಬೋಧಿಸಿ, ಜನರನ್ನು ದುಡಿಮೆಯಿಂದ ದೂರ ಸರಿಯುವಂತೆ ಮಾಡಿತು. ಅಂಥದೊಂದು ಸಂಕಷ್ಟ ಕಾಲದಲ್ಲಿ ಬಸವಣ್ಣನವರು ಅವತರಿಸಿ ಜಾತಿವಾದದ ಕೋಟೆಗೆ ಸಿಡಿಮದ್ದನ್ನಿಟ್ಟರು, ಸಮಾನತೆಯ ಕಹಳೆ ಮೊಳಗಿದರು. ಭಿಕ್ಷು ಧರ್ಮಕ್ಕೆ ಬದಲಾಗಿ ಕಾರ್ಯ ಧರ್ಮವನ್ನು ಪ್ರತಿಪಾದಿಸಿ ದುಡಿಮೆಗೆ ದೈವತ್ವ ಕೊಟ್ಟರು. ಸಮಾಜವನ್ನು ಕ್ರಿಯಾಶೀಲಗೊಳಿಸಿದರು.

ಕಾಲಾನಂತರದಲ್ಲಿ ವಿಧರ್ಮೀಯರ ಬರ್ಬರ ಆಕ್ರಮಣಗಳಿಗೊಳಗಾದ ಹಿಂದೂ ಸಮಾಜದಲ್ಲಿ ಸಂದೇಶ ಸಾರಲು ದಾಸರು, ಸಂತರು ಸಮಾನತಾವಾದಿಗಳು, ರಾಜಾರಾಂ ಮೋಹನರಾಯರಂತಹ ಸಮಾಜ ಸುಧಾರಕರು ವಿವೇಕಾನಂದರಂತಹ ಧರ್ಮ ಪಚಾರಕರು ಏಸುಬುದ್ಧರ ಅಹಿಂಸಾವಾದವನ್ನು ಮತ್ತೆ ಪ್ರತಿಪಾದಿಸ ಬಂದರೇನೋ ಎನ್ನುವಂತಹ ಮಹಾತ್ಮ ಗಾಂಧಿಯವರು ಧರ್ಮೋನ್ನತಿಯಾಗಲು ಸರ್ವಸ್ವಾನತೆ ಸಿಕ್ಕಿ ಅಸ್ಪೃಶ್ಯತೆ ತೊಲಗಬೇಕೆಂದು ದಲಿತ ಸೂರ್ಯನಾಗಿ ಜನಿಸಿದ ಅಂಬೇಡ್ಕರ ಹಿಂದುಗಳಲ್ಲಿ ವೀರಪರಂಪರೆಯನ್ನು ನಿರ್ಮಿಸಲು ಐತಿಹಾಸಿಕ ಪುರುಷರಾಗಿ ಮೂಡಿಬಂದ ಶಿವಾಜಿ, ಗುರುನಾನಕ್, ರಾಣಾ ಪ್ರತಾಪಸಿಂಹ ಮೊದಲಾದ ಮಹಾನ್ ವ್ಯಕ್ತಿಗಳು ಆಯಾ ಕಾಲಕ್ಕೆ ಅನುಗುಣವಾದ ಹೊಸ ಹೊಸ ತತ್ತ್ವಗಳನ್ನು, ವಿಚಾರಗಳನ್ನು ಪ್ರತಿಪಾದಿಸಿದ್ದಾರೆ.

ಉದಾಹರಣೆಗೆ ರೇಡಿಯೋ ಕಂಪನಿಯೊಂದರಿಂದ ರೇಡಿಯೋವೊಂದನ್ನು ನಾವು ಕೊಳ್ಳುತ್ತೇವೆ. ನೂರಲ್ಲ ಇನ್ನೂರು ವರ್ಷಗಳಿಗಾದರೂ ಆ ರೇಡಿಯೋಕ್ಕೆ ಅವಸಾನ ಇರುತ್ತದೆ. ಹಾಗೆಂದು ರೇಡಿಯೋ ಆಗಲಿ ಟಿ. ವಿ.ಯೇ ಆಗಲಿ ಇನ್ನಾವುದೇ ವಸ್ತುವನ್ನು ಕೊಳ್ಳದೆ ಬಿಡುತ್ತೇವೆಯೇ ರೋಗಿಗಳ ಪ್ರಾಣಉಳಿಸಬಲ್ಲ ವೈದ್ಯನ ಪ್ರಾಣವೇ ಹೋಗುವುದಿಲ್ಲವೇ? ಹಾಗೆಂದು ರೋಗಿಗಳು ವೈದ್ಯರ ಬಳಿ ಹೋಗದಿರುತ್ತಾರೆಯೇ ವಿಜ್ಞಾನಿಯೇ ಸಾಯುತ್ತಾನೆ ಹಾಗೆಂದು ವಿಜ್ಞಾನವನ್ನು ನಾಶಮಾಡಲಾದೀತೆ? ಹಾಗೆಯೇ ಧರ್ಮದಲ್ಲಿ ಒಂದು ತತ್ವ ಪ್ರತಿಪಾದನೆಯಾಗಿ ಆ ಕಾಲಾವಧಿಗೆ ಅದು ಸರಿಯಾಗಿರುತ್ತದೆ. ಹಲವಾರು ಪೀಳಿಗೆಗಳ ನಂತರ ಇನ್ನೊಬ್ಬ ಪ್ರವಾದಿ ಆಕಾಲಕ್ಕೆ ಅನುಗುಣವಾದ ಸತ್ಯವನ್ನೇ ಪ್ರತಿಪಾದಿಸುತ್ತಾನೆ. ಇದು ಹಿಂದುಪರಂಪರೆಯ ವೈಶಿಷ್ಟ್ಯ. ವಿವಿಧ ಕಾಲದಲ್ಲಿ ವಿವಿಧ ಸಂದರ್ಭಗಳಲ್ಲಿ ಈ ಧರ್ಮದಲ್ಲಿ ವಿವಿಧರೀತಿಯ ತತ್ವ ಪ್ರಚಾರವಾಗಿದೆ. ಅದು ಬಿಟ್ಟು ಹೊಸತನಕ್ಕೆ ಅವಕಾಶ ನೀಡದೆ ಒಂದು ಸಾವಿರವರ್ಷದಲ್ಲೋ ಎರಡು ಸಾವಿರ ವರ್ಷಆದಲ್ಲೋ ಆಗಿಹೋಗಿ ಅಂದಿನ ದೇಶ–ಕಾಲ–ಗತಿಗನುಗುಣವಾಗಿ ಪ್ರತಿಪಾದಿಸಿದ ಹಳಿಸಲು ತತ್ವವೇ ಸತ್ಯ ಅದರ ಹೊರತು ಬೇರೆ ಯಾವ ಸತ್ಯವೂ ಈ ಜಗತ್ತಿನಲ್ಲಿ ಇಲ್ಲವೇ ಇಲ್ಲ ಎನ್ನುವ ಮತಧರ್ಮಗಳಿಗಿಂತ ವಿವಿಧ ಮಹಾಪುರುಷರನ್ನು ಹಡೆದ ಹಿಂದೂ ಸಾಂಸ್ಕೃತಿಕ ಪರಂಪರೆ ನಿಜಕ್ಕೂ ಕ್ರಾಂತಿಕಾರಕವೂ ಬದಲಾವಣೆಗಳಿಗೆ ಸ್ವಲ್ಪ ನಿಧಾನವಾಗಿ ಹೊಂದಿಕೊಳ್ಳಬಲ್ಲದೂ, ವೈಜ್ಞಾನಿಕವೂ ಆಗಿದೆ.

ಕಟ್ಟುವ ಭಾರತವ

ಕಟ್ಟೋಣ ಭವ್ಯ ಭಾರತವ ಓ ನನ್ನ ಗೆಳೆಯಾ
ಮೆಟ್ಟಿ ನಾವ್ ಮೊದಲು ಜಾತಿ ಮತಗಳಾ ರಗಳೆಯ!
ಒಟ್ಟಾಗಿ ಬದುಕುವದನ್ನು ಕಲಿಯೋಣ ಮೊದಲಿಗೆ
ಬೆಟ್ಟು ಮಾಡಿ ತೋರಿಸದಂತೆ ಬದುಕಲರಿಯೋಣ ॥೧॥

ಇದು ಭವ್ಯ ಭಾರತ, ನವ್ಯ ಭಾರತ,
ನಿನ್ನೆಯ ಕನಸಿನ ದಿವ್ಯ ಭಾರತವಾಗಿಸುವಾ.
ಎಲ್ಲೆಲ್ಲೂ ಸತ್ಯ–ಶಾಂತಿ ನೆಲೆ ಗೊಳಿಸಲಿಕ್ಕೆ
ಸಮತೆ–ಅಹಿಂಸೆಗಳ ವ್ರತವನ್ನಾ ಚರಿಸೋಣ ॥೨॥

ಇದು ಗಾಂಧೀಜಿ ನಡೆದ ಪುಣ್ಯದ ನಾಡು.
ನೇತಾಜಿ ಆಝಾದರು ಹೋರಾಡಿದ ಬೀಡು.
ಸಂತ–ಸತ್ಪುರುಷರ–ಅವತಾರಿಗಳ ನೆಲೆವೀಡು.
ನಮ್ಮತನ ಉಳಿಸಿಕೊಳ್ಳಲು ಹೋರಾಡುವಾ! ॥೩॥

ಬಡವರನ್ನು ಬಡವರನ್ನಾಗಿಸಿ ಸಾಯಿಸುವುದು ಬೇಡ.
ಸಿರಿತನದಾಸೆಗಾಗಿ ದಲಿತರ ಕತ್ತು ಕೊಯ್ಯುವುದು ಬೇಡ.
ಸಹೋದರರಸಾಯಿಸಲು ಸಿಡಿಮದ್ದು ಹಾರಿಸುವುದು ಬೇಡ.
ಕೋಮು–ಜಾತಿ ಗಲಭೆಗಳನ್ನು ಎಬ್ಬಿಸುವುದು ಬೇಡ ॥೪॥

ಭಾರತಾಂಬೆಯ ಮಡಲಿನಲ್ಲಿ ಬೆಳೆವ ಕಂದರಾಗುವಾ
ನಡೆಯೋಣ ಮುಂದೆ, ನಡೆದು, ನವಭಾರತವ ಕಟ್ಟುವಾ
ಅಖಂಡ ಭಾರತಕಾಗಿ ಹಗಲಿರುಳು ಶ್ರಮಿಸುವಾ.
ಎಂದೆಂದೂ ಒಂದಾಗಿ ನಾವು ಬದುಕುವಾ.

— ಶಿವಕಾಂತ

ಓದುಗರಲ್ಲಿ ವಿನಂತಿ

ಅಧಿಕೃತವಾಗಿ ಈ ಕೆಳಗಿನ ವಿಳಾಸಕ್ಕೆ ಸಂಪರ್ಕಿಸಬೇಕು. ಮತ್ತು ಪತ್ರ ವ್ಯವಹಾರದಲ್ಲಿ, ವಿಳಾಸ ಬದಾಲಾವಣೆ ಮಾಡಬೇಕಾದ ಪ್ರಸಂಗದಲ್ಲಿ, ಚಂದಾ ನಂಬರು ನಮೋದಿಸಬೇಕು. ನಮೋದಿಸದೆ ಬರೆದ ಪತ್ರಗಳು ಪರಿಶೀಲಿಸಲಾಗುವುದಿಲ್ಲ.

ಸಂಪಾದಕರು :
'ಕಲ್ಯಾಣ-ಕಿರಣ' ಮಾಸಪತ್ರಿಕೆ
"ಬಸವ ಗಂಗೋತ್ರಿ"
ಕುಂಬಳಗೋಡು-560074
ಬೆಂಗಳೂರು-ದಕ್ಷಿಣ

ಬಸವ ಕಲ್ಯಾಣದಲ್ಲಿ

ತತ್ತ್ವ ತರಬೇತಿ ಶಿಬಿರ

—ರಾಜಕುಮಾರ ಪಾಟೀಲ. ಅಧ್ಯಕ್ಷರು ಬಸವದಳ, ಬೀದರ

ಬಿಜಾಪುರದಲ್ಲಿ ಅಭೂತಪೂರ್ವವಾಗಿ ಪ್ರವಚನ ಕಾರ್ಯಕ್ರಮ ನಡೆಯುತ್ತಿದ್ದಾಗ, ದಿ. ೩೦-೫-೧೯೮೫ ರಂದು ಮುಖ್ಯ ಅತಿಥಿಗಳಾಗಿ ಆಗಮಿಸಿದ ಪೂಜ್ಯ ಶ್ರೀ ಸದ್ಗುರು ಲಿಂಗಾನಂದ ಸ್ವಾಮಿಗಳವರು, ಅಲ್ಲಿಂದ ಸುಕ್ಷೇತ್ರ ಬಸವ ಕಲ್ಯಾಣಕ್ಕೆ ಸಾಗಿ, ದಿ. ೫-೬-೧೯೮೫ ರಿಂದ ಶ್ರೀ ಬಸವೇಶ್ವರ ದೇವಾಲಯದಲ್ಲಿ ವಿಶ್ವಧರ್ಮ ಪ್ರವಚನವನ್ನು ಆರಂಭಿಸಿದರು. ಬಿಜಾಪುರದಲ್ಲಿ ದಿ. ೧೦-೬-೧೯೮೫ ರಂದು ಪ್ರವಚನದ ಮುಕ್ತಾಯ ಸಮಾರಂಭ ನೆರವೇರಿಸಿಕೊಂಡು, ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರು ಆಗಮಿಸಿ, ಪ್ರವಚನದಲ್ಲಿ ಭಾಗಿಯಾದರು.

ಬಸವ ಕಲ್ಯಾಣದ ಅನುಭವ ಮಂಟಪದಲ್ಲಿ ದಿ. ೧೬-೬-೧೯೮೫ ರಿಂದ ತರಬೇತಿ ಶಿಬಿರ ಆರಂಭ, ಬೆಳಗ್ಗೆ ೧೦ ಗಂಟೆಗೆ ಸಾಮೂಹಿಕ ಪ್ರಾರ್ಥನೆಯೊಡನೆ ಆರಂಭವಾಯಿತು. ಬೆಳಗಿನ ಆರರಿಂದ ಯೋಗಾಸನ ಕಲಿಕೆ. ಹೆಣ್ಣು ಮಕ್ಕಳಿಗೆ ಸೋದರಿ ಮಲ್ಲಮ್ಮ, ಚನ್ನಮ್ಮನವರು, ಗಂಡು ಮಕ್ಕಳಿಗೆ ನಂದಿಕುಮಾರ ಕಲಿಸಿದರು. ಸ್ನಾನ-ಪೂಜೆ-ಉಪಹಾರ ಪೂರೈಸಿಕೊಂಡು ಶರಣರು ಅನುಭವ ಮಂಟಪದಲ್ಲಿ ಸಮಾವೇಶವಾಗುತ್ತಿದ್ದರು. ಪ್ರಾರ್ಥನೆಯ ನಂತರ ಒಂದೊಂದು ವಿಷಯದ ಮೇಲೆ ಚರ್ಚೆ. ಹೀಗೆ ಚರ್ಚಿಸಿದ ವಿಷಯಗಳು – ಬಸವ ದಳದ ಕರ್ತವ್ಯ, ಸಮಾಜ ಸಂಘಟನೆಯ ಬಗೆ, ಬಸವಾಯತನ ದೈನಂದಿನ ಜೀವನಕ್ರಮ ಮತ್ತು ಕರ್ತವ್ಯ, ಬಸವ ಕಲ್ಯಾಣದ ಕ್ಷೇತ್ರಾಭಿವೃದ್ಧಿ, ಸರಳ ಲಗ್ನವಿಧಾನ, ಹಬ್ಬಗಳ ಆಚರಣೆ, ವ್ರತ-ನಿಯಮಗಳ ಪಾಲನೆ ಮುಂತಾದುವು.

ಪ್ರಾಯೋಗಿಕ ತರಬೇತಿ ನೀಡಲಾಯಿತು. ಸಾಮೂಹಿಕ ಪ್ರಾರ್ಥನೆ, ಸಾಮೂಹಿಕ ಪೂಜೆ, ನಾಮಕರಣ, ಲಗ್ನವಿಧಿ, ಸಮಾಧಿ ಕ್ರಿಯೆ, ಬಸವೇಶ್ವರ ವ್ರತ ಮುಂತಾದುವನ್ನು ಕುರಿತು ಕಲಿಸಲಾಯಿತು. ವಿವಾಹ ವಿಧಿ ಮತ್ತು ಸಮಾಧಿ ಕ್ರಿಯೆಗಳನ್ನು ಕುರಿತು ಹುಬ್ಬಳ್ಳಿಯ ಬಸವ ಮಂಟಪದ ಶರಣ ಶಿವಪ್ಪ ಉಮದಿಯವರು ಪ್ರತ್ಯಕ್ಷವಾಗಿ ಮಾಡಿ ತೋರಿಸಿದರು. ಶಿಬಿರಾರ್ಥಿಗಳೆಲ್ಲರೂ ಪೂಜ್ಯರುಗಳ ನೇತೃತ್ವದಲ್ಲಿ ವಿವಿಧ ಸ್ಥಳಗಳನ್ನು ಸಂದರ್ಶಿಸಿದರು. ಕಲ್ಯಾಣದ ವಿಶೇಷ ದೇವಾಲಯವಾದ ಶ್ರೀ ಬಸವೇಶ್ವರ ದೇವಾಲಯವನ್ನು, ಅನುಭವ ಮಂಟಪ ಹಿಂದೆ ಇತ್ತೆಂದು ಹೇಳುವ ಆದರೆ ಈಗ ಮುಸಲ್ಮಾನರ ಗೋರಿಗಳಿಂದ ಕೂಡಿರುವ ಸ್ಥಳವನ್ನು, ಬಸವಣ್ಣನವರು

ಜನರಿಗೆ ಸಂದರ್ಶನ ನೀಡುತ್ತ ಅವರು ಕೇಳಿದುದನ್ನು ಕೊಡುತ್ತಿದ್ದ ಜಾಗ ಪರುಷ ಕಟ್ಟೆಯನ್ನು ನೋಡಲಾಯಿತು. ಬೃಹತ್ತಾದ ತ್ರಿಪುರಾಂತಕ ಕೆರೆ, ಅದರ ದಂಡೆಯ ಮೇಲೆ ತ್ರಿಪುರಾಂತಕ ದೇವಾಲಯ, ಸನಿಹದಲ್ಲೇ ಇದ್ದ ಅಕ್ಕನಾಗಮ್ಮನ ಪೂಜಾ ಗವಿ, ಅಲ್ಲಿಂದ ಮುಂದೆ ಮಡಿವಾಳ ಮಾಚಿದೇವರ ಪೂಜಾ ಗೃಹ, ಅವರು ಶರಣರ ವಸ್ತ್ರಗಳನ್ನು ತೊಳೆದು ಮಡಿಮಾಡುತ್ತಿದ್ದ ಹೊಂಡ, ಬಸವಣ್ಣನವರು ಪೂಜೆ ಮಾಡುತ್ತಿದ್ದ ಪೂಜಾಗೃಹ, ಅಥವಾ ಅರಿವಿನ ಮನೆ, ಅದರ ಪಕ್ಕದಲ್ಲೇ ಇರುವ–ಪೂಜೆಗೆ ಅವರು ಬಳಸುತ್ತಿದ್ದ ಬಾವಿ–ಬಸವ ತೀರ್ಥ, ಅದರ ಪಕ್ಕದಲ್ಲಿ ಚನ್ನಬಸವಣ್ಣನ ಪೂಜಾಗೃಹ ಸಂದರ್ಶಿಸಲಾಯಿತು.

ಚಾಲುಕ್ಯರ ಕೋಟೆ, ಅದರೊಳಗಿನ ವಸ್ತು ಪ್ರದರ್ಶನ, ಊರೊಳಗಿರುವ ಬಿಜ್ಜಳನ ನ್ಯಾಯ ನಿರ್ಣಯದ ಗದ್ದುಗೆಗಳನ್ನೂ ನೋಡಲಾಯಿತು. ಅದೇ ರೀತಿ ಪ್ರಭು ದೇವರ ಮಠ, ಈಗಿನ ಅನುಭವ ಮಂಟಪ, ಅದರ ಸನಿಹದಲ್ಲಿರುವ ಮರಿದೇವರ ಗುಡ್ಡ, ಕಲ್ಯಾಣ ಕ್ರಾಂತಿಯಲ್ಲಿ ಮಹತ್ತರ ಪಾತ್ರವಾಡಿದ ರುದ್ರಮುನಿ ಗವಿ, ಮುಂತಾದುವನ್ನು ಸಂದರ್ಶಿಸಲಾಯಿತು. ಇನ್ನೊಂದು ಸ್ಮರಣೀಯ ಕಾರ್ಯವೆಂದರೆ ಕೇವಲ ಜನಗಳ ಬಾಯಲ್ಲಿ ಉಳಿದಿದ್ದ ಕೆಲವು ಗವಿಗಳ ಹೆಸರುಗಳನ್ನು ಬೋರ್ಡಿನ ಮೇಲೆ ಬರೆಸಿ. ಪೂಜ್ಯ ಮಾತಾಜಿಯವರು, ಪೂಜ್ಯ ಗುರೂಜಿಯವರು ಆಯಾಸ್ಥಳಗಳಲ್ಲಿ ವಿಶ್ವಕಲ್ಯಾಣ ಮಿಷನ್ ಸಂಸ್ಥೆಯ ಖರ್ಚಿನಲ್ಲಿ ಹಾಕಿಸಿದ್ದಲ್ಲದೇ ಎಲ್ಲಾ ಸ್ಥಳಗಳಲ್ಲಿಯೂ ಬಸವಣ್ಣನವರ ದೊಡ್ಡ ಫೋಟೋಗಳನ್ನು ಹಾಕಿಸಿದರು. ಶರಣೆ ಅಕ್ಕನಾಗಮ್ಮ ತಾಯಿಯ ಗವಿಯ ಪಕ್ಕದಲ್ಲಿ ಎರಡು ಗವಿಗಳಿದ್ದು ಜನರು ಅವು ಗಂಗಾಂಬಿಕೆ, ನೀಲಾಂಬಿಕೆಯರ ಪೂಜಾಗವಿಗಳೆಂದು ಹೇಳುತ್ತಿದ್ದರು. ಅಲ್ಲಿ ಆ ಹೆಸರಿನ ಫಲಕಗಳನ್ನು ಹಾಕಲಾಯಿತು. ಅದೇ ರೀತಿ ಚನ್ನಬಸವಣ್ಣನವರ ಪೂಜಾ ಗೃಹಕ್ಕೆ, ಬಿಲ್ವಪತ್ರೆಯ ವನದ ಪ್ರಶಾಂತ ಪರಿಸರದಲ್ಲಿರುವ ಹರಳಯ್ಯನವರ ಗವಿಗೆ, ಸಿದ್ದರಾಮೇಶ್ವರರ ಗವಿಗೆ, ಫಲಕಗಳನ್ನು ಹಾಕಿಸಲಾಯಿತು.

ಒಂದು ಸ್ಮರಣೀಯ ಘಟನೆ ನಡೆಯಿತು, ಬೆಳಗಿನಿಂದಲೂ ಮಾತಾಜಿಯವರು ಬಸವ ದಳದ ಕಾರ್ಯಕರ್ತರನ್ನು ಹುರಿದುಂಬಿಸಿ, ಕೆಲಸಗಳನ್ನು ಮಾಡಿಸುತ್ತಿದ್ದರು. ಬಸವಣ್ಣನವರ ಅರುಹಿನ ಮನೆಯಲ್ಲಿ ಒಂದು ಕಟ್ಟೆಯಿದ್ದು, ಅದರ ಮೇಲೆ ನಂದಿಯ ವಿಗ್ರಹ ಪೂಜೆಗೊಳ್ಳುತ್ತಿತ್ತು. ಶಿಬಿರಾರ್ಥಿಗಳೊಡನೆ ಸಂದರ್ಶನಕ್ಕೆ ಬಂದ ಮಾತಾಜಿ ಖಿನ್ನವದನರಾದರು. "ಎಷ್ಟು ಕನಸುಗಳನ್ನು ಹೊತ್ತು ಕಲ್ಯಾಣಕ್ಕೆ ಬರುತ್ತೇವೆ. ಕ್ರಾಂತಿಪುರುಷ ಬಸವಣ್ಣನ ನೆಲೆಯನ್ನರಿಯದೆ, ನಿಲುವನ್ನರಿಯದೆ ಇಂದಿಗೂ ಬಸವಣ್ಣನೆಂದರೆ ಎತ್ತು ಎಂದು ನಂಬಿರುವ ಮೂಢಜನರಿರುವಾಗ ಇಲ್ಲಿ ಬಂದು, ಅವರ ಪೂಜಾಗೃಹದಲ್ಲಿಯೇ ನಂದಿಯನ್ನು ನೋಡಿದರೆ ಜನರಿಗೆ ಎಷ್ಟು ತಪ್ಪು ಕಲ್ಪನೆಯಾದೀತು, ನಮ್ಮಂಥವರಿಗೆ ಎಷ್ಟು ವ್ಯಥೆಯಾದೀತು ? ಎಷ್ಟು ದುರ್ದೈವೀ

ಸಮಾಜವಿದು. ಇಲ್ಲೊಂದು ಬಸವಣ್ಣನವರ ಮೂರ್ತಿ ಕುಳ್ಳಿರಿಸಬೇಕು. ಎಂದು ಹೇಳುತ್ತಾ ಗವಿಯಿಂದ ಹೊರಬರುವಾಗ ಓರ್ವ ಹುಡುಗ ಬಂದು, 'ಮಾತಾಜಿ.... ಇಲ್ಲೊಂದು ಸುಂದರವಾದ ಬಸವಣ್ಣನವರ ವಿಗ್ರಹವಿದೆ–" ಎಂದು ಕರೆದೊಯ್ದ. ಪಕ್ಕದಲ್ಲೇ ಪೂಜಾರಿಗಳ ಮನೆ. ಅಲ್ಲಿ ಅದನ್ನು ಕಂಡು ಆಶ್ಚರ್ಯಪಟ್ಟರು. ಮನೆಯೊಡತಿ ಹೇಳಿದಳು."ಇದನ್ನು ಅಲ್ಲಿ ಕುಳ್ಳಿರಿಸಬೇಕೆಂದು ಸೋಲಾಪುರದ ಬಾಬಾಸಾಹೇಬವಾರದ ಅವರು ಮತ್ತು ಶ್ರೀ ಬಸವೇಶ್ವರ ದೇವಸ್ಥಾನ ಪಂಚಕಮಿಟಿಯವರು ಮಾಡಿಸಿಟ್ಟು ಮೂರುವರುಷವಾಯಿತು. ಯಾರದ್ದೂ ನೆರವು ಇಲ್ಲದ ಕಾರಣ ಸುಮ್ಮನಾಗಿದ್ದಾರೆ." ಎಲ್ಲರಿಗೂ ಆಶ್ಚರ್ಯವಾಯಿತು. ಎತ್ತಲಿಕ್ಕೆ ಹತ್ತಾರು ಜನ ಬೇಕು. ಬಸವ ದಳದ ಕಾರ್ಯಕರ್ತರು ಸಿದ್ಧರಾದರು. ಕಿರಿದಾದ ಬಾಗಿಲಿನಲ್ಲಿ ಕಷ್ಟ ಪಟ್ಟು ಒಳಗೆ ಒಯ್ದು, ಜಾಗದಲ್ಲಿ ಪ್ರತಿಷ್ಠಾಪಿಸಿ, ಒಂದು ಟ್ಯೂಬ್ ಲೈಟನ್ನು ತಂದು ಹಚ್ಚಿ, ಮೂರ್ತಿಯನ್ನು ಚೆನ್ನಾಗಿ ತೊಳೆದು, ಎಣ್ಣೆ ಹಚ್ಚಿ, ಹೂ ಏರಿಸಿ ಪೂಜಿಸಿ ಆರತಿ ಮಾಡಿದಾಗ ಅಲ್ಲೊಂದು ವಿಶೇಷ ಸಂತೃಪ್ತಿ ಹೊನಲಾಗಿ ಹರಿಯುತ್ತಿತ್ತು. ಬಸವ ಮೂರ್ತಿಯ ಮುಖ ಸಮಾಧಾನದ ನಗೆ ಬೀರುವಂತೆ ತೋರಿತೆಲ್ಲರಿಗೆ. "ಯಾರೋ ಮಾಡಿಟ್ಟ ಮೂರ್ತಿಯನ್ನು ನಾವೇ ಇಲ್ಲಿ ಇಡಬೇಕೆಂಬುದು ನಿನ್ನಾಸೆಯಾಗಿತ್ತೇ ತಂದೆ ?" ಎಂದು ಮಾತಾಜಿಯವರು ಭಾವುಕರಾಗಿ ಉದ್ಗರಿಸಿದಾಗ ಎಲ್ಲರಿಗೂ ವಿಶೇಷ ಅನುಭವವಾಯಿತು. ಸ್ವಲ್ಪವೂ ದಣಿಯದ ಉತ್ಸಾಹದಿಂದ ಎಲ್ಲ ಗವಿಗಳಿಗೂ ಬೋರ್ಡ್ ಹಾಕಿಸುತ್ತ, ಶ್ರೀ ಸಿದ್ಧರಾಮೇಶ್ವರ ಪೂಜಾಗೃಹಕ್ಕೆ ಬಂದರು. ಒಳಗೆ ಪಟ್ಟಿ ಹೊಡೆಯುತ್ತ ಫೋಟೋಗಳನ್ನು ಕಾರ್ಯಕರ್ತರು ಹಾಕುವಾಗ, ಬಣ್ಣದ ಡಬ್ಬಿಯನ್ನು-ಕುಂಚವನ್ನು ತೆಗೆದುಕೊಂಡು ಗೋಡೆಯ ಮೇಲೆ ಹೆಸರನ್ನು ಮಾತಾಜಿ ಬರೆಯುತ್ತಿದ್ದರು. ಎಲ್ಲ ಬರೆದಾಯಿತು. ಒಳಗಿನ ಕೆಲಸವೂ ಮುಗಿಯಿತು. ಹೊರಡಲು ಸಿದ್ಧರಾಗುವಾಗ ಗವಿಯ ಹೊರಭಾಗದ ಒಂದು ಮೂಲೆಯಲ್ಲಿ ಮಾತಾಜಿಯವರಿಗೆ ನಾಲ್ಕಾಣೆಯ ಬಿಲ್ಲೆಯೊಂದು ಸಿಕ್ಕಿತು.ಅವರು ಉದ್ಗರಿಸಿದರು, "ನಾನು ಬೆಳಗಿನಿಂದ ಕಾಯಕ ಮಾಡಿದ್ದಕ್ಕೆ ಸಿದ್ಧರಾಮೇಶ್ವರರು ಪ್ರಸಾದ ಕೊಟ್ಟಿದ್ದಾರೆ. ಇದು ಪರಮ ಪವಿತ್ರ." ಎಂದು ಅದನ್ನು ಭದ್ರವಾಗಿ ಇಟ್ಟುಕೊಂಡರು. ಆರತಿ ತಟ್ಟೆಯಲ್ಲಿ ಅಂತಹ ನಾಲ್ಕಾಣೆ ಎಂಟಾಣೆ ಎಷ್ಟು ಬೀಳುತ್ತವೋ ! ಆದರಿದು ಶರಣರ ಪ್ರಸಾದ ಎಂಬ ಶ್ರದ್ಧೆ ! ಅದಕ್ಕೇ ಅಕ್ಕ ಹೇಳುವುದು 'ಭಾವನೆಯೆ ಎನಗಿದು ಜೀವನವು ಕೇಳಾ' ಎಂದು.

ಬಸವ ಕಲ್ಯಾಣಕ್ಕೊಂದು ಈಗ ವಿಶೇಷ ಶೋಭೆ ಬಂದಿದೆ, ಅನುಭವ ಮಂಟಪದ ಸನಿಹದಲ್ಲೇ ಇರುವ ಭಕ್ತಿ ಭವನದಿಂದ; ಅಲ್ಲ ಅಲ್ಲ, ಅದಕ್ಕೆ ಜೀವ ತುಂಬಿರುವ ಸಿದ್ಧರಾಮನ ಕರುಣೆಯ ಕಂದ ಪೂಜ್ಯ ಶರಣೆ ಜಯದೇವಿ ತಾಯಿ ಲಿಗಾಡೆ ಅವರ ಆಗಮನ ಮತ್ತು ವಾಸ್ತವ್ಯದಿಂದ. ಶರಣರ ನೆಲೆ, ತವರು ಮನೆ ಕಲ್ಯಾಣ ಎಷ್ಟೋ

ವರ್ಷಗಳಿಂದ ತಾಯಿಯವರನ್ನು ಕರೆಯುತ್ತಿತ್ತಂತೆ! "ಅಪ್ಪ ಬಸವಣ್ಣ ಕರೆಯುತ್ತಿದ್ದ; ಸಿದ್ಧರಾಮ ತಂದೆ ಕಳಿಸಿಕೊಟ್ಟ. ವೃದ್ಧಾಪ್ಯವನ್ನು ಶರಣರ ಮಡಿಲಲ್ಲಿ ಕಳೆಯಲು ಇಲ್ಲಿಗೆ ಬಂದಿದ್ದೇನೆ. ಇದು ಬಹುದಿನದ ಕನಸು, ಇದೀಗ ನನಸಾಗಿದೆ" ಎಂದು ತಾಯಿಯವರು ಭಾವುಕರಾಗಿ ನುಡಿದರು. ಪೂಜ್ಯ ಮಾತಾಜಿಯವರು ಮತ್ತು ಪೂಜ್ಯ ಜಯದೇವಿ ತಾಯಿಯವರು ಪರಸ್ಪರರ ಸಂದರ್ಶನ ನೋಡುವ ಭಾಗ್ಯ ನಮಗೊದಗಿತು. ಮಾತಾಜಿಯವರು ಕೆಲವು ಪದ್ಯಗಳನ್ನು ಹಾಡಿದಾಗ ಜಯದೇವಿ ತಾಯಿಯವರು ಆನಂದ ತುಂದಿಲರಾದರು.

"ನಿಮ್ಮನ್ನು ಮೊದಲು ಕಂಡದ್ದು ೧೯೬೭ ರ ಶತಮಾನೋತ್ಸವದಲ್ಲಿ, ಬಸವಕಲ್ಯಾಣ, ಕೂಡಲ ಸಂಗಮಗಳಲ್ಲಿ. ಆಗಿನ್ನೂ ಎಳೆಯ ವಯಸ್ಸು. ಮಾತೆ ಎನ್ನಲಿಕ್ಕೆ ಇನ್ನೂ ಮನಸ್ಸು ಒಪ್ಪಿರಲಿಲ್ಲ. ಆದರೀಗ ನಿಮ್ಮ ಕಾರ್ಯಸಾಧನೆ, ಧೈರ್ಯ, ಬೆಳೆಸಿಕೊಂಡ ವ್ಯಕ್ತಿತ್ವ, ಮಾಡಿದ ಧರ್ಮಜಾಗೃತಿ, ಕೈಗೊಂಡ ಕಾರ್ಯವ್ಯಾಪ್ತಿ, ಇವುಗಳಿಂದಾಗಿ ಹೃದಯತುಂಬಿ ಕರೆಯುತ್ತೇನೆ, "ಮಾತೆ" ಎಂದು. ಮಾತಾಜಿ, ಅಂತೂ ಗುರುಗಳಿಟ್ಟ ಮಾತೆ ಮಹಾದೇವಿ ಎಂಬ ಹೆಸರನ್ನು ಸಾರ್ಥಕಪಡಿಸಿಕೊಂಡಿರಿ" ಎಂದು ಭಾವ ಪರವಶರಾಗಿ ಉದ್ಗರಿಸಿದ ತಾಯಿಯವರ ಧ್ವನಿಯಲ್ಲಿ ಸಮ್ಮಿಶ್ರಭಾವ ತುಂಬಿತ್ತು. ಉಭಯ ಮಹಾನ್ ವ್ಯಕ್ತಿಗಳ ಸಂದರ್ಶನ, ಸಂಭಾಷಣೆಯಿಂದ ನಾವೂ ಭಾವ ಪರವಶರಾದೆವು.

ದಿನಾಂಕ 13-8-1985 ರಂದು ಶಿಬಿರ ಮುಕ್ತಾಯ. ಶಿಬಿರದ ನೇತೃತ್ವ ವಹಿಸಿದ್ದ ಪೂಜ್ಯ ಶ್ರೀ ಲಿಂಗಾನಂದ ಸ್ವಾಮಿಗಳಿಗೆ, ಪೂಜ್ಯ ಶ್ರೀ ಜಗದ್ಗುರು ಮಾತಾಜಿಯವರಿಗೆ, ಭಾಲ್ಕಿಯ ಪೂಜ್ಯ ಶ್ರೀ ಬಸವಲಿಂಗ ಪಟ್ಟಾಧ್ಯಕ್ಷರಿಗೆ ಬಸವದಳದವರು ಕೃತಜ್ಞತೆಗಳನ್ನು ಸಲ್ಲಿಸಿದರು. ಪೂಜ್ಯ ಶ್ರೀ ಮಾತಾಜಿಯವರು ಎಲ್ಲರಿಗೂ ಪ್ರತಿಜ್ಞೆಗಳನ್ನು ಮಾಡಿಸಿದರು.

ಕೆಲವು ನಿರ್ಣಯಗಳನ್ನು ಸ್ವೀಕರಿಸಲಾಯಿತು. ಐದು ಮೂಲಭೂತ ನಂಬಿಕೆಗಳನ್ನು ಸ್ವೀಕರಿಸಲಾಯಿತು.

ಬಸವ ಧರ್ಮದ ಐದು ಸೂತ್ರಗಳಿವು :

1. ಬಸವಣ್ಣನವರೇ ನಮ್ಮ ಧರ್ಮದ ಆದಿಗುರು.

2. ಬಸವಣ್ಣನವರು ಮತ್ತು ಅವರ ಸಮಕಾಲೀನರು ಕೊಟ್ಟ ವಚನ ಶಾಸ್ತ್ರವೇ ನಮ್ಮ ಧರ್ಮಸಂಹಿತೆ.

3. ಬಸವಣ್ಣನವರೇ ಆದಿ ಪ್ರಮಥರಾಗಿ ಬಂದ ಶರಣರ ಪರಂಪರೆ ನಮ್ಮದು.

ಬಸವ ಕಲ್ಯಾಣದ ಶಿಬಿರಾರ್ಥಿಗಳು



ಹಿಂದುತ್ವವು ಜನಾಂಗ ವಾಚಕವಾದ ಪದವಾಗಿದ್ದು ಹಿಂದೂ ಪರಂಪರೆಯ ಕಕ್ಷೆಯ ಒಳಗಿದ್ದೇ ಬಸವ ಧರ್ಮವು ಸ್ವತಂತ್ರವಾಗಿರುವುದು.

4. ಗುರು ಬಸವಣ್ಣನವರು, ಅಂಗದ ಮೇಲಿರುವ ಇಷ್ಟಲಿಂಗ, ಮತ್ತು ಜ್ಞಾನಿಗಳಾದ, ಮಹಾತ್ಮರಾದ ಜಂಗಮರು ಪೂಜಾರ್ಹ ಉಪಾಸ್ಯ ವಸ್ತುಗಳು.

5. ಶರಣರ ಕ್ರಾಂತಿಭೂಮಿ ಬಸವಕಲ್ಯಾಣ, ಸಿದ್ಧರಾಮೇಶ್ವರರ ತಪೋಭೂಮಿ **ಶೊಲ್ಲಾಪುರ**, ಬಸವಣ್ಣನವರು ಲಿಂಗೈಕ್ಯರಾದ **ಕೂಡಲ ಸಂಗಮ**, ಚನ್ನಬಸವಣ್ಣನವರು ಲಿಂಗೈಕ್ಯರಾದ **ಉಳವಿ**, ಬಸವಣ್ಣನವರ ಜನ್ಮಭೂಮಿ ಬಾಗೇವಾಡಿ, ಅಕ್ಕ ಮಹಾದೇವಿ-ಅಲ್ಲಮ ಪ್ರಭುಗಳು ಬಯಲಾದ ಕದಳಿಬನ-ಇವು ಬಸವ ಧರ್ಮದ ಸುಕ್ಷೇತ್ರಗಳು. ಅವುಗಳ ಅಭಿವೃದ್ಧಿಗಾಗಿ ಗಮನ ಹರಿಸಬೇಕು.

6. ಬಸವ ಧರ್ಮೀಯರು ಗೋತ್ರ-ಸೂತ್ರಗಳನ್ನು ಮನ್ನಿಸತಕ್ಕದ್ದಲ್ಲ ಒಪ್ಪತಕ್ಕದ್ದಲ್ಲ, ಹೇಳತಕ್ಕದ್ದಲ್ಲ.

ಇವಿಷ್ಟು ನಿರ್ಣಯಗಳಾದ ಮೇಲೆ ಬಸವ ದಳದ ಕರ್ತವ್ಯ ಕುರಿತು ನಡೆಸಿದ ಚಿಂತನೆಯಲ್ಲಿ ಸಕ್ರಿಯ ಕಾರ್ಯಕರ್ತರಿಗೆ ಸೂಚನೆ ನೀಡಲಾಯಿತು.

1. ಬಸವ ದಳವನ್ನು ವ್ಯಾಪಕವಾಗಿ ಸಂಘಟಿಸಬೇಕು. ಸದಸ್ಯರನ್ನು ಜಾತಿ ದೃಷ್ಟಿಯಿಂದ ತೆಗೆದುಕೊಳ್ಳದೆ, ಆಸಕ್ತಿಯ ದೃಷ್ಟಿಯಿಂದ ತೆಗೆದುಕೊಳ್ಳಬೇಕು.

2. ಸಾಮೂಹಿಕ ಪ್ರಾರ್ಥನೆ ಎಲ್ಲೆಡೆಯಲ್ಲಿ ನಡೆಸುವ ವ್ಯವಸ್ಥೆ ಮಾಡಬೇಕು. ಮತ್ತು ಎಲ್ಲ ಜಾತಿ ಮತ ಪಂಥಗಳವರಿಗೆ ಪ್ರವೇಶ ನೀಡಬೇಕು.

3. ಬಸವ ಜಯಂತಿ, ಬಸವ ಲಿಂಗೈಕ್ಯ ದಿನಾಚರಣೆಗಳನ್ನು ತಪ್ಪದೆ ನಡೆಸಬೇಕು.

4. ಮೂಢನಂಬಿಕೆ, ಅಂಧಃಶ್ರದ್ಧೆ ಪ್ರೋತ್ಸಾಹಿಸದೆ ಅನುಯಾಯಿಗಳನ್ನು ಬಸವ ಗುರುಪೂಜೆ, ಇಷ್ಟಲಿಂಗಪೂಜೆಯಲ್ಲಿ ಮಾತ್ರ ತೊಡಗಿಸಬೇಕು.

5. ಪ್ರತಿವರ್ಷಕ್ಕೊಮ್ಮೆ ಸಕ್ರಿಯ ಕಾರ್ಯಕರ್ತರು ಒಂದೆಡೆ ಸೇರಿ ಚಿಂತನ-ಮಂಥನ ನಡೆಸಬೇಕು.

ಹಲವಾರು ರೀತಿಯ ಆದರ್ಶಗಳನ್ನು ಮನದಲ್ಲಿ ತುಂಬಿಕೊಂಡು ಬಸವ ದಳದ ಕಾರ್ಯಕರ್ತರು ಊರಿಗೆ ಹೊರಡುವಾಗ 'ಶರಣರನ್ನು ಅಗಲುವ ಧಾವತಿಗಿಂತ ಮರಣವೇ ಲೇಸು' ಎಂಬ ಅಕ್ಕನ ವಾಣಿ ನೆನಪಿಗೆ ಬಂದಿತಷ್ಟೇ ಅಲ್ಲ, ಎಷ್ಟೋ ದಿವಸಗಳವರೆಗೆ ಗುರುವಾಣಿ ಕಿವಿಯಲ್ಲಿ, ಗುಣುಗುಣಿಸುತ್ತಿತ್ತು. ಇಂಥದೊಂದು ಶರಣರ ಸಮಾವೇಶ, ಭಕ್ತಿ-ಜ್ಞಾನಗಳ ಸಂಗಮದಲ್ಲಿ ಮೀಯಿಸುವ ಸಮಾವೇಶ ಎಂದು ಬಂದೀತೋ ಎಂದು ಕಾಯುವಂತಾಗಿದೆ.

ಪೂಜ್ಯ ಶ್ರೀ ಸದ್ಗುರು ಲಿಂಗಾನಂದ ಸ್ವಾಮಿಗಳವರ

*** ೫೫ ನೆಯ ವರ್ಧಂತ್ಯುತ್ಸವ ***

ಗಣೇಶ ಚವತಿಯಂದು ಜನ್ಮಿಸಿ, ಇಲ್ಲಿಗೆ ೫೪ ವರುಷಗಳನ್ನು ದಾಂಟಿರುವ ವಿಶ್ವಕಲ್ಯಾಣ ಮಿಷನ್ ಸಂಸ್ಥೆಯ ಚೇರ್ಮನ್ನರು, ಅಪೂರ್ವ ಪ್ರವಚನಕಾರರೂ ಆದ

ಪರಮ ಪೂಜ್ಯ ಶ್ರೀ ಶ್ರೀ

ಸದ್ಗುರು ಲಿಂಗಾನಂದ ಸ್ವಾಮಿಗಳವರ

೫೫ ನೆಯ ವರ್ಧಂತಿ ಉತ್ಸವವನ್ನು ಬಸವ ಮಂಟಪದಲ್ಲಿ, ೧೮-೯-೮೫ ರಂದು ಆಚರಿಸಲಾಗುವುದು.

ಬೆಳಿಗ್ಗೆ ೧೦ ಗಂಟೆಗೆ ಪಾದಪೂಜಾ ಕಾರ್ಯಕ್ರಮ

ಸಂಜೆ ೬-೩೦ ಕ್ಕೆ ನುಡಿ ಕಾಣಿಕೆ ಸಮರ್ಪಣೆ ಕಾರ್ಯಕ್ರಮ

*** ಸರ್ವರಿಗೂ ಸುಸ್ವಾಗತ ***

ಕಲ್ಯಾಣ ಕಿರಣದ ಗೌರವ ಸದಸ್ಯರಲ್ಲಿ ಮನವಿ

ಕಲ್ಯಾಣ ಕಿರಣ ಮಾಸಪತ್ರಿಕೆಯನ್ನು ಹಲವಾರು ವರ್ಷಗಳಿಂದ ಸತತವಾಗಿ ಕೆಲವು ಗಣ್ಯರಿಗೆ, ಮಠಾಧೀಶರುಗಳಿಗೆ, ಸಾಹಿತಿಗಳಿಗೆ ಗೌರವ ಸದಸ್ಯರನ್ನಾಗಿ ಮಾಡಿಕೊಂಡು ಕಳಿಸುತ್ತಲೇ ಬರುತ್ತಿದ್ದೇವೆ. ಈಗಿನ ಕಾಲದಲ್ಲಿ ಏರುತ್ತಿರುವ ಬೆಲೆಗಳ ಮಧ್ಯದಲ್ಲಿ ಉಚಿತವಾಗಿ ನೂರಾರು ಪ್ರತಿಗಳನ್ನು ಕಳಿಸುವುದು ಕಷ್ಟಸಾಧ್ಯವಾದ ಕೆಲಸವೆಂದು ತಾವೆಲ್ಲರೂ ತಿಳಿಯುವುದು ಕಠಿಣವೇನಲ್ಲ. ಗೌರವ ಸದಸ್ಯರನ್ನಾಗಿ ನಾವು ಭಾವಿಸಿ ಕಳಿಸುತ್ತಿರುವ ಮಹನೀಯರಿಗೆ ಕಲ್ಯಾಣ ಕಿರಣದ ಆಜೀವ ಸದಸ್ಯತ್ವವಾದ ೨೦೦-೦೦ ಏನೂ ದೊಡ್ಡದಲ್ಲ. ಅಂಥವರ ಬಳಿಗೆ ಸ್ವತಃ ಯಾರನ್ನಾದರೂ ಹಣ ಕೇಳಲು ಕಳಿಸುವುದು ನಮಗೆ ಸಾಧ್ಯವಿಲ್ಲ, ಅವರಿಗೂ ಗೌರವಾರ್ಹವಲ್ಲ. ಕೆಲವು ಪತ್ರಿಕೆಗಳವರು ತಾವಾಗಿಯೇ ವಿಳಾಸ ಹುಡುಕಿ ಪತ್ರಿಕೆಗಳನ್ನು ಕೆಲವರಿಗೆ ಕಳಿಸಿ, ನಂತರ ಚಂದಾ ಹಣಕ್ಕಾಗಿ ಕೇಳುವುದು; ಮಾತ್ರವಲ್ಲ ಅವರ ಹೆಸರನ್ನು ಬಾಕಿದಾರರೆಂದು ಪತ್ರಿಕೆಯಲ್ಲಿ ಪ್ರಕಟಿಸುವರು.

ಇಂಥ ಬಗೆ ನಮ್ಮದಲ್ಲ. ನಾವು ತಮ್ಮ ಮೇಲೆ ವಿಶ್ವಾಸ-ಅಭಿಮಾನವಿಟ್ಟು ಸ್ವಯಂ ಪ್ರೇರಣೆಯಿಂದ ಪತ್ರಿಕೆ ಕಳಿಸುವ ಕಾರಣ, ತಾವೂ ಅದೇ ವಿಶ್ವಾಸ ಮತ್ತು ಪ್ರೇರಣೆಯಿಂದ ಹಣ ಕಳಿಸಿದರೆ ನಮಗೆ ನೆಮ್ಮದಿ. ಆದ್ದರಿಂದ ಈ ಪ್ರಕಟಣೆಯ ಮೂಲಕ ಗೌರವಚಂದಾದಾರರಾಗಿರುವವರಿಗೆ ವಿನಂತಿಸಿಕೊಳ್ಳುತ್ತಿದ್ದೇವೆ. ದಯವಿಟ್ಟು ೨೦೦-೦೦ ಕಳಿಸಿ, ಆಜೀವ ಸದಸ್ಯರಾಗಿ ಸಹಕರಿಸಿರೆಂದು ವಿನಂತಿಸುತ್ತೇವೆ.

"ಕಲ್ಯಾಣ ಕಿರಣ" ವು ಅತ್ಯುತ್ತಮ ಮಧ್ಯವರ್ತಿಯಾಗಿ ತಲುಪಿಸುತ್ತಿದೆ. ಧಾರ್ಮಿಕ ಮೌಲ್ಯಗಳ ಸೌರಭ ಹೊತ್ತ ಮಂದ ಮಾರುತವಾಗಿ ಸುಳಿದಾಡುತ್ತದೆ. ಬಸವ ತತ್ತ್ವದ ಪ್ರತಿನಿಧಿಯಾಗಿ, ಸಹಸ್ರಾರು ಜನರ ಮನಸ್ಸನ್ನು ಜಾಗೃತಿಸುತ್ತಿದೆ. ಇಂಥ ಪತ್ರಿಕೆಗೆ ಚಂದಾದಾರರಾಗಿರಿ, ಮತ್ತು **ನಿಮ್ಮ ಬಂಧು-ಮಿತ್ರರನ್ನೂ ಚಂದಾದಾರರನ್ನಾಗಿ ಮಾಡಿರಿ.**

: ಶಿಬಿರಾರ್ಥಿಗಳಿಗೊಂದು ಸೂಚನೆ :

ಬೇರೆ ಊರುಗಳಿಂದ ಬರುವ ಶಿಬಿರಾರ್ಥಿಗಳು, ಮೆಜೆಸ್ಟಿಕ್ ಬಸ್ ಸ್ಟ್ಯಾಂಡಿನಲ್ಲಿ ಇಳಿದು, ಅಲ್ಲಿಂದ ಸಿಟಿಮಾರ್ಕೆಟ್ ಬಳಿಯ ಕಲಾಸಿಪಾಳ್ಯಂ ಬಸ್ ಸ್ಟ್ಯಾಂಡಿನಿಂದ ಸೀದಾ ಬಸವ ಗಂಗೋತ್ರಿಗೇ ಸಿಟಿಬಸ್ಸಿನಲ್ಲಿ ಬರಬಹುದು.

ಇಲ್ಲವೇ ಬೆಂಗಳೂರಿನ ರಾಜಾಜಿನಗರದ ಎರಡನೆಯ ಬ್ಲಾಕಿನ ನವರಂಗ್ ಟಾಕೀಸಿನ ಹತ್ತಿರದಲ್ಲಿರುವ ಬಸವ ಮಂಟಪಕ್ಕೆ ಬಂದಿಳಿದು, ನಂತರ ಬಸವ ಗಂಗೋತ್ರಿಗೆ ಬರಬಹುದು.

ಕಲ್ಯಾಣ ಕಿರಣ

ಮಾಸ ಪತ್ರಿಕೆ

ಸಂಸ್ಕೃತಿ, ಸಾಹಿತ್ಯ, ನೀತಿ, ಆಧ್ಯಾತ್ಮ ಮೌಲ್ಯಗಳ ಪ್ರಸಾರಕ್ಕೆ ಮೀಸಲಾದ ಪತ್ರಿಕೆ

ಗೌರವ ಸಂಪಾದಕರು :

ಪೂಜ್ಯ ಶ್ರೀ

ಜಗದ್ಗುರು ಮಾತೆ ಮಹಾದೇವಿ

ಸಂಪಾದಕರು :

ಶಿವರಾಜ ಪಾಟೀಲ

ಪ್ರಕಾಶಕರು :

ವಿಶ್ವಕಲ್ಯಾಣ ಮಿಷನ್ ಸಂಸ್ಥೆಯ ಪರವಾಗಿ ಪ್ರಕಾಶನ ಪಡಿಸುವವರು :

ಶಿವರಾಜ ಪಾಟೀಲ

ಕೇಂದ್ರ ಕಾರ್ಯಾಲಯ :

ಕಲ್ಯಾಣ ಕಿರಣ ಮಾಸಪತ್ರಿಕೆ

ಬಸವ ಗಂಗೋತ್ರಿ,

ಕುಂಬಳಗೋಡು - ೫೬೦೦೭೪

ಬೆಂಗಳೂರು-ಮೈಸೂರು ಹೆದ್ದಾರಿ ೨೧ ಕಿ.ಮೀ.

ಬೆಂಗಳೂರು ದಕ್ಷಿಣ ತಾಲ್ಲೂಕು,

ಬೆಂಗಳೂರು ಜಿಲ್ಲೆ

ದೂರವಾಣಿ : ೩೪

ಮುದ್ರಕರು :

ಸೋದರಿ ಲೋಹಿತಾದೇವಿ

ವಿಶ್ವಕಲ್ಯಾಣ ಮಿಷನ್ ಪರವಾಗಿ ಪ್ರಭುದೇವ ಮುದ್ರಣಾಲಯ, ಕುಂಬಳಗೋಡು.

ಚಂದಾ ವಿವರ :

ಬಿಡಿ ಸಂಚಿಕೆ	:	ರೂ.	೨-೦೦
ವಾರ್ಷಿಕ ಚಂದಾ	:	ರೂ.	೨೦-೦೦
ಆಜೀವ ಸದಸ್ಯತ್ವ	:	ರೂ.	೨೦೦-೦೦
ಪೋಷಕರು	:	ರೂ.	೫೦೦-೦೦
ಮಹಾಪೋಷಕರು	:	ರೂ.	೧೦೦೧-೦೦

ಪತ್ರಿಕೆಯು ಪ್ರತಿ ತಿಂಗಳ ದಿನಾಂಕ ಮೂರರಂದು ಪ್ರಕಟವಾಗುವುದು. ಲೇಖಕರು ಲೇಖನಗಳನ್ನು ೧೦ ನೇ ದಿನಾಂಕದೊಳಗ ಕಳಿಸಬೆಕ

ಪತ್ರಿಕೆಯ ಉದ್ದೇಶವಾದ ಧಾರ್ಮಿಕ ಸಾಂಸ್ಕೃತಿಕ ಎಲ್ಲಾ ಬಗೆಯ ತಾತ್ವಿಕ ವಿಚಾರಗಳ ಲೇಖನ, ಕಥೆ, ಕವನಗಳಿಗೆ ಸ್ವಾಗತವಿದೆ.

ಲೇಖನಗಳನ್ನು ಕಾಗದದ ಒಂದು ಮಗ್ಗುಲಿಗೆ ಸ್ಫುಟವಾಗಿ ಬರೆದಿರಬೇಕು. ಲೇಖಕರು ತಮ್ಮ ಹೆಸರು, ವಿಳಾಸಗಳನ್ನು ಸ್ಪಷ್ಟವಾಗಿ ತಿಳಿಸಬೇಕಲ್ಲದೆ, ಅನುವಾದ. ರೂಪಾಂತರ ಅಥವಾ ಸಾಧಾರಣ ಲೇಖನಗಳಾದರೆ ಅದನ್ನು ಸ್ಪಷ್ಟವಾಗಿ ತಿಳಿಸಿ, ಮೂಲ ಲೇಖಕರ ಮತ್ತು ಪ್ರಕಾಶಕರ ಹೆಸರನ್ನು ಕಾಣಿಸಬೇಕು.

ಅಸ್ವೀಕೃತ ಲೇಖನ ಬೇಕಾಗಿದ್ದಲ್ಲಿ ಮರಳಿಸಲು ಬೇಕಾದ ಅಂಚೆ ವೆಚ್ಚಕ್ಕೆ ಅವಶ್ಯಕವಿರುವ ಸ್ಟಾಂಪುಗಳನ್ನೂ ಕಳಿಸಬೇಕು. ಲೇಖನಗಳಲ್ಲಿ ಸೂಕ್ತ ಬದಲಾವಣೆ ಮಾಡಿಕೊಳ್ಳುವ ಅಧಿಕಾರ ಸಂಪಾದಕರಿಗಿದೆ.

ಚಂದಾ ಹಣ ಕೊಡದೆ ಇದ್ದವರು ಪತ್ರಿಕೆ ತಲುಪಿದ ತಕ್ಷಣ ಕಳಿಸಬೇಕು.

ಹೊಸ ಚಂದಾದಾರರು ೨೦-೦೦ ರೂ (ಇಪ್ಪತ್ತು ರೂಪಾಯಿ) ಎಂ.ಓ. ಮಾಡಬೇಕು. (ವಿ. ಪಿ. ಇಲ್ಲ) ಚಂದಾದಾರರು ತಮ್ಮ ಪತ್ರವ್ಯವಹಾರಗಳಲ್ಲಿ. ವಿಳಾಸದ ಮೊದಲಲ್ಲಿ ಬರೆದ ಚಂದಾ ಸಂಖ್ಯೆಯನ್ನು ನಮೂದಿಸಬೇಕು ವಿಳಾಸ ಬದಲಾವಣೆಗಳನ್ನು ತಿಳಿಸಬೇಕು. ಚಂದಾದಾರರಾದ ತಿಂಗಳಿಂದ ಮರುವರ್ಷದ ಆ ತಿಂಗಳವರೆಗೆ ಪತ್ರಿಕೆಗಳನ್ನು ಕಳಿಸಲಾಗುವುದು.

ಬಸವ — ಕಿರಣ

'ಕಲ್ಯಾಣ ಕಿರಣ' ವಿಶೇಷ ಸಂಚಿಕೆಯನ್ನು ಕುರಿತು

ಬಸವ ತತ್ತ್ವ ಪರಿಷತ್ತಿನ ನಾಲ್ಕನೆಯ ಸಮಾವೇಶವು ಅಕ್ಟೋಬರ ತಿಂಗಳಲ್ಲಿ ಜರುಗಲಿದ್ದು, ಇದರ ಅಂಗವಾಗಿ ಕಲ್ಯಾಣ ಕಿರಣದ ವಿಶೇಷ ಸಂಚಿಕೆಯಾಗಿ **"ಬಸವ ಕಿರಣ"** ಹೊರಬರುತ್ತಲಿದೆ. ಇದು ಗಾತ್ರದಲ್ಲಿ ದೊಡ್ಡದಿದ್ದು ಹೆಚ್ಚಿನ ಪುಟಗಳನ್ನು ಒಳಗೊಂಡು ಬರಲಿರುವದು.

ಆದ್ದರಿಂದ ಸೆಪ್ಟಂಬರ್ ತಿಂಗಳ ಸಂಚಿಕೆ – ಅಕ್ಟೋಬರ್ ಸಂಚಿಕೆ ಜೊತೆಗೂಡಿ ಬರಲಿವೆ. ಈ ಸಂಚಿಕೆಯು ಅಕ್ಟೋಬರ್‌ದಲ್ಲಿ ಓದುಗರ ಕೈಸೇರುವುದು. ಆದ್ದರಿಂದ ಸೆಪ್ಟಂಬರ್‌ನಲ್ಲಿ ಕಲ್ಯಾಣ ಕಿರಣಕ್ಕಾಗಿ ನಿರೀಕ್ಷಿಸಬಾರದೆಂದು ಈ ಮೂಲಕ ಮನವಿ ಮಾಡುತ್ತೇವೆ.

ವಿಶೇಷ ಸೂಚನೆ:— ಕಲ್ಯಾಣ ಕಿರಣದ ಆಜೀವ ಸದಸ್ಯರು, ಚಂದಾದಾರರು ಆಗಿರುವವರು ಅಕ್ಟೋಬರ್ ಶಿಬಿರದಲ್ಲಿ ಭಾಗವಹಿಸುತ್ತಿದ್ದರೆ, ಅವರು ತಮ್ಮೊಡನೆ ಚಂದಾ ನಂಬರ್ ತಂದರೆ ವಿಶೇಷ ಸಂಚಿಕೆಯನ್ನ ಕೈಯಲ್ಲಿಯೇ ಪಡೆಯಬಹುದು. ಏಕೆಂದರೆ ವಿಶೇಷ ಸಂಚಿಕೆಯು ದಿ|| ೧೩-೧೦-೮೫ ರಂದು ಬಿಡುಗಡೆ ಮಾಡಲ್ಪಟ್ಟು ನಂತರ ಅಂಚೆಗೆ ಹಾಕಲ್ಪಡುವುದು.

ಲೇಖನಗಳನ್ನು ಕುರಿತು :

"ಬಸವ ಕಿರಣ" ವಿಶೇಷ ಸಂಚಿಕೆಗೆ ಲೇಖನಗಳನ್ನು, ಶರಣರನ್ನು ಕುರಿತು ಕಥೆಗಳನ್ನು, ಪ್ರಬಂಧಗಳನ್ನು, ಜೀವನದಲ್ಲಿ ನಡೆದ ಭಕ್ತಿಯ ಘಟನೆಗಳನ್ನು, ಪ್ರವಚನ ಕೇಳಿದ ಪ್ರಭಾವ–ಪರಿಣಾಮ ಕುರಿತು, ಬರಹಗಳನ್ನು ಕಳಿಸುವುದಾದರೆ ಕಳಿಸಬಹುದು. ಆದಷ್ಟು ಶೀಘ್ರವಾಗಿ ಕಳಿಸಬೇಕು, ಸಕಾಲದಲ್ಲಿ ಬಂದರೆ ಮುದ್ರಿಸಲಾಗುವುದು. ತಡವಾಗಿ ಕೈ ಸೇರಿದರೆ ನಂತರದ ಸಂಚಿಕೆಗಳಲ್ಲಿ ಮುದ್ರಿಸಲಾಗುವುದು.

— ಸಂಪಾದಕರು, ಕಲ್ಯಾಣ ಕಿರಣ ಮಾಸಪತ್ರಿಕೆ

ಬಸವ ಕಿರಣ

"ಕಲ್ಯಾಣ ಕಿರಣ" ವಿಶೇಷ ಸಂಚಿಕೆ

ವಿಶ್ವಗುರು ಬಸವಣ್ಣನವರ ತತ್ತ್ವಗಳನ್ನು ಕುರಿತು ಅಭ್ಯಸಿಸಲು, ಚಿಂತನ-ಮಂಥನ ಅನುಷ್ಠಾನ ಮಾಡಲು ಮತ್ತು ಭಕ್ತಿಪಕ್ಷದ ಸಮ್ಮೇಳನ ನಡೆಸಲು ಬಸವ ತತ್ತ್ವ ಪರಿಷತ್ತನ್ನು 1980 ರಲ್ಲಿ ಉದ್ಘಾಟಿಸಲಾಯಿತು. ಬೆಂಗಳೂರಿನ ಬಸವ ಗಂಗೋತ್ರಿಯಲ್ಲಿ ಎರಡು ಬಾರಿ, ಬಸವ ಕಲ್ಯಾಣದಲ್ಲಿ ಮೂರನೆಯ ಬಾರಿ, "ಭಕ್ತಿ ಪಕ್ಷದ" ಸಮಾವೇಶ ಜರುಗಿ, ನಾಲ್ಕನೆಯ ಸಮಾವೇಶವನ್ನು 1985 ಅಕ್ಟೋಬರಿನಲ್ಲಿ ಕರೆಯಲಾಗಿದ್ದು, ಈ ಕಾರ್ಯಕ್ರಮದ ಅಂಗವಾಗಿ "ಕಲ್ಯಾಣ ಕಿರಣ" ದ ವಿಶೇಷ ಸಂಚಿಕೆಯೊಂದನ್ನು ಹೊರಡಿಸಲು ಯೋಚಿಸಲಾಗಿದೆ ಕಲ್ಯಾಣ ಕಿರಣದ ವಿಶೇಷ ಸಂಚಿಕೆಗೆ ಜಾಹಿರಾತುಗಳನ್ನು ಸಂಗ್ರಹಿಸುತ್ತಿದ್ದು ವಿವರಗಳು ಕೆಳಗಿನಂತಿವೆ

ವಿಶೇಷ ಸಂಚಿಕೆಯ ರಕ್ಷಾಕವಚ (ಎರಡು ಬಣ್ಣಗಳಲ್ಲಿ)

4ನೆಯ ಪುಟ	1500 ರೂ.
2ನೆಯ ಮತ್ತು 3ನೆಯ ಪುಟ	1000 ರೂ.
ವಿಶೇಷವಾಗಿ ಕಾಯ್ದಿರಿಸಿದ ಪುಟ	500 ರೂ.
ಒಳಪುಟಗಳು-ಒಂದು ಪೂರ್ಣಪುಟ	300 ರೂ.
ಅರ್ಧಪುಟ	200 ರೂ.

ವಿ. ಸೂ. . ಅರ್ಧಪುಟಕ್ಕಿಂತ ಕಡಿಮೆಯಾದ ಜಾಹಿರಾತನ್ನು ಸ್ವೀಕರಿಸುವುದಿಲ್ಲ.

ಪೂರ್ಣಪುಟ : 22 ಸೆಂ. ಮೀ. X 14 ಸೆಂ. ಮೀ.

ಅರ್ಧಪುಟ : 14 ಸೆಂ. ಮೀ. X 11 ಸೆಂ. ಮೀ.

ಜಾಹಿರಾತುಗಳ ಪೂರ್ಣವಿವರಗಳು ಪೂರ್ಣ ಮೊತ್ತದೊಡನೆ 10-9-85ಕ್ಕೆ ಮುಂಚೆ ಕೈ ಸೇರುವಂತಾಗಬೇಕು. ಬ್ಯಾಂಕ್ ಡ್ರಾಫ್ಟ್ ಮತ್ತು ಚೆಕ್ಕುಗಳನ್ನು,

BASAVA TATWA PARISHAT, BANGALORE

ಹೆಸರಿನಲ್ಲಿ ತೆಗೆಸಿ ಕೆಳಗಿನ ವಿಳಾಸಕ್ಕೆ ಕಳಿಸಬೇಕು.

ಸ್ವಯಂ ಇಚ್ಛೆಯ ಕಾಣಿಕೆ ಸಲ್ಲಿಸುವವರೂ ಸಲ್ಲಿಸಬಹುದು

ಬಸವ ತತ್ತ್ವ ಪರಿಷತ್ತು, ವಿಶ್ವ ಕಲ್ಯಾಣ ಮಿಷನ್,
ಬಸವ ಮಂಟಪ, 24, ಎರಡನೆಯ ಬ್ಲಾಕು, ಕಾರ್ಡ್‌ರೋಡ್, ರಾಜಾಜಿನಗರ,
ಬೆಂಗಳೂರು 560 010 ದೂರವಾಣಿ : 352335

KALYANA KIRANA OFFICE
"Basava Gangothri", Kumbalgod-560074
Bangalore - Mysore Highway (21 K.M.)
Bangalore South Taluk, Bangalore District